ಸಾಕೃರಾ

ಪ್ರೊ. ಸಾ.ಕೃ.ರಾ. - ಸಮಗ್ರ ಸಾಹಿತ್ಯ - ೩೦

ವೇದ ವಾಙ್ಮಯ
ಮತ್ತು
ಉಪನಿಷತ್ತುಗಳು

ವಿದ್ಯಾಲಂಕಾರ
ಪ್ರೊ|| ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ
ಬೆಂಗಳೂರು-11

ವೇದ ವಾಙ್ಮಯ
ಮತ್ತು
ಉಪನಿಷತ್ತುಗಳು

ವಿದ್ಯಾಲಂಕಾರ
ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ
ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ(ರಿ)
ಬೆಂಗಳೂರು ೫೬೦೦೧೧

Veda-vangmaya mattu Upanishattugalu, by Prof S. K. Ramachandra Rao, reprinted by Dr. S. R. Sudarshan for Surama Prakashana, the publication wing of the Prof S. K. Ramachandra Rao Memorial Trust ®, 305, 6th cross, I Block, Jayanagar, Bangalore 560011.
Phone: 080-26563957
E-mail: drsrsudarshan@gmail.com
Website: www.profskr.com

© Prof S. K. Ramachandra Rao Memorial Trust ®

First Edition: 1996
Second Edition: 2005
Third Edition: 2014

ISBN 978-93-84069-12-4

ಮುನ್ನುಡಿ

'ವೇದ ವಾಙ್ಮಯ ಮತ್ತು ಉಪನಿಷತ್ತುಗಳು' ಎಂಬ ಪುಸ್ತಕವನ್ನು ಮೊದಲು ಪ್ರಕಟಿಸಿದವರು ವೂಡೇ ಪ್ರತಿಷ್ಠಾನದ ಶ್ರೀ ಡಬ್ಲ್ಯೂ. ಎಚ್. ಪುಟ್ಟಯ್ಯನವರು, ೧೯೯೬ ರಲ್ಲಿ. ಇದರ ಪ್ರತಿಗಳು ಮುಗಿದನಂತರ 'ಅಂಕಿತ ಪುಸ್ತಕ'ದವರು ೨೦೦೫ ರಲ್ಲಿ ಈ ಪುಸ್ತಕವನ್ನು ಮರುಮುದ್ರಣ ಮಾಡಿದರು. ಈ ಆವೃತ್ತಿಯ ಪ್ರತಿಗಳೂ ಈಗ ಉಪಲಬ್ಧವಿಲ್ಲದಿರುವುದರಿಂದ ನಮ್ಮ ಸ್ಮಾರಕ ನಿಧಿಯು ಈ ಗ್ರಂಥದ ಮೂರನೆ ಆವೃತ್ತಿಯನ್ನು ಪ್ರಕಟಿಸಲು ಮುಂದಾಗಿದೆ.

ಪ್ರೊ. ಸಾ. ಕೃ. ರಾಮಚಂದ್ರ ರಾವ್ ಸ್ಮಾರಕ ನಿಧಿಯು ಈಗಾಗಲೆ ರಾಯರ ೨೯ ಕನ್ನಡ ಮತ್ತು ಇಂಗ್ಲೀಶ್ ಪುಸ್ತಕಗಳನ್ನು ಹೊರತಂದಿದೆ. ರಾಯರು ಕರ್ಣಾಟಕ ಸಂಗೀತದ ವಿಚಾರವಾಗಿ ಬರೆದ ಲೇಖನಗಳ ಮತ್ತು ಪುಸ್ತಕಗಳ ಸಂಕಲನವನ್ನು ಸದ್ಯದಲ್ಲೇ ಪ್ರಕಟಿಸುತ್ತಿದೆ. ೧೯೮೩ರಲ್ಲಿ ಶಾರದಾ ಪ್ರಕಾಶನ ಪ್ರಕಟಿಸಿದ 'ಈಶಾವಾಸ್ಯ ಉಪನಿಷತ್ತು' ಗ್ರಂಥವನ್ನು ಕೆಲವು ತಿಂಗಳ ಹಿಂದೆ ಮರುಮುದ್ರಣಮಾಡಿದೆ.

ಈ ಪುಸ್ತಕವನ್ನು ಸಮರ್ಪಕವಾಗಿ ಸ್ಕ್ಯಾನ್ ಮಾಡಿದ ಶ್ರೀ ಶ್ರೀಚಂದ್ ಅವರಿಗೆ ಮತ್ತು ಅಂದವಾಗಿ ಮುದ್ರಿಸಿದ 'ವಾಗರ್ಥ' ಅವರಿಗೆ ನನ್ನ ವಂದನೆಗಳು.

ಜಯ ಸಂವತ್ಸರ, ಸಾ. ರಾ. ಸುದರ್ಶನ
ವೈಶಾಖ ಪೂರ್ಣಿಮ
೧೪-೦೫-೨೦೧೪

ಲೇಖಕರ ಪರಿಚಯ



ಪ್ರೊ. ಸಾ. ಕೃ. ರಾಮಚಂದ್ರರಾಯರು (೧೯೨೫-೨೦೦೬) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್

ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಕಗಳನ್ನು, ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕ್ಯಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ' ಮತ್ತು 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕಗಳು ರಾಜ್ಯಸಾಹಿತ್ಯ ಅಕ್ಯಾಡಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರಾದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆ ಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.

ಲೇಖಕರ ಮಾತು
(ಮೊದಲ ಮುದ್ರಣಕ್ಕೆ ಬರೆದದ್ದು)

ವೂಡೇ ಪ್ರತಿಷ್ಠಾನದ ಸಂಸ್ಥಾಪಕರಾದ ಶ್ರೀ ಡಬ್ಲ್ಯೂ.ಎಚ್. ಪುಟ್ಟಯ್ಯನವರು ಈ ಪುಸ್ತಕವನ್ನು ಬರೆದುಕೊಡಬೇಕೆಂದು ಕೇಳಿದಾಗ ಒಲ್ಲೆನೆನ್ನಲಾಗಲಿಲ್ಲ. ಪುಟ್ಟಯ್ಯನವರು ಸಜ್ಜನರು, ಒಳ್ಳೆಯ ಕೆಲಸದಲ್ಲಿ ತೊಡಗಿರುವವರು. ಅವರ ದೊಡ್ಡಪ್ಪನವರಾದ ಸನ್ಮಾನ್ಯ ಹನುಮಂತಪ್ಪನವರನ್ನು ನನ್ನ ಚಿಕ್ಕಂದಿನಲ್ಲಿ ನೋಡಿದ ನೆನಪಿದೆ. ಅವರು ದಿಟವಾಗಿ ಪ್ರಾತಃಸ್ಮರಣೀಯರು. ನಾಡಿನ, ನಾಡಿನ ಜನರ ಹಿತಚಿಂತನೆಯನ್ನು ಹಚ್ಚಿಕೊಂಡವರು, ಅದಕ್ಕಾಗಿ ದುಡಿದು ಕೃತಾರ್ಥರಾದವರು. ಬೆಂಗಳೂರಿನ ಬ್ರಾಹ್ಮಸಮಾಜದ ಬೆನ್ನೆಲುಬು ಅವರೆ ಆಗಿದ್ದರು; ಒಂದು ಕಾಲಕ್ಕೆ ಬ್ರಾಹ್ಮಸಮಾಜಕ್ಕೂ ನನಗೂ ನಂಟಿದ್ದಿತು. ರಾಜಾ ರಾಮಮೋಹನರಾಯರನ್ನು ಕನ್ನಡ ಜನರಿಗೆ ಪರಿಚಯ ಮಾಡಿಸಿಕೊಟ್ಟವರು ಶ್ರೀ ಹನುಮಂತಪ್ಪನವರೇ ಎಂದರೆ ತಪ್ಪಲ್ಲ. ಅವರ ಉದಾರಮನೋಧರ್ಮ, ಸಾತ್ತ್ವಿಕ ಸ್ವಭಾವ, ಕರ್ಮಯೋಗಗಳ ವಿಚಾರವನ್ನು ನಾನು ಆಗಲೇ ಕೇಳಿದ್ದೆ. ಇಂಥವರ ಮನೆತನಕ್ಕೆ ಸೇರಿದ ಪುಟ್ಟಯ್ಯನವರು ನನ್ನನ್ನು ಇದೊಂದು ಸಣ್ಣ ಕೆಲಸ ಮಾಡೆಂದು ಹೇಳಿದಾಗ ಮಾಡದೆ ಇರುವುದು ಹೇಗೆ?

ಮೇಲಾಗಿ, ನನಗೆ ತುಂಬ ಪ್ರಿಯವಾದ ವಿಚಾರವೇ ಇದು, ಉಪನಿಷತ್ತುಗಳನ್ನು ಕುರಿತದ್ದು. ಇಂಥದೊಂದು ಅವಕಾಶ ದೊರಕಿತೆಂದು ಸಂತೋಷವೇ ಆಯಿತು. ಇದಕ್ಕೆ ನಾನು ಪುಟ್ಟಯ್ಯನವರಿಗೂ ಅವರ ಮಕ್ಕಳಾದ ಶ್ರೀ ಡಬ್ಲ್ಯೂ.ಪಿ. ಕೃಷ್ಣ ಅವರಿಗೂ ಕೃತಜ್ಞನಾಗಿರಬೇಕಾದದ್ದೇ. ಇಂಥ ಕೆಲಸವನ್ನು ಮಾಡಿಸುವವರು ಈ ಕಾಲಕ್ಕೆ ಬಹು ಜನರಿಲ್ಲ.

ಉಪನಿಷತ್ತುಗಳೇ ಪುಸ್ತಕದ, ಪುಸ್ತಕ ಮಾಲೆಯ ಪ್ರಧಾನ ವಿಷಯವಾದರೂ ಹಿನ್ನೆಲೆಯಾಗಿ ವೈದಿಕವಾಙ್ಮಯದ ಪರಿಚಯವನ್ನು ಕೊಂಚಮಟ್ಟಿಗೆ ಮಾಡಿಕೊಟ್ಟಿದ್ದೇನೆ.

ವೈದಿಕವಾಙ್ಮಯಕ್ಕೆ ಉಪನಿಷತ್ತುಗಳೇ ಕಲಶಪ್ರಾಯವಾದುವು. ಭಾರತೀಯ ದರ್ಶನದ ಪೂರ್ಣ, ನೈಜ ಸ್ವರೂಪವನ್ನೂ ಸ್ವಾರಸ್ಯವನ್ನೂ ಹೆಗ್ಗಳಿಕೆಯನ್ನೂ ನಾವು ಕಾಣುವುದು ಉಪನಿಷತ್ತುಗಳಲ್ಲೇ. ಆದರ ಪೂರ್ವಪೀಠಿಕೆಯ ಪರಿಚಯವು ಉಪನಿಷತ್ತುಗಳ ಹಿರಿಮೆಯನ್ನರಿತುಕೊಳ್ಳಲು ನೆರವಾಗುತ್ತದೆ.

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ವೇದವಾಙ್ಮಯ

೧

ವೇದವನ್ನು ಕುರಿತಂತೆ ಆಲೋಚನೆ ಮಾಡುವ ಜನರಲ್ಲಿ ಎರಡು ತೆರನಾದವರಿದ್ದಾರೆ. ವೇದವೆಂದರೆ ಯಾವುದೋ ಓಬೀರಾಯನ ಕಾಲದ ಅಡುಗೂಲಜ್ಜಿ ಕಥೆ, ಅದರಲ್ಲಿ ಸ್ವಾರಸ್ಯವೇನಿರದು; ಈಗಿನ ಕಾಲಕ್ಕಂತೂ ಅದರ ಪ್ರಸಕ್ತಿ ಏನೇನೂ ಇರದು ಎನ್ನುವವರೊಂದು ತೆರ. ವೇದವು ಪರಮಸತ್ಯ; ಅದರಲ್ಲಿ ಎಲ್ಲವೂ ಇದೆ. ನಮ್ಮ ವಿಜ್ಞಾನವಾಗಲಿ, ಸಂಶೋಧನೆಗಳಾಗಲೀ, ತಾಂತ್ರಿಕ ಜ್ಞಾನವಾಗಲೀ, ಕಲೆಯಾಗಲೀ, ಉದ್ಯಮವಾಗಲಿ ಏನನ್ನಾದರೂ ವೇದಕಾಲದ ಋಷಿಗಳು ತಿಳಿದಿದ್ದರು ಎಂದು ನಂಬುವವರಿನ್ನೊಂದು ತೆರ.

ಎರಡೂ ತೆರದ ಜನರು ವೇದವನ್ನು ನೋಡದವರು, ವೇದದ ನೇರವಾದ ಪರಿಚಯವನ್ನು ಪಡೆದುಕೊಳ್ಳದವರು, ವೇದವೆಂದರೆ ಏನೆಂದು ತಿಳಿಯದವರು. ನಮ್ಮ ಕಾಲದಲ್ಲಿ ಮಾತ್ರವಲ್ಲ, ಯಾವ ಕಾಲದಲ್ಲಾಗಲಿ ವೇದವನ್ನು ಬಲ್ಲವರ ಸಂಖ್ಯೆ ಕಡಮೆಯೇ. ಇದನ್ನು ಪತಂಜಲಿಮುನಿಗಳೇ ತಮ್ಮ ವ್ಯಾಕರಣ ಮಹಾಭಾಷ್ಯದಲ್ಲಿ ಸೂಚಿಸಿದ್ದಾರೆ. ವೇದವಾಙ್ಮಯ ಎಂದೂ ಜನಪ್ರಿಯವಾಗಿ, ಪ್ರಚಲಿತವಾಗಿದ್ದಂತೆ ತೋರುವುದಿಲ್ಲ. ಜನಜೀವನದಲ್ಲಿ ವೇದದ ಅವಲಂಬನೆ ಹೇಳಿಕೊಳ್ಳುವಂಥದೇನು ಆಗಿರಲಿಲ್ಲ.

ಈಗ ವೇದವೆಂದರೇನು ಎಂದು ಯಾರನ್ನಾದರೂ ಕೇಳಿದರೆ ಸಮರ್ಪಕವೆನಿಸುವ ಉತ್ತರವನ್ನು ನೀಡಲಾರರು. ಏನಾದರೊಂದು ಉತ್ತರ ಹೇಳಿದರೂ, ಎಲ್ಲರೂ ಒಂದೇ ಉತ್ತರವನ್ನಂತೂ ಕೊಡುವುದಿಲ್ಲ. ವೇದವನ್ನು ಅಷ್ಟಿಷ್ಟು ಓದಿದವರು ಕೂಡ ವೇದವೆಂದರೆ ಇದೇ, ಇಷ್ಟೇ ಎಂದು ಹೇಳಲಾರರು. ವೇದದ ಸ್ವರೂಪದಲ್ಲೇ ಇರುವ ವಿವರ ಇದು. ವೇದವೆಂದರೆ ಮುಖ್ಯವಾಗಿ ಒಂದು ಕಲ್ಪನೆ. ಪ್ರಮಾಣಭೂತ

ವಾದದ್ದು, ಪವಿತ್ರವೆನಿಸಿದ್ದು, ಮನನೀಯವಾದದ್ದು ಎಂಬಷ್ಟು ಭಾಗ ಕಲ್ಪನೆಯಲ್ಲಿ ಹಾಸುಹೊಕ್ಕಾಗಿ ಬರುತ್ತದೆ. 'ಅನಂತಾ ವೈ ವೇದಾಃ'—ಎಂದರೆ ವೇದಗಳಿಗೆ ಕೊನೆ ಮೊದಲಿಲ್ಲ ಎಂಬ ಮಾತಿದೆ. ಕ್ರೈಸ್ತರಿಗೆ ಬೈಬಲ್ ಇರುವಂತೆ, ಮುಸಲ್ಮಾನರಿಗೆ ಕುರಾನ್ ಇರುವಂತೆ ನಮಗೆ ವೇದ ಎಂದು ಹೇಳಲಾಗದು. ಬೈಬಲ್-ಕುರಾನ್‌ಗಳ ಸ್ವರೂಪಕ್ಕೂ ವೇದದ ಸ್ವರೂಪಕ್ಕೂ ತುಂಬ ಅಂತರವಿದೆ. ವೇದದ ಸ್ವರೂಪ ವೇದವೆಂಬ ಗ್ರಂಥವನ್ನವಲಂಬಿಸಿಲ್ಲ. ಕಲ್ಪನೆಯ ವೇದವೇ ಬೇರೆ, ಗ್ರಂಥಸ್ಥವಾದ ವೇದವೇ ಬೇರೆ. ಕಲ್ಪನೆ ಮುಖ್ಯವಾದದ್ದು, ಗ್ರಂಥ ಗೌಣವಾದದ್ದು.

ಆದ್ದರಿಂದ ವೇದವೆಂಬ ಮಾತಿನ ಜಾಡನ್ನು ಹಿಡಿದುಹೋದರೆ ಸ್ವಲ್ಪ ಮಟ್ಟಿಗೆ ಅನುಕೂಲವಾದೀತು. ವೇದವೆಂಬ ಸಂಸ್ಕೃತ ಮಾತಿಗೆ ಮೂಲ 'ವಿದ್' ಎಂಬ ಧಾತು; ತಿಳಿದುಕೊಳ್ಳುವುದು ಎಂದು ಧಾತುವಿನ ಅರ್ಥ. ವೇದವೆಂದರೆ ತಿಳಿವಳಿಕೆ. ಆದರೆ ಒಂದೇ ಧಾತುವಿಗೆ ಹಲವು ಅರ್ಥಗಳಿರುವುದು ಪ್ರಸಿದ್ಧವಾಗಿದೆಯಷ್ಟೆ. ವೇದವೆಂಬ ಮಾತಿಗೆ ಹೀಗೆ ಒದಗಿಬರುವ ಅನೇಕ ಅರ್ಥಗಳನ್ನು ವ್ಯಾಕರಣಕಾರಿಕೆ ವಿವರಿಸುತ್ತದೆ—

'ಸತ್ತಾಯಾಂ ವಿದ್ಯತೇ ಜ್ಞಾನೇ ವೇತ್ತಿಂ ವಿಂತೇ ವಿಚಾರಣೇ ।
ವಿಂದತೇ ವಿಂದತಿ ಪ್ರಾಪ್ತೌ ಶ್ಯನ್‌ಲುಕ್‌ಸ್ನಮ್ ಶೇಷ್ವಿದಂ ಕ್ರಮಾತ್ ॥

ಈ ಕಾರಿಕೆಯ ತಾತ್ಪರ್ಯವೇನೆಂದರೆ:

೧. ದಿವಾದಿಗಣದ 'ವಿದ್' ಧಾತುವಿಗೆ 'ಇರುವುದು', 'ಸ್ಥಿತಿ' ಎಂಬರ್ಥವಿದ್ದು ವೇದವು ನಿತ್ಯವಾದ ತಿಳಿವಳಿಕೆ; ಕಾಲದೇಶಗಳಿಂದ ಮಾರ್ಪಡುವುದಿಲ್ಲ;

೨. ಅದೇ ಗಣದ ಅದೇ ಧಾತುವಿಗೆ 'ತಿಳಿಯುವುದು' ಎಂಬರ್ಥವಿರುವುದರಿಂದ ವೇದವೆನ್ನುವುದು ಜ್ಞಾನಭಾಗ;

೩. 'ವಿದ್' ಎಂಬ ಧಾತುವಿಗೆ 'ವಿಚಾರಮಾಡುವುದು' ಎಂಬರ್ಥವೂ ಇದ್ದು ವೇದವೆಂದರೆ ಮೀಮಾಂಸವೆಂದಾಗುತ್ತದೆ.

೪. 'ವಿದ್ಲೃ' ಧಾತುವಿಗೆ 'ಪಡೆದುಕೊಳ್ಳುವುದು' (ಲಾಭೇ) ಎಂಬರ್ಥವಿದ್ದು ನಾಲ್ಕು ಪುರುಷಾರ್ಥಗಳನ್ನು (ಧರ್ಮ, ಅರ್ಥ, ಕಾಮ, ಮೋಕ್ಷ) ಪಡೆದುಕೊಳ್ಳಲು ನೆರವಾಗುವುದು ವೇದ.

ಹೀಗೆ ವೇದವೆಂದರೆ ತಿಳಿಯುವುದು, ವಿಚಾರಮಾಡುವುದು, ಬಳಸಿಕೊಳ್ಳುವುದು ಎಂಬರ್ಥಗಳೆಲ್ಲ ಹೊರಡುತ್ತವೆ. ತಿಳಿಯುವುದೆಂಬುದನ್ನು ಇನ್ನಷ್ಟು ಸ್ಪಷ್ಟಪಡಿಸಿ, ಪ್ರತ್ಯಕ್ಷದಿಂದಾಗಲಿ (ಎಂದರೆ ನಮ್ಮ ಇಂದ್ರಿಯಗಳನ್ನು ಬಳಸಿಕೊಂಡು), ಅನುಮಾನದಿಂದಾಗಲಿ (ನಮ್ಮ ಮನಸ್ಸನ್ನು, ಬುದ್ಧಿಶಕ್ತಿಯನ್ನು ಅವಲಂಬಿಸಿ) ಯಾವುದನ್ನು ತಿಳಿಯುವುದು ಸಾಧ್ಯವಾಗದೋ ಅದನ್ನು ವೇದ ತಿಳಿಸುತ್ತದೆ ಎಂದು ಸಾಯಣಾಚಾರ್ಯರು ಹೇಳಿದ್ದಾರೆ. ಅತೀಂದ್ರಿಯಾರ್ಥವನ್ನು ತಿಳಿಯಹೇಳುವುದು ವೇದವೆಂದಾಯಿತು.

ಆದರೆ ತಿಳಿವಳಿಕೆಯಿಂದ ಪಡೆದುಕೊಳ್ಳುವುದೂ ಆಗಬೇಕಲ್ಲ? ಇಲ್ಲಿ ಪುರುಷಾರ್ಥಗಳ ಕಲ್ಪನೆ ಬರುತ್ತದೆ. ಪುರುಷಾರ್ಥವೆಂಬ ಮಾತಿಗೆ ಮನುಷ್ಯರು ಬಯಸುವುದು (ಪುರುಷೈಃ ಅರ್ಥ್ಯತೇ), ಯಾವುದರಲ್ಲಿ ಮನುಷ್ಯರಿಗೆ ಆಸೆಯಿದೆಯೋ ಅದನ್ನು ಪಡೆದುಕೊಳ್ಳುವ ಬಯಕೆ ('ಯಸ್ಮಿನ್ ಪ್ರೀತಿಃ ಪುರುಷಸ್ಯ ತಸ್ಯ ಲಿಪ್ಸಾರ್ಥ ಲಕ್ಷಣಾಽವಿಭಕ್ತತ್ವಾತ್', ಪೂರ್ವಮೀಮಾಂಸಾಸೂತ್ರ, (೪,೧,೨) ಎಂಬರ್ಥವಿದೆ. ಸಾಮಾನ್ಯವಾಗಿ ಮನುಷ್ಯರೆಲ್ಲರಿಗೆ ಇರುವುದು ಮೂರು ಪುರುಷಾರ್ಥಗಳು—ಧರ್ಮ (ಚೆನ್ನಾಗಿ ಬದುಕಲು ನೆರವಾಗುವ ರೀತಿ-ನೀತಿಗಳ ಅರಿವು), ಕಾಮ (ಬಯಕೆಗಳನ್ನು ತೀರಿಸಿಕೊಳ್ಳುವುದು, ಸುಖಪಡುವುದು) ಮತ್ತು ಅರ್ಥ (ಸುಖಜೀವನಕ್ಕೆ ಬೇಕಾದ ಅನುಕೂಲಗಳು, ಹಣ ಮೊದಲಾಗಿ).

ಈ ಮೂರಲ್ಲದೆ ಕೆಲವರಿಗೆ ಮೋಕ್ಷವೆಂಬುದು ಪುರುಷಾರ್ಥವಾಗುತ್ತದೆ. ಈ ಸಂಸಾರದ ಜಂಜಾಟದಿಂದ ತಪ್ಪಿಸಿಕೊಳ್ಳುವುದು, ಪುನರ್ಜನ್ಮದಿಂದ ಪಾರಾಗುವುದು, ನಿತ್ಯಾನಂದವನ್ನು ಅನುಭವಿಸುವುದು ಮೋಕ್ಷವೆನಿಸಿಕೊಳ್ಳುತ್ತದೆ. ಮೇಲಿನ ಮೂರು ಪುರುಷಾರ್ಥಗಳ ಸ್ವರೂಪಕ್ಕಿಂತ ಇದು ತೀರ ಬೇರೆಯಾದುದರಿಂದ, ಆ ಮೂರರ ಗುಂಪಿನಲ್ಲಿ ಇದು ಸೇರುವುದಿಲ್ಲವಾದ್ದರಿಂದ ಇದನ್ನು 'ಅಪವರ್ಗ' ಎಂದೂ ಕರೆದರು.

ವೇದವನ್ನು ವಿಚಾರಮಾಡುವ ಮೀಮಾಂಸಕರು ಮೊದಲಿಗೆ ಇದನ್ನು ಸ್ವರ್ಗವೆಂದೇ ನಿರ್ದೇಶಿಸಿದರು. ಜೈಮಿನಿಯ ಸೂತ್ರದಲ್ಲಾಗಲಿ, ಶಬರಸ್ವಾಮಿಯ ಭಾಷ್ಯದಲ್ಲಾಗಲಿ ಮೋಕ್ಷವೆಂಬ ಮಾತು ಬರುವುದಿಲ್ಲ. ಇವರಿಬ್ಬರ ಗ್ರಂಥಗಳಿಗೆ ಟೀಕೆಯನ್ನು ರಚಿಸಿದ ಕುಮಾರಿಲಭಟ್ಟರು ತಮ್ಮ 'ಟುಪ್ ಟೀಕೆ'ಯಲ್ಲಿ ಸ್ವರ್ಗವೆಂದರೆ

ಯಾವನೊಬ್ಬನಿಗೆ ಪ್ರಿಯವಾದದ್ದು ('ಏಕಸ್ಯ ಪ್ರೀತಿಃ ಸ್ವರ್ಗ ಶಬ್ದವಾಚ್ಯಾ') ಎಂದು ಹೇಳಿ ಪುನರ್ಜನ್ಮದ ದುಃಖವನ್ನು ನೀಗಿಸಿಕೊಳ್ಳುವುದೇ ಸ್ವರ್ಗವೆಂದರು. ಇನ್ನೊಬ್ಬ ಮೀಮಾಂಸಕರಾದ ಪ್ರಭಾಕರಮಿಶ್ರರು ತಮ್ಮ 'ಪ್ರಕರಣ ಪಂಚಿಕೆ'ಯಲ್ಲಿ, ಈ ದೇಹ ಬಿದ್ದು ಮತ್ತೊಂದು ದೇಹ ಬಾರದಿರುವುದು (ಆತ್ಯಂತಿಕಸ್ತು ದೇಹೋಚ್ಛೇದಃ) ಎಂದು ಸೂಚಿಸಿದರು.

ಇದು ಹೇಗಾದರಿರಲಿ; ಈ ದೇಹದಿಂದ ಇಲ್ಲಿ, ನಾವು ಹಿಡಿಯಬೇಕಾದುದು ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳನ್ನು. ಇವುಗಳಿಗೂ ವೇದಕ್ಕೂ ಸಂಬಂಧವೇನು? ವೇದವು ಮೂರನ್ನೂ ತಿಳಿಯಹೇಳುವುದೇ? ಪ್ರಸಿದ್ಧ ಮೀಮಾಂಸಕರಾದ ಕುಮಾರಿಲಭಟ್ಟರು ಇಲ್ಲವೆನ್ನುತ್ತಾರೆ. ಅರ್ಥ, ಕಾಮಗಳನ್ನು ಲೋಕವ್ಯವಹಾರದಿಂದಲೇ ನಾವು ಅರಿತುಕೊಳ್ಳುತ್ತೇವೆ, ನಿರ್ವಹಿಸಿಕೊಳ್ಳುತ್ತೇವೆ. ಅವುಗಳ ಪೂರ್ತಿಕೆಗೆ ವೇದದ ನೆರವು ಬೇಕಾದುದಿಲ್ಲ. ಆದರೆ ಧರ್ಮವೆಂಬುದು ನಮ್ಮ ವ್ಯವಹಾರದಿಂದ, ಇಂದ್ರಿಯಗಳಿಂದ, ಯುಕ್ತಿಯಿಂದ ಸಿದ್ಧವಾಗುವುದಿಲ್ಲ. ಅದನ್ನು ವೇದವೇ ತಿಳಿಸಿಕೊಡಬೇಕು. ಮೋಕ್ಷವೂ ಹಾಗೆಯೇ, ವೇದದಿಂದಲೇ ಸಿದ್ಧವಾಗಬೇಕು.

'ಯಾವದ್ಧರ್ಮಮೋಕ್ಷಸಂಬಧಿ ತದ್ವೇದಪ್ರಭವಂ ।
ಯತ್ತ್ವರ್ಥಸುಖವಿಷಯಂ ತಲ್ಲೋಕವ್ಯವಹಾರಮಿತಿ ವಿವೇಕ್ತವ್ಯಂ॥'

(ತಂತ್ರವಾರ್ತಿಕ ೧,೩,೧)

ಮೋಕ್ಷದ ಮಾತನ್ನು ಸದ್ಯಕ್ಕೆ ಬಿಡೋಣ. ಧರ್ಮವನ್ನು ತಿಳಿಸುವುದೇ ವೇದ ಎಂಬ ಧ್ವನಿ ಹೊರಡುತ್ತದೆಯಲ್ಲವೇ? ಧರ್ಮವನ್ನು ತಿಳಿಯಪಡಿಸುವುದು, ಧರ್ಮವನ್ನು ಪಡೆದುಕೊಳ್ಳಲು ನೆರವಾಗುವುದು, ಧರ್ಮವನ್ನು ಕುರಿತಂತೆ ವಿಚಾರ ಮಾಡುವುದು ವೇದದಿಂದ ನಾವು ನಿರೀಕ್ಷಿಸುವ ಪ್ರಯೋಜನಗಳು. 'ವಿದ್', 'ವಿದ್ಲೃ' ಧಾತುಗಳಿಗಿರುವ ಅರ್ಥ ಇಷ್ಟಕ್ಕೇ ಸೀಮಿತವಾಗಿದೆಯೆಂದಾಯಿತು. ಈ ಧರ್ಮವೆಂಬುದೇ ವೇದಾರ್ಥ, ವೇದದ ತಾತ್ಪರ್ಯ ಮತ್ತು ಪ್ರಯೋಜನ ಎಂದು ಮೀಮಾಂಸಕರು ನಂಬುತ್ತಾರೆ. ('ಧರ್ಮಶಬ್ದಶ್ಚ ವೇದಾರ್ಥಪರಃ', ಪ್ರಭಾಕರಮಿಶ್ರರ ಬೃಹತೀ). ಮೀಮಾಂಸಾಶಾಸ್ತ್ರವು ವಿಚಾರ ಮಾಡಬೇಕಾದುದು ಧರ್ಮವನ್ನು ಕುರಿತೇ ('ತಸ್ಮಾದ್ಧರ್ಮ ಇತ್ಯೇವ ಶಾಸ್ತ್ರ ವಿಷಯಃ', ಪಾರ್ಥಸಾರಥಿಮಿಶ್ರರ

ಶಾಸ್ತ್ರದೀಪಿಕೆ). ಆದ್ದರಿಂದಲೇ ವೇದಾರ್ಥವನ್ನು ವಿಚಾರಮಾಡಲು ಹೊರಟ ಮೀಮಾಂಸಾಶಾಸ್ತ್ರವು ಧರ್ಮಜಿಜ್ಞಾಸೆಯೆನಿಸಿಕೊಂಡಿದೆ.

ಧರ್ಮವೆಂದರೇನು? ಬದುಕಿನಲ್ಲಿ ನಾವು ಕಾಲು ಜಾರುವಂತಾದಾಗ, ಎಡವಿ ಬೀಳುವಂತಾದಾಗ, ನಮಗೆ ಆಸರೆಯಾಗಿ ನಿಂತು, ನಾವು ಕಾಲುಜಾರದಂತೆ, ಬೀಳದಂತೆ ನಮ್ಮನ್ನು ಹಿಡಿದೆತ್ತಿ ನಿಲ್ಲಿಸುವುದು ಧರ್ಮವೆಂಬ ಮಾತಿಗೆ ಮೂಲಾರ್ಥ (ಧೃಜ್ ಧಾರಣೇ). ಅಭ್ಯುದಯಕ್ಕೆ ನೆರವಾಗುವುದು ಧರ್ಮ, ಶ್ರೇಯಸ್ಕರವಾದುದು ಎಂಬ ವಿವರಣೆಯಿದೆ ('ಯತೋಽಭ್ಯುದಯನಿಃಶ್ರೇಯಸ ಸಿದ್ಧಿಃ ಸ ಧರ್ಮಃ', ವೈಶೇಷಿಕ ಸೂತ್ರ).

ಧರ್ಮವೆಂಬ ಕಟ್ಟುಪಾಡನ್ನು ಒಪ್ಪಿಕೊಳ್ಳುವವರು ಆಸ್ತಿಕರು. ಇವರೆಲ್ಲರೂ ವೇದದ ಪ್ರಾಮಾಣ್ಯವನ್ನು ಅಂಗೀಕರಿಸುತ್ತಾರೆ. ಏಕೆಂದರೆ ವೇದದ ಹಿನ್ನೆಲೆಯಿಲ್ಲದೆ ಧರ್ಮವು ತೋರಿಕೊಳ್ಳಲಾರದು, ವೇದದ ಬಲವಿಲ್ಲದೆ ಅದು ನಮ್ಮನ್ನು ಅಭ್ಯುದಯದತ್ತ ನಡೆಸಲಾಗದು. ಇನ್ನು ಸಾಂಖ್ಯಯೋಗ, ನ್ಯಾಯ, ವೇದಾಂತ, ಮೀಮಾಂಸಾ ದರ್ಶನಗಳೂ ವೇದಪ್ರಾಮಾಣ್ಯವನ್ನು ಒಪ್ಪಿಕೊಂಡೇ ಮುಂದುವರಿಯುತ್ತವೆ; ಅವುಗಳಿಗೂ ಧರ್ಮವೆಂಬುದು ಮಾನ್ಯವೇ ತಾನೇ? ಧರ್ಮದ ಕಲ್ಪನೆಯಿಲ್ಲದೆ ಸದಾಚಾರವಿಲ್ಲ. ಸದಾಚಾರವಿಲ್ಲದೆ ಕರ್ಮಕ್ಕಾಗಲಿ, ಜ್ಞಾನಕ್ಕಾಗಲಿ ಅಧಿಕಾರವಿಲ್ಲ. ಅಧಿಕಾರವಿಲ್ಲದವನಿಗೆ ಅಭ್ಯುದಯವೂ ಇಲ್ಲ, ನಿಃಶ್ರೇಯಸವೂ ಇಲ್ಲ.

೨

ಈಗ ವೇದವೆಂದರೆ ಏನೆಂದು ಹೇಳಿದಂತಾಯಿತು? ಧರ್ಮದ ಸ್ವರೂಪವನ್ನೂ ಅಗತ್ಯವನ್ನೂ ತಿಳಿಯಹೇಳಿ, ಅದನ್ನು ಬದುಕಿನಲ್ಲಿ ಪಡೆದುಕೊಳ್ಳುವ ಬಗೆಯನ್ನು ತೋರಿಸುವುದು ವೇದ ಎಂದಷ್ಟು ಹೇಳಿದಂತಾಯಿತು. ವೇದದ ಸ್ವರೂಪವೇನು ಎಂದೇನು ಹೇಳಿದಂತಾಗಲಿಲ್ಲವಲ್ಲ? ಈಗಿನ ಬಹುಜನರ ಎಣಿಕೆಯಲ್ಲಿ ವೇದವೆಂದರೆ ಋಗ್ವೇದ, ಯಜುರ್ವೇದ ಮೊದಲಾದ ನಾಲ್ಕು ಗ್ರಂಥಗಳು ಎಂಬುದು ಬೇರೂರಿಬಿಟ್ಟಿದೆ. ಆದರೆ ವೇದದ ಪ್ರಾಚೀನ ಪ್ರಸ್ತಾಪಗಳಲ್ಲೆಲ್ಲ ವೇದವೆಂಬ ಮಾತನ್ನು ಏಕವಚನದಲ್ಲೇ ಬಳಸಲಾಗಿದೆ. ಭರ್ತೃಹರಿಯ ವಾಕ್ಯಪದೀಯದಲ್ಲಿ ವೇದವೆಂಬುದು ಒಂದೇ ಎಂದು ಮತ್ತೆ ಮತ್ತೆ ಮಾತು ಬರುತ್ತದೆ.

ಮಹೀಧರನ ಶುಕ್ಲಯಜುಃಸಂಹಿತಾಭಾಷ್ಯದಲ್ಲಿ ಮತ್ತು ಉವ್ವಟ ಭಾಷ್ಯದಲ್ಲಿ ಬ್ರಹ್ಮಪರಂಪರೆಯಿಂದ ಬಂದ ಒಂದು ವೇದವನ್ನು ವೇದವ್ಯಾಸರು, ಮಂದಮತಿಗಳಾದ ಮನುಷ್ಯರನ್ನು ನೋಡಿ ಕರುಣೆಯಿಂದ ನಾಲ್ಕಾಗಿ ವಿಭಾಗಮಾಡಿ ಪೈಲ, ವೈಶಂಪಾಯನ, ಜೈಮಿನಿ, ಸುಮಂತುಗಳೆಂಬ ನಾಲ್ವರು ಶಿಷ್ಯರಿಗೆ ಕ್ರಮವಾಗಿ ಉಪದೇಶ ಮಾಡಿದರೆಂದೂ, ಅದು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಗಳಾಗಿ ಗ್ರಂಥಸ್ಥವಾದುವೆಂದೂ ಒಕ್ಕಣೆಯಿದೆ. ಯಾಸ್ಕರ ನಿರುಕ್ತಕ್ಕೆ ವ್ಯಾಖ್ಯಾನವನ್ನು ಬರೆದ ದುರ್ಗಾಚಾರ್ಯರು, ಒಂದೇ ವೇದವಾಗಿದ್ದುದು ಅತಿ ದೊಡ್ಡದು, ಅಧ್ಯಯನ ಮಾಡಲು ಕಷ್ಟವಾದದ್ದೂ ಆಗಿದ್ದುದರಿಂದ ಅದು ಸುಲಭವಾಗಿ ತಿಳಿಯುವಂತಾಗಲೆಂದು ವ್ಯಾಸರು ಶಾಖಾಭೇದಗಳನ್ನು ಮಾಡಿದರೆಂದು ಹೇಳಿದ್ದಾರೆ. ('ವೇದಂ ತಾವದೇಕಂ ಸಂತಂ ಅತಿ ಮಹತ್ವಾತ್ ದುರಧ್ಯೇಯಂ ಅನೇಕ ಶಾಖಾಭೇದೇನ ಸಮಾಮ್ನಾಸಿಷುಃ, ಸುಖಗ್ರಹಣಾಯ ವ್ಯಾಸೇನ ಸಮಾಮ್ನಾವಂತಃ').

ವೇದಗಳು ನಾಲ್ಕೆಂದು ಪ್ರಸಿದ್ಧವಾಗುವ ಮುಂಚೆ ವೇದಕ್ಕೆ 'ತ್ರಯೀ' ಎಂದೇ ಹೆಸರಿದ್ದು ಮೊದಲ ಮೂರೇ ವೇದಗಳೆಂದು ಎಣಿಕೆಯಿದ್ದಿತು. ಇಲ್ಲಿ ವೇದವನ್ನು ವಿಭಾಗಮಾಡಿದರೆಂದು ವ್ಯಾಸರ ಉಲ್ಲೇಖವೇನು ಇರದು. ಸ್ವರೂಪದಲ್ಲಿ ವೇದ ಒಂದೇ ಆದರೂ ವಿನಿಯೋಗದಲ್ಲಿ ಬೇರೆಬೇರೆಯಾಗುತ್ತದೆ. ವೇದಮಂತ್ರಗಳನ್ನು ಬಳಸಿಕೊಂಡೇ ಯಜ್ಞಯಾಗಾದಿಗಳನ್ನು ನಡೆಸಬೇಕಷ್ಟೆ. ಯಜ್ಞಯಾಗಾದಿಗಳಲ್ಲಿ ಮೂವರಾದರೂ ಪುರೋಹಿತರಿರಬೇಕು. ಅವರಿಗೆ ಋತ್ವಿಜರೆಂದು ಹೆಸರು. ಯಜ್ಞದಲ್ಲಿ ಪಾಲ್ಗೊಳ್ಳಲು ದೇವತೆಗಳನ್ನು ಬರಮಾಡಿಕೊಳ್ಳುವ ಮಂತ್ರಗಳನ್ನು ಪಠಿಸುವವನು ಹೋತೃ. ಅಗ್ನಿಯೆದುರು ಕೂತು ಆಜ್ಯ, ಚರು, ಪುರೋಡಾಶ ಮೊದಲಾದ ಹವಿರ್ಭಾಗವನ್ನು ಸಲ್ಲಿಸುವವನು ಅಧ್ವರ್ಯು. ಕೆಲವು ಸಂದರ್ಭಗಳಲ್ಲಿ (ಸೋಮಯಾಗದಲ್ಲಿ ಸೋಮಾಭಿಷವ ಮುಂತಾಗಿ) ವೇದ ಮಂತ್ರಗಳಲ್ಲಿ ಹಾಡುವವನು ಉದ್ಗಾತೃ. ಹೋತೃವಿನದು ಋಗ್ವೇದವೆಂದೂ, ಅಧ್ವರ್ಯುವಿನದು ಯಜುರ್ವೇದ ವೆಂದೂ, ಉದ್ಗಾತೃವಿನದು ಸಾಮವೇದವೆಂದೂ ನಿರ್ದಿಷ್ಟವಾಯಿತು.

ಸತ್ಯಾಷಾಢಸೂತ್ರದಲ್ಲಿ 'ತ್ರಿಭಿರ್ವೇದೈರ್ವಿಧೀಯತೇ' ಎಂಬ ಮಾತು ಬರುತ್ತದೆ. ಗೋಪಥ ಬ್ರಾಹ್ಮಣದಲ್ಲಿ (೨, ೨೪) 'ಋಗ್ವೇದಮೇವ ಹೋತಾರಂ ವೃಣೀಷ್ವ; ಯಜುರ್ವೇದಮಧ್ವರ್ಯುಂ, ಸಾಮವಿದಮುದ್ಗಾತಾರಂ' ಎಂದು ವಿಭಾಗವಿದೆ.

ಐತರೇಯಬ್ರಾಹ್ಮಣದಲ್ಲಿ (೧,೨,೧,೨೬) ಅಗ್ನಿಯದು ಋಗ್ವೇದವೆಂದೂ, ವಾಯುವಿನದು ಯಜುರ್ವೇದವೆಂದೂ ಆದಿತ್ಯನದು ಸಾಮವೇದವೆಂದೂ ವಿಂಗಡಣೆ ಯಿದೆ. ಆಪಸ್ತಂಬರು 'ಋಗ್ವೇವೇನ ಹೋತಾ ಕರೋತಿ ಯಜುರ್ವೇದೇನಾಧ್ವರ್ಯುಃ, ಸಾಮವೇದೋನೋದ್ಗಾತಾ, ಸರ್ವೈರ್ಬ್ರಹ್ಮಾ' ಎಂದಿದ್ದಾರೆ. ಐತರೇಯಬ್ರಾಹ್ಮಣವೂ (೫,೩೩) 'ಯದೃಚೈವ ಹೋತ್ರಂ ಕ್ರಿಯತೇ ಯಜುಷಾಧ್ವರ್ಯವಂ ಸಾಮ್ನೋದ್ಗೀಥಂ ವ್ಯಾರಬ್ಧಾತ್ರಯೀ ವಿದ್ಯಾ ಭವತಿ' ಎಂದು ಹೇಳುವಾಗ ಮೂರು ವೇದಗಳೆಂದೇ ಸೂಚನೆ.

ಈ ಮೂರುಮಂದಿ ಋತ್ವಿಜರಲ್ಲದೆ, ನಡೆಯುವ ಎಲ್ಲ ಕಲಾಪಗಳನ್ನೂ ನಿರೀಕ್ಷಿಸುತ್ತ ಕುಳಿತಿದ್ದು, ಎಲ್ಲವೂ ಸಮರ್ಪಕವಾಗಿ, ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದು, ಎಲ್ಲಿಯಾದರೂ ಲೋಪ-ದೋಷಗಳು ಒದಗಿದರೆ ಅವನ್ನು ಸರಿಪಡಿಸುತ್ತ, ಪ್ರಾಯಶ್ಚಿತ್ತಗಳನ್ನು ವಿಧಿಸುತ್ತ ಇರುವ ಇನ್ನೊಬ್ಬ ಋತ್ವಿಜ ಬ್ರಹ್ಮನೆನಿಸಿ ಕೊಳ್ಳುತ್ತಾನೆ. ಇವನಿಗೆ ಮೂರುವೇದಗಳ ಪರಿಚಯವಿರಬೇಕು. (ಸರ್ವೈರ್ಬ್ರಹ್ಮಾ). 'ಸ ಚ ವೇದತ್ರಯೋಕ್ತಸರ್ವಕರ್ಮಾಭಿಜ್ಞಃ' ಎಂದು ಸಾಯಣರ ವಿವರಣೆ. ಕಾಲಕ್ರಮದಲ್ಲಿ ಇವನನ್ನೇ ಅಥರ್ವವೇದದ ಪ್ರತಿನಿಧಿಯೆಂದರು, ನಾಲ್ಕು ವೇದಗಳೆಂಬ ಕಲ್ಪನೆ ವಾಡಿಕೆಯಾದಾಗ ('ಅಥರ್ವಾಂಗಿರೋವಿದಂ').

ಮೊದಲ ಮೂರು ವೇದಗಳಿಗೂ, ಅಥರ್ವವೇದಕ್ಕೂ ಸ್ವರೂಪದಲ್ಲೂ, ವಿನಿಯೋಗದಲ್ಲೂ ತುಂಬ ಭೇದವಿದೆ. ಮೊದಲ ಮೂರು ವೇದಗಳಲ್ಲಿ ಋಗ್ವೇದವೇ ಮೂಲವೆನ್ನಬಹುದು. ಉಳಿದೆರಡು ಅದಕ್ಕೆ ಹೊಂದಿಕೊಂಡು ಇರುವುದು (ತತ್ಪರಿಚರಣಾವಿತರೌ ವೇದೌ). ಋಗ್ವೇದ ಸ್ವರೂಪ ಋಚೆಗಳದ್ದು; ಋಕ್ ಎನ್ನುವ ಮಾತಿಗೆ ಸ್ತುತಿ, ಸ್ತೋತ್ರ ಎಂದರ್ಥ (ಋಚ ಸ್ತುತೌ, 'ಋಚ್ಯತೇ ಸ್ತೂಯತೇ ದೇವತಾ ಯಯಾ ಸಾ') ಋಗ್ವೇದದಲ್ಲಿರುವ ಮಂತ್ರಗಳು ಅರ್ಥಕ್ಕನುಗುಣವಾಗಿ ಪಾದವ್ಯವಸ್ಥೆಯನ್ನು ಹೊಂದಿವೆ (ಜೈಮಿನಿ, ೨,೧,೧೫ 'ತೇಷಾಂ ಋಕ್ ಯತ್ರಾರ್ಥವಶೇನ ಪಾದವ್ಯವಸ್ಥಾ'). ಯಜುರ್ವೇದ ಪ್ರಮುಖವಾಗಿ ಯಜ್ಞಕ್ಕೆ ಸಂಬಂಧಿಸಿದ್ದು. ಯಜುಸ್ಸೆಂದರೆ ಯಜ್ಞವೇ. ಋಗ್ವೇದದ ಅನೇಕ ಮಂತ್ರಗಳನ್ನು ಯಜ್ಞದಲ್ಲಿ ಬಳಸಿಕೊಳ್ಳುವದರಿಂದ ಯಜುರ್ವೇದದ ಸುಮಾರು ಭಾಗ ಋಗ್ವೇದದಿಂದ ಆಯ್ದುಕೊಂಡದ್ದೇ. ಇನ್ನು ಸಾಮವೇದದಲ್ಲಿರುವ ೧೫೪೯ ಮಂತ್ರಗಳಲ್ಲಿ ೭೫ನ್ನು ಬಿಟ್ಟರೆ ಉಳಿದೆಲ್ಲ ಋಗ್ವೇದ ಮಂತ್ರಗಳೇ.

ಈ ಮೂರು ವೇದಗಳ ವಿನಿಯೋಗ, ಯಜ್ಞಯಾಗಾದಿಗಳಲ್ಲಿ ನಿತ್ಯನೈಮಿತ್ತಿಕ ಕರ್ಮಗಳಲ್ಲಿ. ಅಥರ್ವವೇದವಾದರೆ ಹೀಗಲ್ಲ; ಯಜ್ಞಕ್ಕೂ ಅದಕ್ಕೂ ಸಂಬಂಧವಿರದು. ಅದರಲ್ಲಿ ಋಗ್ವೇದದ ಮಂತ್ರಗಳು ಕೆಲವಿವೆಯಾದರೂ, ಋಗ್ವೇದಮಂತ್ರಗಳಿಗಿಂತ ಪ್ರಾಚೀನವೆನ್ನಬಹುದಾದ ಹಲವು ಮಂತ್ರಗಳೂ ಇಲ್ಲಿವೆ. ದೇವತಾಸ್ತುತಿಯೆನಿಸಿಕೊಳ್ಳುವ ಭಾಗ ಕಡಮೆಯೇ. ತತ್ತ್ವ, ರಾಜಕಾರಣ, ಸಮಾಜ, ಜ್ಯೋತಿಷ, ಅಭಿಚಾರ (ಮಾಟ, ಮದ್ದು), ವೈದ್ಯ, ಮಣಿ, ಮಂತ್ರ, ಔಷಧ, ವೃಕ್ಷಲತಾಗುಲ್ಮ ಮೊದಲಾದ ಹಲವು ಇತರ ವಿಚಾರಗಳನ್ನೊಳಗೊಳ್ಳುತ್ತದೆ.

ನಾಲ್ಕು ವೇದಗಳು ಎಂದು ರೂಢಮೂಲವಾದಾಗ ಅಧ್ಯಯನಕ್ಕಾಗಿ ಋಗ್ವೇದ, ಯಜ್ಞಗಳಿಗಾಗಿ ಯಜುರ್ವೇದ, ಗಾನಕ್ಕಾಗಿ ಸಾಮವೇದ ಮತ್ತು ಅಭ್ಯುದಯಕ್ಕಾಗಿ ಅಥರ್ವವೇದ ಎಂದು ಬೇರೆಬೇರೆಯಾಗಿಯೂ ವಿನಿಯೋಗಗಳನ್ನು ಹೇಳಿದರು. ಒಂದೊಂದು ವೇದಕ್ಕೂ ಶಾಖೆಗಳು, ಪ್ರಾತಿಶಾಖ್ಯಗಳು ಮೊದಲಾಗಿ ವಿಭಾಗಗಳು ಒದಗಿದವು. ಇವೆಲ್ಲ ಗ್ರಂಥಸ್ಥವಾದವು. ವೇದವೆಂಬ ಸಾಹಿತ್ಯದಲ್ಲಿ ಸಂಹಿತೆ (ಮಂತ್ರಗಳನ್ನು ಸಂಗ್ರಹಿಸುವ ಭಾಗ), ಬ್ರಾಹ್ಮಣ (ಯಜ್ಞಯಾಗಾದಿಗಳನ್ನು ನಡೆಸಲು ಸಿದ್ಧವಾದ ಭಾಗ), ಆರಣ್ಯಕ (ಕಾಡಿನಲ್ಲಿ ಕೂತು ವೇದವಿಚಾರವಾಗಿ ನಡೆಸಿದ ಆಲೋಚನೆಗಳು) ಮತ್ತು ಉಪನಿಷತ್ತು (ರಹಸ್ಯಬೋಧನೆಗಳು, ತತ್ತ್ವವಿಚಾರ) ಎಂಬ ಹಂತಗಳು ತಲೆದೋರಿಕೊಂಡವು. ಒಂದೊಂದೇ ವೇದದಲ್ಲೂ ಈ ಭಾಗಗಳಿವೆ.

೩

ನಾವು ಮೊದಲು ಹೇಳಿದ ವೇದ ಒಂದು ಕಲ್ಪನೆ, ಅನಾದಿನಿತ್ಯವಾಗಿರುವ ವಾಙ್ಮಯ. ಆದರೆ ನಾಲ್ಕು ವೇದಗಳು, ವೇದಶಾಖೆಗಳು, ಸಂಹಿತೆಯೇ ಮೊದಲಾದ ವಿಭಾಗಗಳು ಎನ್ನುವಾಗ ಅವೆಲ್ಲ ಗ್ರಂಥಗಳು; ಮೊದಲು ವಾಚೋವಿಧೇಯವಾಗಿದ್ದು ಅನಂತರ ಯಾವುದೋ ಕಾಲದಲ್ಲಿ ಬರಹದಲ್ಲಿ ಮೂಡಿಕೊಂಡವು. ಅವನ್ನು ಅನಾದಿನಿತ್ಯವೆಂದು ಹೇಳುವುದು ಹೇಗೆ? ಇವೆರಡೂ ಒಂದೇ ಅಲ್ಲವೆಂಬುದನ್ನು ನಾವು ಗಮನಿಸಬೇಕು. ವೇದವು ಪ್ರಮಾಣವೆನ್ನುವಾಗ, ಅಪೌರುಷೇಯವೆನ್ನುವಾಗ,

ನಿತ್ಯವೆನ್ನುವಾಗ ಮೊದಲನೆಯ ವೇದಕಲ್ಪನೆಯನ್ನೇ ನಾವು ಹಿಡಿಯುವುದು; ಗ್ರಂಥಗಳನ್ನಲ್ಲ. ಭರ್ತೃಹರಿಯ 'ವಾಕ್ಯಪದೀಯ' ಇದನ್ನು ಎತ್ತಿ ತೋರಿಸುತ್ತದೆ.

ವೇದವಾಙ್ಮಯವನ್ನು ಆರ್ಷ ಸಂಪ್ರದಾಯವೆಂದು ಕರೆಯುತ್ತೇವೆ. ಋಷಿಗಳು ತಮ್ಮ ತಪಸ್ಸಿನಿಂದ, ಪ್ರತಿಭೆಯಿಂದ ಅಲೌಕಿಕ ಅನುಭವದ ಫಲವಾಗಿ ಕಂಡುಕೊಂಡ, ಅನುಭವಕ್ಕೆ ತಂದುಕೊಂಡ ತತ್ತ್ವಗಳನ್ನು ಮಾತಿನಲ್ಲಿ ಮೂಡಿಸಿದರು. ಬೇರೆಯವರಿಗೆ ತಿಳಿಯಹೇಳಿದರು. ಇದು ಅವರ ಯುಕ್ತಿಯ ಕೆಲಸವಲ್ಲ, ಬುದ್ಧಿಶಕ್ತಿಯ ಫಲವಲ್ಲ. ಮಂತ್ರಗಳನ್ನು ಅವರು ನೇರವಾಗಿ ಕಂಡುಕೊಂಡರೆಂದು ಪ್ರತೀತಿ. ಋಷಿಗಳು ಮಂತ್ರದ್ರಷ್ಟಾರರು, ಮಂತ್ರಕರ್ತೃಗಳಲ್ಲ. ವೇದವಾಙ್ಮಯವೆಂದರೆ ಯಾರೋ ಕೆಲವರು ಋಷಿಗಳ ರಚನೆಯಲ್ಲವೆಂಬ ಕಾರಣದಿಂದ ಅದು ಅಪೌರುಷೇಯ; ಪುರುಷಬುದ್ಧಿಯನ್ನು ಅವಲಂಬಿಸಿದ್ದಲ್ಲ.

ವೇದಮಂತ್ರಗಳಲ್ಲಿ ಅದಕ್ಕೆ ಕಾರಣನಾದವರೆಂದು ಋಷಿಗಳ ಹೆಸರುಗಳು ಬರುವುದಿಲ್ಲವೆ? ವೇದಶಾಖಾಕರ್ತೃಗಳೆಂದು ಕಠ, ಕುಥುಮ, ತಿತ್ತಿರಿ, ಪಿಪ್ಪಲಾದ ಮೊದಲಾದ ಮುನ್ನೂರು ಋಷಿಗಳಿಲ್ಲವೆ? ಹಾಗಿರುವಾಗ ವೇದವು ಅಪೌರುಷೇಯವೆನ್ನುವುದು ಹೇಗೆ? ಆ ಆಕ್ಷೇಪವನ್ನು ಜೈಮಿನಿ ಮಹರ್ಷಿಗಳೇ ಕಾಣಿಸಿದ್ದಾರೆ, (೧,೧,೬ ರಿಂದ ೧,೧,೨೩). ವೇದದ ಶಬ್ದ ಮತ್ತು ಅರ್ಥಗಳನ್ನು ಈ ಋಷಿಗಳು ಸೃಷ್ಟಿಮಾಡಲಿಲ್ಲ. ಅವರಿಗೆ ಮೊದಲೇ ಇದ್ದುವು. ಋಷಿಗಳಿಗೆ ಕಾಣಿಸಿಕೊಂಡ ತತ್ತ್ವ ಅನಾದಿನಿತ್ಯವಾದುದು, ಅವರ ಭಾವನೆಯ ಕೈಕೂಸಲ್ಲ. ಪತಂಜಲಿಗಳು ತಮ್ಮ ವ್ಯಾಕರಣಮಹಾಭಾಷ್ಯದಲ್ಲಿ ವೇದದ ಅರ್ಥವು ನಿತ್ಯ, ಆದರೆ ಅದನ್ನು ಬಣ್ಣಿಸುವ ಮಾತುಗಳು (ವರ್ಣಾನುಪೂರ್ವಿ) ಅನಿತ್ಯವೆಂದು ಹೇಳಿದ್ದಾರೆ. ('ಯದ್ಯಪ್ಯರ್ಥೋ ನಿತ್ಯಃ ಯಾತ್ವಸೌ ವರ್ಣಾನುಪೂರ್ವೀ ಸಾ ಅನಿತ್ಯಾ; ತದ್ಭೇದಾಚ್ಚೈತದ್ಭವತಿ ಕಾಠಕಂ ಕಾಲಾಪಕಂ ಮೌದಕಂ ಪೈಪ್ಪಲಾದಕಮಿತಿ').

ಅಪೌರುಷವಾದುದು ವೇದಗಳೆಂಬ ಗ್ರಂಥರಾಶಿಯಲ್ಲ, ಸಾಹಿತ್ಯವಲ್ಲ. ವೇದವೆಂಬ ಅಕ್ಷರರಾಶಿ, ವಾಙ್ಮಯ. ಋಷಿಗಳು ಬಳಸಿದ ಮಾತುಗಳು ಬೇರೆ ಬೇರೆಯಾದುದರಿಂದ ವೇದಶಾಖೆಗಳು ಬೇರೆಬೇರೆಯಾದವು. ಮಂತ್ರಗಳು ಋಷಿಗಳ ಹೆಸರಿನಲ್ಲೇ ಇವೆ. ಆದರೆ ಮಂತ್ರಕ್ಕೆ ಋಷಿಯು ಕಾರಣವೆನ್ನಲಾಗದು, ಅವನೊಂದು ನಿಮಿತ್ತ ಅಷ್ಟೇ. ಆದುದರಿಂದ ಮಂತ್ರದ ಮಾತೇ ಅರ್ಥಕ್ಕೆ ಆಧಾರ ಎನ್ನುವ

ಹಾಗಿಲ್ಲ. ಇಲ್ಲಿನ ಶಬ್ದಾರ್ಥಸಂಬಂಧ ಲೌಕಿಕವಾದ ಮಾತಿಗಿರುವಂತೆ ಅಲ್ಲ. ವೇದಮಂತ್ರಗಳಿಗೆ ರಹಸ್ಯಾರ್ಥವಿದೆಯೆಂದು ಸಂಪ್ರದಾಯ ಹೇಳುತ್ತದೆ. ಋಕ್ಕುಗಳನ್ನು ನಾವು 'ನಿಣ್ಯಾನಿ' (ರಹಸ್ಯ ಸ್ತೋತ್ರಗಳು) ಎಂದು ಕರೆಯುವುದು ಈ ಕಾರಣದಿಂದಲೇ. ನಿರುಕ್ತಕಾರರಾದ ಯಾಸ್ಕರಿಗೆ ಮೊದಲೇ ಶಾಕಪೂಣಿ ಮುಂತಾದವರು ವೇದಮಂತ್ರಗಳಲ್ಲಿರುವ ಅಪೌರುಷೇಯವಾದ ರಹಸ್ಯಾರ್ಥ ಏನೆಂಬುದನ್ನು ತಿಳಿಯಹೇಳಲು ಹೊರಟಿದ್ದರು. ಈಗ ಯಾಸ್ಕರ ನಿರುಕ್ತದ ನೆರವಿಲ್ಲದೆ ನಾವು ವೇದಮಂತ್ರಗಳ ಒಗಟನ್ನು ಬಿಡಿಸಲಾರೆವು.

ವೇದವಾಙ್ಮಯದಲ್ಲಿರುವ ಅಧಿಯಜ್ಞಾರ್ಥ (ಸ್ಕಂದಸ್ವಾಮಿ, ಸಾಯಣ ಇವರ ಭಾಷ್ಯಗಳಲ್ಲಿ), ಅಧಿದೈವತಾರ್ಥ (ವೆಂಕಟಮಾಧವ) ಮತ್ತು ಆಧ್ಯಾತ್ಮಿಕಾರ್ಥ (ಆನಂದತೀರ್ಥ) ಇವನ್ನು ನಾವು ತಿಳಿಯಬೇಕೆಂದರೆ ಆಯಾ ಭಾಷ್ಯ ಗ್ರಂಥಗಳನ್ನು (ಕಂಸಗಳಲ್ಲಿ ಕಾಣಿಸಿರುವವರ ರಚನೆಗಳನ್ನು ನೋಡಬೇಕಾಗುತ್ತದೆ.) ಎಲ್ಲ ವೇದದಲ್ಲೂ ಈ ಮೂರು ತೆರನಾದ ಅರ್ಥಗಳಿವೆಯೆಂದು ಸಂಪ್ರದಾಯ ವಿಶ್ವಾಸ ('ತ್ರಯೋಽರ್ಥಾಃ ಸರ್ವವೇದೇಷು'). ಈ ಅರ್ಥಗಳನ್ನು ಅನ್ವೇಷಣೆ ಮಾಡುವಾಗ ವೇದಸಾಹಿತ್ಯವನ್ನೇ ಅವಲಂಬಿಸುವುದು ಸಹಜವೆ; ಗ್ರಂಥಸ್ಥವಾಗಿರುವುದು ಇದೇ ತಾನೇ? ಅದರ ನೆರವಿಲ್ಲದೆ ಅಪೌರುಷೇಯವಾದ ವೇದವಾಙ್ಮಯವನ್ನು ನಾವು ಅರಿತುಕೊಳ್ಳುವುದಾದರೂ ಹೇಗೆ? ವೇದವಾಙ್ಮಯ ಆತ್ಮವಾದರೆ ವೇದಸಾಹಿತ್ಯ ಶರೀರ.

ವೇದಸಾಹಿತ್ಯವನ್ನು ಕಾಪಾಡಿಕೊಳ್ಳುವ ತವಕವೂ ನಮ್ಮವರಿಗಿದ್ದಿತು. ಪ್ರಾತಿಶಾಖ್ಯಗಳು, ಬೃಹದ್ದೇವತೆ, ಸರ್ವಾನುಕ್ರಮಣಿಕೆಗಳು, ಪದಪಾಠಗಳು ಇವೆಲ್ಲ ಹೊರಟದ್ದು ಈ ಕೆಲಸಕ್ಕೆ. ವೇದಾರ್ಥವನ್ನು ತಿಳಿಯಲು ನೆರವಾಗುವಂತೆ ಶಿಕ್ಷಾ, ಕಲ್ಪ, ನಿರುಕ್ತ, ಛಂದ, ವ್ಯಾಕರಣ, ಜ್ಯೋತಿಷಗಳೆಂಬ ವೇದಾಂಗಗಳು ಸಿದ್ಧವಾದವು. ಹಲವು ನಿರುಕ್ತಗಳೂ, ನಿಘಂಟುಗಳೂ ಮೂಡಿಕೊಂಡವು. ಭಾಷ್ಯಗಳಂತೂ ಸರಿಯೇ ಸರಿ. ಋಗ್ವೇದಕ್ಕೆ ಮಾಧವಭಟ್ಟ, ಸ್ಕಂದಸ್ವಾಮಿ (ಐದನೆಯ ಶತಮಾನ), ಉದ್ಗೀಥ, ವೆಂಕಟಮಾಧವ (ಹನ್ನೊಂದನೆಯ ಶತಮಾನ), ಆನಂದತೀರ್ಥ (೧೧೯೮-೧೨೭೦) ಇವರ ಭಾಷ್ಯಗಳೂ, ಯಜುರ್ವೇದಕ್ಕೆ ಉವ್ವಟ, ಮಹೀಧರ, ಗುಹದೇವ, ಭಟ್ಟಭಾಸ್ಕರ (ಹನ್ನೊಂದನೆಯ ಶತಮಾನ) ಇವರ ಭಾಷ್ಯಗಳೂ, ಸಾಮವೇದಕ್ಕೆ ಮಾಧವ, ಭರತಸ್ವಾಮಿ, ಗುಣವಿಷ್ಣು ಇವರ ಭಾಷ್ಯಗಳೂ

ಪ್ರಚಲಿತವಾಗಿವೆ. ಮೂರೂ ವೇದಗಳಿಗೆ ವಿಸ್ತಾರವಾದ ಭಾಷ್ಯಗಳನ್ನು ರಚಿಸಿದ ಸಾಯಣಾಚಾರ್ಯರು (೧೩೧೫-೧೩೮೭) ಪ್ರಸಿದ್ಧರೇ.

೪

ವೇದವೆಂಬ ಗ್ರಂಥರಾಶಿಯನ್ನು ಹಿಡಿದು ವಿಚಾರಮಾಡುವಾಗ, ವೇದವೆಂದರೇನು ಎಂಬ ಪ್ರಶ್ನೆಗೆ ಮಂತ್ರ-ಬ್ರಾಹ್ಮಣಾತ್ಮಕವಾದುದು ಎಂಬ ಉತ್ತರ ದೊರೆಯುತ್ತದೆ ('ಮಂತ್ರಬ್ರಾಹ್ಮಣಯೋರ್ವೇದನಾಮಧೇಯಂ'). ಮಂತ್ರವೆಂದರೆ ಮನನ ಮಾಡುವುದು, ಮನನಕ್ಕೆ ಕಾರಣವಾಗುವುದು, ಮನನಕ್ಕೆ ಆಧಾರವಾದುದು ('ಮಂತ್ರಾ ಮನನಾತ್', ನಿರುಕ್ತ, ೭,೩,೬). ಸಂಹಿತೆಯೆನಿಸಿಕೊಳ್ಳುವುದು ಈ ಮಂತ್ರಗಳ ಸೇರ್ಪಡೆ. ಒಂದೊಂದು ವೇದಮಂತ್ರಕ್ಕೂ ಋಷಿಯಿರುತ್ತಾನೆ. (ಮಂತ್ರದ್ರಷ್ಟಾರನಾದವನು), ದೇವತೆಯಿರುತ್ತದೆ (ಮಂತ್ರವಾಚ್ಯವಾದುದು, 'ಯಾ ತೇನೋಚ್ಯತೇ ಸಾ ದೇವತಾ'), ಛಂದಸ್ಸು (ಮಂತ್ರದ ಕಾವ್ಯರೂಪ, ಪದಬಂಧ) ಇರುತ್ತದೆ.

ಮಂತ್ರಗಳಲ್ಲಿ ದೇವತಾಸ್ತುತಿಯೋ, ದೇವತೆಯ ಆಮಂತ್ರಣವೋ, ದೇವತೆಯ ಆಕಾರಚಿಂತನೆಯೋ, ಋಷಿಯ ಪ್ರಶ್ನೆಯೋ, ಅದಕ್ಕೆ ಸಮಾಧಾನವೋ, ಯಾವುದಾದರೊಂದು ತತ್ತ್ವವಿಚಾರವೋ, ಋಷಿಯ ಅನುಭವವೋ ಪ್ರಸ್ತಾಪಕ್ಕೆ ಬರುತ್ತದೆ. ಇದರಲ್ಲಿ ಯಜ್ಞದ ಅಥವಾ ಅನುಷ್ಠಾನದ ಪ್ರಯೋಜನ ನೇರವಾಗಿ ಬರುವುದಿಲ್ಲವಾದ್ದರಿಂದ ವೇದಮಂತ್ರಗಳಿಗೆ ವಿನಿಯೋಗವನ್ನು ಹೇಳುವುದಿಲ್ಲವೆಂದು ಒಂದು ಮತ. ದೇವತೆಯ ವಿಚಾರವಾಗಿ ಬಹುವಾದ ಚರ್ಚೆ ನಡೆದಿದೆ. ಯಾಸ್ಕರ ಅಭಿಪ್ರಾಯದಂತೆ ದೇವತೆಯೆನ್ನುವುದು ಒಂದೇ, ಆದರೆ ಸ್ಥಾನವನ್ನು ಅಥವಾ ಕೆಲಸವನ್ನು ಗಮನಿಸಿ ಪೃಥ್ವೀಸ್ಥಾನ ದೇವತೆಗಳು (ಅಗ್ನಿ ಮೊದಲಾದವರು), ಅಂತರಿಕ್ಷಸ್ಥಾನ ದೇವತೆಗಳು (ವಾಯು ಅಥವಾ ಇಂದ್ರ ಮೊದಲಾದವರು) ಮತ್ತು ದ್ಯುಸ್ಥಾನ ದೇವತೆಗಳು (ಸೂರ್ಯ ಮೊದಲಾದವರು) ಎಂದು ವಿಭಾಗ ಮಾಡಬಹುದು. ಮಂತ್ರವೇ ದೇವತಾಸ್ವರೂಪವೆಂದೂ, ಮಂತ್ರದಿಂದಾಚೆ ಯಾವ ದೇವತೆಯೂ ಇಲ್ಲವೆಂದೂ, ಮಂತ್ರದ ಉಚ್ಚಾರಣೆಯಿಂದಲೇ ದೇವತೆಯ ಉತ್ಪತ್ತಿಯೆಂದೂ, ಮಂತ್ರದ ಶಕ್ತಿಗಾಗಿ ದೇವತೆಯೆಂಬ ಕಲ್ಪನೆಯೆಂದೂ ಬೇರೆ ಬೇರೆ ಅಭಿಪ್ರಾಯಗಳಿವೆ.

ಇನ್ನು ಬ್ರಾಹ್ಮಣವೆಂದರೆ ಯಜ್ಞಯಾಗಾದಿ ಕರ್ಮಗಳಿಗೆ ಸಂಬಂಧಿಸಿದ ವೇದಭಾಗ. ಬ್ರಹ್ಮವೆಂದರೆ ಯಜ್ಞ. ಅದನ್ನು ಕುರಿತದ್ದು ಬ್ರಾಹ್ಮಣ. ಬ್ರಾಹ್ಮಣಜಾತಿಗೂ ಬ್ರಾಹ್ಮಣಗಳೆಂಬ ಗ್ರಂಥಕ್ಕೂ ಸಂಬಂಧವಿಲ್ಲ. ಬ್ರಾಹ್ಮಣಗಳಲ್ಲಿ ವಿಧಿ, ಅರ್ಥವಾದಗಳೆಂದು ಎರಡು ಭಾಗಗಳಿವೆ. ವಿಧಿಯೆಂದರೆ ಕೆಲಸದಲ್ಲಿ (ಯಜ್ಞಯಾಗಾದಿ ಕರ್ಮಗಳಲ್ಲಿ) ತೊಡಗಿಸುವುದು ಎಂದರ್ಥ. ಇದೇ ದಿಟವಾಗಿ ಬ್ರಾಹ್ಮಣ (ಕರ್ಮಚೋದನಾ ಬ್ರಾಹ್ಮಣಾನಿ). ಇದರಲ್ಲಿ ಎರಡು ಬಗೆಗಳು. ಕೆಲವು ವಿಧಿಗಳು ಈವರೆಗೆ ನಾವು ಕೈಗೊಳ್ಳದಿದ್ದ ಕೆಲಸದಲ್ಲಿ ನಮ್ಮನ್ನು ತೊಡಗಿಸುವುವು (ಅಪ್ರವೃತ್ತ ಪ್ರವರ್ತನ ವಿಧಿ), ಮತ್ತು ಕೆಲವು ಈವರೆಗೆ ನಾವು ತಿಳಿಯದಿದ್ದುದನ್ನು ತಿಳಿಸುವುವು, ನೆನಪಿಗೆ ತಂದುಕೊಡುವುವು (ಅಜ್ಞಾತಾರ್ಥಜ್ಞಾಪನ ವಿಧಿ).

ವಿಧಿಯಲ್ಲದೆ ಇರುವ ಬ್ರಾಹ್ಮಣಭಾಗ ಅರ್ಥವಾದವೆನಿಸಿಕೊಳ್ಳುತ್ತದೆ. ('ಬ್ರಾಹ್ಮಣಶೇಷೋ ಅರ್ಥವಾದಃ', ಆಪಸ್ತಂಬ ಪರಿಭಾಷಾ, ೩೪,೩೫). ವಿಧಿಯ ಅರ್ಥವನ್ನು ವಿವರಿಸುವುದು, ವಿಧಿಯನ್ನು ಹೊಗಳುವುದು (ವಿಧಿವಾಕ್ಯ ಪ್ರಶಂಸೆ), ವಿಧಿಗೆ ಸಂಬಂಧಿಸಿದಂತೆ ಕತೆಗಳನ್ನು ಹೇಳುವುದು ಇವೆಲ್ಲ ಅರ್ಥವಾದ. ವಿಧಿಯನ್ನು ಹೇಳದೇ ಇರುವ ವೇದಭಾಗವೆಲ್ಲ ಅರ್ಥವಾದವೇ ಎಂದು ಕೆಲವರು ಮೀಮಾಂಸಕರ ಆಗ್ರಹ; ಇವರ ದೃಷ್ಟಿಯಲ್ಲಿ ಉಪನಿಷತ್ತುಗಳೂ ಅರ್ಥವಾದವೇ.

ವೇದವೆಂಬ ಗ್ರಂಥರಾಶಿಯನ್ನು ಹಿಂದಿನವರು 'ಮಂತ್ರಬ್ರಾಹ್ಮಣಾತ್ಮಕ'ವೆಂದು ನಿರ್ದೇಶಿಸಿದರಾದರೂ, ವೇದಸಂಹಿತೆಯೆಂದರೆ ಮಂತ್ರಭಾಗವಷ್ಟೇ ಸೇರುವುದು. ಬ್ರಾಹ್ಮಣಗ್ರಂಥಗಳನ್ನು ಬೇರೆಯಾಗಿಯೇ ಎಣಿಸುತ್ತಾರೆ. ಇವು ಮುಖ್ಯವಾಗಿ ಕರ್ಮಕಾಂಡಕ್ಕೇ ಸೇರುವಂಥ ಭಾಗ; ಕರ್ಮದ ಚೌಕಟ್ಟಿರದೆ ಇವಕ್ಕೆ ತಾತ್ಪರ್ಯವಿಲ್ಲ. ಬ್ರಹ್ಮವೆಂಬ ಮಾತಿಗೆ ಮಂತ್ರವೆಂಬ ಅರ್ಥವೂ ಇದೆಯೆಂದು ಹೇಳಿ, ಮಂತ್ರದ ವಿವರಣೆಯೇ ಬ್ರಾಹ್ಮಣವೆಂದು ಹೇಳುವುದೂ ಉಂಟು. ಆದರೆ ಬ್ರಾಹ್ಮಣವಾಕ್ಯಗಳಲ್ಲಿ ಮಂತ್ರದ ವಿವರಣೆಯನ್ನು ಕಾಣಲಾರೆವು. ಅನೇಕವೇಳೆ ಮಂತ್ರದ ದಾರಿಯೇ ಬೇರೆ, ಬ್ರಾಹ್ಮಣದ್ದೇ ಬೇರೆ.

ಮಂತ್ರದ ವಿಚಾರ ಹೇಳುವಾಗ, ಮಂತ್ರದ ಉಚ್ಚಾರಣೆಯಲ್ಲಿಯೇ ಶಕ್ತಿಯಿದೆಯೆಂದೂ, ಅರ್ಥ ತಿಳಿಯದಿದ್ದರೂ ಮಂತ್ರಪಾಠಮಾಡಿದರೆ ಸಾಕೆಂದೂ,

ಅದೇ ವೇದಾಧ್ಯಯನವೆಂದೂ ಕೆಲವರ ವಾದ. ತೈತ್ತಿರೀಯ ಆರಣ್ಯಕದಲ್ಲಿ (೨, ೨,೫) 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬ ವಿಧಿಯಿದೆಯಷ್ಟೇ. ಇಲ್ಲಿ ಸ್ವಾಧ್ಯಾಯವೆಂದರೆ ವೇದ, ಅಥವಾ ವೇದದ ಒಂದು ಶಾಖೆ. ಅದನ್ನು ಅಧ್ಯಯನ ಮಾಡಬೇಕೆಂದು ವಿಧಿ. ಈ ಅಧ್ಯಯನವಿಧಿಗೆ ಅರ್ಥವೇನು? 'ಪಾಠಮಾತ್ರ ಪರ್ಯವಸಾಯಿ' ಎಂಬ ಅರ್ಥವನ್ನು ಸಾಯಣರೇ ಸೂಚಿಸುತ್ತಾರೆ. ಆದರೆ ಅಷ್ಟೇ ಸಾಲದೆಂದೂ ಮಂತ್ರದ ಅರ್ಥವನ್ನೂ ಅರಿತುಕೊಳ್ಳಬೇಕೆನ್ನುವ ವಿಧಿಯಿದೆಯೆಂದೂ ಹೇಳುತ್ತಾರೆ. ('ಅರ್ಥಾವಬೋಧಸ್ತು ವಿಧ್ಯಂತರ ಪ್ರಯುಕ್ತಾಮಿತಿ ಸಿದ್ಧಂ; ತಸ್ಮಾದಧ್ಯಯನವದರ್ಥ ಜ್ಞಾನಸ್ಯಾಪಿ ವಿಹಿತತ್ವಾತ್').

ಒಣಗಿದ ಕಟ್ಟಿಗೆಯನ್ನು ಬೆಂಕಿಯಿರದ ಕಡೆ ಹಾಕಿದರೆ ಅದೇನು ಎಂದೂ ಸುಡಲಾರದು. ಹಾಗೆಯೇ ವೇದವನ್ನು ಆಚಾರ್ಯರಿಂದ ಕಲಿತು ಬರಿಯ ಪಾಠವೊಂದನ್ನೇ ಮತ್ತೆ ಮತ್ತೆ ಮಾಡುತ್ತಿದ್ದರೆ ಅದರಿಂದ ಅರ್ಥವೂ ತಾನಾಗಿ ಹೊರಡುವುದಿಲ್ಲ; ಅದು ತತ್ತ್ವವನ್ನೂ ತಿಳಿಸಿಕೊಡುವುದಿಲ್ಲ. ಪಾಠ ಮಾಡುವವನಿಗೆ ಅದರಿಂದ ಯಾವ ಪ್ರಯೋಜನವೂ ಇರದು. ಹೀಗೆಂದು ಸಾಯಣರು ತಿಳಿಸಿದ್ದಾರೆ. ('ಯದ್ವೇದವಾಕ್ಯಂ ಆಚಾರ್ಯಾದ್ ಗೃಹೀತಂ ಅರ್ಥಜ್ಞಾನರಹಿತಂ ಪಾಠರೂಪೇಣೈವ ಪುನಃ ಪುನರುಚ್ಚಾರ್ಯತೇ ತತ್ ಕದಾಚಿದಪಿ ನ ಜ್ವಲತಿ. ಸ್ವಾರ್ಥಂ ನ ಪ್ರಕಾಶಯತಿ. ಯಥಾ ಅಗ್ನಿರಹಿತ ಪ್ರದೇಶೇ ಪ್ರಕ್ಷಿಪ್ತಂ ಶುಷ್ಕಂ ಕಾಷ್ಠಾಂ ನ ಜ್ವಲತಿ ತದ್ವತ್'). ಅರ್ಥ ತಿಳಿಯದೆ ವೇದವನ್ನು ಉಚ್ಚರಿಸಿದ ಮಾತ್ರಕ್ಕೇ ಅದು ದಿಟವಾಗಿ ವೇದವೇ ಅಲ್ಲವೆಂದು ಒತ್ತಿ ಹೇಳುತ್ತಾರೆ. ('ತಥಾ ಸತಿ ತಸ್ಯ ವಾಕ್ಯಸ್ಯ ವೇದತ್ವಮೇವ ಮುಖ್ಯಂ ನ ಸ್ಯಾತ್').

ಯಾಸ್ಕರು ಕೂಡ ತಮ್ಮ ನಿರುಕ್ತದಲ್ಲಿ (೧,೧೮) ವೇದವನ್ನು ಓದಿ ಅರ್ಥವನ್ನು ತಿಳಿಯದಿದ್ದರೆ ಅಂಥವನು ಗಂಟನ್ನಿರಿಸಲು ಮಾತ್ರ ಬಳಕೆಗೆ ಬರುವ ಮರದ ಕೊಂಟಿನಂತೆ ಎಂದಿದ್ದಾರೆ.

'ಸ್ಥಾಣುರಯಂ ಭಾರಹರಃ ಕಿಲಾಭೂತ್
ಅಧೀತ್ಯ ವೇದಂ ನ ವಿಜಾನಾತಿ ಯೋಽರ್ಥಂ ।'

ಅರ್ಥವನ್ನು ಅರಿತುಕೊಳ್ಳುವ ಸಲುವಾಗಿಯೇ ಪಾಠ, ಅಧ್ಯಯನಗಳಿರುವುದು. ವೇದಕ್ಕೆ ಆಮ್ನಾಯವೆಂದೂ ಹೆಸರಿದೆ. ಈ ಮಾತಿಗೆ 'ಮ್ನ ಅಭ್ಯಾಸೇ' ಎಂಬ

ಮೂಲಾರ್ಥವಿದ್ದು, ಮತ್ತೆ ಮತ್ತೆ ಮಂತ್ರವನ್ನು ಮನಸ್ಸಿಗೆ ತಂದುಕೊಳ್ಳುವುದು ಎಂಬ ತಾತ್ಪರ್ಯ ಹೊರಡುತ್ತದೆ. ಜೈಮಿನಿಗಳೂ, ಯಾಸ್ಕರೂ ವೇದವನ್ನು 'ಆಮ್ನಾಯ' ಎಂದೋ, 'ಸಮಾಮ್ನಾಯ'ವೆಂದೋ ಕರೆಯುವಾಗ, ಎಡೆಬಿಡದೆ ಅರ್ಥಾನ್ವೇಷಣೆ ಮಾಡುವುದೇ ವೇದಾಧ್ಯಯನದ ಉದ್ದೇಶವೆಂದು ವಿವರಿಸುತ್ತಾರೆ.

೫

ವೇದವು ಭಾರತೀಯ ಸಂಸ್ಕೃತಿಗೆ ಬುನಾದಿಯಂತಿದೆ ಎಂದು ಹಲವರು ಹೇಳುವುದನ್ನು ಕೇಳಿದ್ದೀರಿ. ಈ ಮಾತೇನು ಉತ್ಪ್ರೇಕ್ಷೆಯಲ್ಲ. ವೇದವಾಙ್ಮಯದಲ್ಲಿ ಎದ್ದು ಕಾಣುವ ಆಧ್ಯಾತ್ಮಿಕತೆ ಭಾರತೀಯ ಸಂಸ್ಕೃತಿಯ ಮುಖ್ಯಲಕ್ಷಣವಾಗಿದೆ. ಈ ಆಧ್ಯಾತ್ಮಿಕತೆಯನ್ನು ವೇದದಲ್ಲಿನ ದೇವತಾಚಿಂತನೆಯಲ್ಲಿ ಕಾಣಬಹುದು. ವೇದಮಂತ್ರಗಳಲ್ಲಿ ಹಲವಾರು ದೇವತೆಗಳನ್ನು ಸ್ತುತಿಸಿರುವುದಿದೆ. ನೀರಿನ ಒಡೆಯನಾಗಿ ವರುಣ, ಮುಗಿಲಿನ ಮೋಡಗಳ ನಾಯಕನಾಗಿ ಇಂದ್ರ, ಮಳೆಯ ಅಧಿಪತಿಯಾಗಿ ಪರ್ಜನ್ಯ, ಬೀಸುವ ಗಾಳಿಯ ಚೇತನವಾಗಿ ವಾಯು, ಉರಿಯುವ ಬೆಂಕಿಯ ಜೀವವಾಗಿ ಅಗ್ನಿ, ಎಲ್ಲರನ್ನೂ ಹೆತ್ತು ಹೊತ್ತು ಕಾಪಿಡುವ ಭೂಮಿ ಇಂಥ ದೇವತೆಗಳೇ ನಮ್ಮೆದುರು ನಿಲ್ಲುವುದು. ಕಾಡು ಅರಣ್ಯಾನಿಯಾಗಿ, ಇರುಳು ರಾತ್ರಿಯಾಗಿ, ಮುಂಜಾನೆ ಉಷಸ್ಸಾಗಿ, ಗಿಡಮರಗಳು ವಾಸ್ತೋಷ್ಪತ್ತಿಯಾಗಿ ಕಾಣಸಿಕೊಳ್ಳುವ ದೇವತೆಗಳೇ. ಅಷ್ಟು ಮಾತ್ರವಲ್ಲ, ಸೋಮರಸವನ್ನು ಅರೆಯುವ ಕಲ್ಲೂ (ಗ್ರಾವ) ದೇವತೆಯೇ.

ಆದರೆ ಬರಿಯ ದೇವತೆಗಳ ಪ್ರಸ್ತಾಪದಿಂದ ಆಧ್ಯಾತ್ಮಿಕತೆ ಸಿದ್ಧವಾಗುವುದಿಲ್ಲ. ವೇದಮಂತ್ರಗಳು ದೇವತೆಗಳನ್ನು ಹೇಳುವಾಗ ಅವು ಎಲ್ಲಿಯೋ ದಿಟವಾಗಿ ಇರುವಂಥ, ಇದ್ದು ನಮ್ಮ ಪ್ರಾರ್ಥನೆಗಳನ್ನು ಕೇಳಿಸಿಕೊಳ್ಳುವಂಥ, ಕೇಳಿಸಿಕೊಂಡು ನಮಗೆ ಅನುಕೂಲವನ್ನು ಒದಗಿಸುವಂಥ ಪ್ರಾಣಿಗಳೆಂದು ನಂಬುವುದಿಲ್ಲ. ಇರುವ ದೈವ ಒಂದು, ಅದು ತೋರಿಕೊಳ್ಳುವ ಬಗೆಗಳು ಹಲವು (ಏಕಂ ಸತ್‌ವಿಪ್ರಾ ಬಹುಧಾ ವದಂತಿ) ಎಂಬ ಚಿಂತನೆಯೇನೋ ಸ್ಪಷ್ಟವಾಗಿದೆ. ಮಂತ್ರಗಳಲ್ಲಿ ಬರುವ ದೇವತೆಗಳೆಲ್ಲ ಮಂತ್ರಾತ್ಮರಷ್ಟೇ. ಮುಖ್ಯವಾದುದು ಮಂತ್ರವೇ. ಮಂತ್ರವು

ಸ್ತುತಿಯಾಗಿರುವಾಗ ಸ್ತೋತ್ರದಲ್ಲಿಯೇ ತಾತ್ಪರ್ಯವಿರುವುದು, ಸ್ತೋತ್ರದಲ್ಲಿಯೇ ಶಕ್ತಿಯಿರುವುದು. ದೇವತೆಯು ನೆಪಮಾತ್ರಕ್ಕೆ. ಪ್ರಯೋಜನವಾಗುವುದು ದೇವತೆಯಿಂದಲ್ಲ, ಮಂತ್ರದಿಂದಲೇ.

ಋಗ್ವೇದದ ಪ್ರಧಾನಕಲ್ಪನೆ ದೇವತೆಯದಲ್ಲ, ಋತವೆಂಬ ತತ್ತ್ವದ್ದು. ಋತವೆಂದರೆ ಎಲ್ಲಕ್ಕೂ ಆಧಾರವಾದ ಪ್ರಕೃತಿನಿಯಮ, ವಿಶ್ವಕ್ರಮ. ಸೂರ್ಯೋದಯ, ಅಹೋರಾತ್ರಿಗಳ ವಿಂಗಡಣೆ, ಋತುಚಕ್ರ, ಮಳೆಬೆಳೆ, ಪ್ರಾಣಕ್ರಿಯೆ, ನದಿಗಳು ಹರಿಯುವ ಬಗೆ, ಜನನ-ಮರಣ ಮುಂತಾಗಿ ಎಲ್ಲವೂ ಋತದ ಅಭಿವ್ಯಕ್ತಿಗಳೇ. ನಿಸರ್ಗದಲ್ಲಿ ಎಲ್ಲೆಲ್ಲೂ ಋತವೇ ಕಾಣುವುದು. ಮನುಷ್ಯನ ಧರ್ಮವೆಂಬ ಕಲ್ಪನೆಗೆ ಅಡಿಗಲ್ಲು ಋತವೇ. ಅದೇ ಸತ್ಯವೆಂದು ತೋರಿಕೊಳ್ಳುವುದು. ನೀತಿ ಸಂಹಿತೆಯ[illegible]ಗೆ ಋತದ ಅಂಶವೇ.

ಋಗ್ವೇದದ ದೇವತೆಗಳೆಲ್ಲ ಋತದ ಮಕ್ಕಳೆ, ಋತವನ್ನು ಕಾಪಿಡುವವರೇ. (೧,೧,೮; ೬,೩,೧; ೧,೧೬,೩) ವರುಣನು 'ಋತಸ್ಯಗೋಪಾ'; ಉಷಸ್ಸು 'ಋತಸ್ಯ ಯೋಷಾಃ'. ಋತವೆಂಬುದೇ ಯಜ್ಞಪ್ರಕ್ರಿಯೆಯ ಅಂತರಾರ್ಥ. ಋತವನ್ನು ಪಾಲಿಸುವುದೆಂದರೆ ಕತ್ತಲೆಯನ್ನು ತೊಲಗಿಸುವುದು, ದೌರ್ಜನ್ಯವನ್ನು ಅಡಗಿಸುವುದು, ಏರುಪೇರನ್ನು ಹತ್ತಿಕ್ಕುವುದು, ಮೋಸವನ್ನು ಕೊನೆಗಾಣಿಸುವುದು. ಇವೆಲ್ಲ ಅನೃತಗಳು. ದುಃಖಕ್ಕೆ ಕಾರಣವಾಗುವುದು ಅನೃತ. ಎಂದರೆ ಋತವಲ್ಲದ್ದು. (೧,೧೫೨,೨; ೨,೨೭,೨; ೮,೧೮,೧೫ ಇತ್ಯಾದಿ).

ದೇವತೆಗಳೆಂದರೆ ಋತದ ಪಕ್ಷವನ್ನು ಹಿಡಿದವರು. ಮನುಷ್ಯರಿಗೆ ಅನುಕೂಲರಾದವರು. ಅನೃತವನ್ನು ಹಿಡಿದವರು ದಸ್ಯುಗಳು, ಪಣರು, ದ್ರುಹುಗಳು, ಅಸುರರು, ಯಾತುಧಾನರು, ರಾಕ್ಷಸರು (೨,೧೦೪,೨; ೧೦,೮೨,೨; ೧೦,೮೭,೧೬; ೭,೧೦೪,೧೮ ಇತ್ಯಾದಿ). ಅವರು ಕತ್ತಲಿಗೆ ಒಲಿದವರು. ಬೆಳಕನ್ನು ಕಂಡರೆ ಮುನಿಯುವವರು, ಧರ್ಮಕ್ಕೆ ಅಡ್ಡಿ ತರುವವರು. ಯಜ್ಞವನ್ನು ಕೆಡಿಸುವವರು ಅವರು. ಯಜ್ಞವೆಂದರೆ ಋತದ ಪ್ರಕ್ರಿಯೆಯೇ.

ವೇದದ ನೆಲೆಯಲ್ಲಿ ವಿಶ್ವವೆಲ್ಲ ಒಂದು ಕುಟುಂಬವೇ. 'ಯತ್ರ ವಿಶ್ವಂ ಭವತ್ಯೇಕನೀಡಂ' ಎಂಬುದು ಋಗ್ವೇದದ ಮಾತು. ವಿಶ್ವವೆಲ್ಲವೂ ಒಂದು

(೩,೫೪,೮), ವಿಶ್ವವೇ ಋತದ ಅಭಿವ್ಯಕ್ತಿ (೨,೨೪,೧೨), ವಿಶ್ವವೆಲ್ಲವೂ ಗೌರವಭಾಜನವಾದುದು (೯,೬೩,೫)—ಈ ಮೊದಲಾದ ಭಾವನೆಗಳನ್ನು ಋಗ್ವೇದದಲ್ಲಿ ಕಾಣುತ್ತೇವೆ. ಯಜ್ಞವೆನ್ನುವುದು ವಿಶ್ವದ ಪ್ರತೀಕವೇ. ಹಾಗೆಂದೇ ಅದರ ಹಿರಿಮೆ. ಯಜ್ಞವು ಋತದ ಪ್ರಕ್ರಿಯೆಯೆಂದು ಈಗಾಗಲೇ ತಿಳಿದೆವು. ಈ ನೆಲೆಯಲ್ಲಿ ಇಡೀ ಜಗತ್ತಿನ ನಾಭಿಸ್ಥಾನದಲ್ಲಿರುವುದು ಯಜ್ಞ–ಋತ. (ಭುವನಸ್ಯ ನಾಭಿಃ, ೧,೧೬೪,೩೪).

ಋತದ ಕಲ್ಪನೆಯ ಜಾಡನ್ನು ಹಿಡಿದೇ 'ಬ್ರಹ್ಮ' (ನಪುಂಸಕ ಲಿಂಗದ ಶಬ್ದ, ವಿಶ್ವವ್ಯಾಪಕತತ್ತ್ವವೆಂಬ ಅರ್ಥದಲ್ಲಿ) ಎಂಬ ಕಲ್ಪನೆ ವೇದದಲ್ಲೇ ಮೊದಲಿಟ್ಟಿತು. ಬ್ರಹ್ಮವೆಂದರೆ ವಿಶ್ವಚೈತನ್ಯಸ್ವರೂಪದ ಮಂತ್ರ; ಈ ಮಂತ್ರದ ವಿಚಿತ್ರಾದ್ಭುತ ಶಕ್ತಿಯೇ ಮಾಯೆ. ಮುಂದೆ ವೇದಾಂತದ ಬ್ರಹ್ಮನಾಗಿ ತೋರಿಕೊಂಡದ್ದೂ ಇದೇ. ವಿಶ್ವದ ನೆಲೆಯಲ್ಲಿ ಬ್ರಹ್ಮವೆಂದಾದುದೇ ವ್ಯಕ್ತಿಯ ನೆಲೆಯಲ್ಲಿ 'ಆತ್ಮ' ಎಂದಾಯಿತು. ವೈದಿಕ ಚೌಕಟ್ಟಿನಲ್ಲಿ ಆತ್ಮವೆಂದರೆ ಉಸಿರು, ಗಾಳಿ, ಪ್ರಾಣ, ಚೈತನ್ಯ. ವಿಶ್ವದ ಕಡೆಯಿಂದ ಋತವಾದದ್ದು, ವ್ಯಕ್ತಿಯ ಕಡೆಯಿಂದ ಧರ್ಮವೆನಿಸಿತು.

ಧರ್ಮವೆನ್ನುವುದೇ ವೇದಾರ್ಥವೆಂದು ಮೀಮಾಂಸಕರು ಹೇಳಿದುದನ್ನು ಈಗಾಗಲೇ ತಿಳಿಸಿದ್ದೇನೆ. ಧರ್ಮವೆಂದರೆ 'ಚೋದನಾಲಕ್ಷಣೋಽರ್ಥೋ ಶ್ರೇಯಸ್ಕರಃ' ಎಂಬ ನಿರೂಪಣೆಯಿದೆ. ಚೋದನವೆನ್ನುವ ಮಾತು ವಿಧಿ, ಉಪದೇಶ ಎಂಬುದಕ್ಕೆ ಪರ್ಯಾಯ ಪದವೆಂದು ಕುಮಾರಿಲಭಟ್ಟರ ವಿವರಣೆ. ಕೆಲಸದಲ್ಲಿ ತೊಡಗಿಸುವುದು (ಕ್ರಿಯಾಯಾಃ ಪ್ರವರ್ತಕಂ ವಚನಂ) ಎಂಬರ್ಥದಲ್ಲಿ ಚೋದನೆಯೇ ಲಕ್ಷಣವಾಗಿ ಉಳ್ಳದ್ದು ಧರ್ಮ; ಅದರಿಂದ ನಮ್ಮ ಶ್ರೇಯಸ್ಸು ಕೈಗೂಡುತ್ತದೆ. ಇದು ವೇದದ ಪ್ರೇರಣೆ, ಆದೇಶ, ಆಜ್ಞೆಯೆಂದು ಸಂಪ್ರದಾಯದ ವಿಶ್ವಾಸ.

ಮಂತ್ರ–ಬ್ರಾಹ್ಮಣಗಳಲ್ಲಿ ಬರುವ ವಿಚಾರವೆಲ್ಲ ಧರ್ಮವನ್ನು ಕುರಿತದ್ದೇ. ಇವೆರಡೂ ಕೂಡಿ ವೇದದ ಕರ್ಮಕಾಂಡ. ವೇದದ ತಾತ್ಪರ್ಯ ಇಷ್ಟರಲ್ಲೇ ಅಡಗಿದೆಯೆಂದು ಮೀಮಾಂಸಕರು. ವೇದಾಂತಿಗಳಾದರೊ ವೇದವಿಭಾಗದ ಕಡೆಯ ಹಂತವಾದ ಉಪನಿಷತ್ತುಗಳಲ್ಲಿ ಹೇಳುವ ಜ್ಞಾನವೇ ವೇದದ ತಾತ್ಪರ್ಯವೆಂದು ಬಗೆದರು. ಉಪನಿಷತ್ತು ವೇದವಾಙ್ಮಯದ ಜ್ಞಾನಕಾಂಡವೆನಿಸಿತು.

ಧರ್ಮವನ್ನು ವೇದದ ಅಧ್ಯಯನದಿಂದ ತಿಳಿದುಕೊಂಡರೆ ಸಾಕೆ? ಶಬರ ಸ್ವಾಮಿಗಳು ಪೂರ್ವಮೀಮಾಂಸಾ ಸೂತ್ರದಲ್ಲಿ (೧,೧,೧) ಹೇಳಿರುವಂತೆ ಬರಿಯ ಅಧ್ಯಯನದಿಂದ ಪ್ರಯೋಜನವಿಲ್ಲವೆಂದು ಯಾಜ್ಞಿಕರು ಬಗೆಯುವರು ('ನ ಚ ತಸ್ಯ ಅಧ್ಯಯನಮಾತ್ರಾತ್ ತತ್ರಭವಂತೋ ಯಾಜ್ಞಿಕಾಃ ಫಲಂ ಸಮಾಮನಂತಿ'). ಅರ್ಥಗ್ರಹಣವು ಆಚಾರದಲ್ಲಿ ಇಳಿಯಬೇಕು. ಆಚಾರ ಕೆಟ್ಟರೆ ವೇದವು ಕಾಪಾಡಲಾರದು ಎಂದು ಕುಮಾರಿಲಭಟ್ಟರು ಹೇಳಿದ್ದಾರೆ ('ಆಚಾರಹೀನಂ ನ ಪುನಂತಿ ವೇದಾಃ').

೬

ಗ್ರಂಥಸ್ಥವಾದ ವೇದದ ಪರಿಚಯವನ್ನು ಸ್ಥೂಲವಾಗಿ ಮಾಡಿಕೊಡಲೆತ್ನಿಸುತ್ತೇನೆ. ವೇದಗಳು ನಾಲ್ಕಷ್ಟೇ. ಋಗ್ವೇದ ಮೊದಲನೆಯದು. ಅದರಲ್ಲಿ ಇಪ್ಪತ್ತೊಂದು ಶಾಖೆಗಳಿದ್ದವು. ಈಗ ಎರಡು ಮಾತ್ರ ಉಳಿದುಕೊಂಡಿವೆ, ಐತರೇಯ ಮತ್ತು ಕೌಷೀತಕೀ. ಈ ವೇದಮಂತ್ರಗಳಿಗೆ ಶಾಕಲ್ಯನ ಪದಪಾಠ ಮತ್ತು ಪಾಂಚಾಲ–ಬಾಭ್ರವ್ಯರ ಕ್ರಮಪಾಠವೂ ಇವೆ. ಐತರೇಯ, ಕೌಷೀತಕೀ ಎಂಬ ಆರಣ್ಯಕಗಳೂ ಉಪನಿಷತ್ತುಗಳೂ, ಆಶ್ವಲಾಯನ, ಸಾಂಖ್ಯಾಯನ, ಕೌಷೀತಕೀ ಎಂಬ ಗೃಹ್ಯ, ಶ್ರೌತಸೂತ್ರಗಳೂ, ವಾಸಿಷ್ಠ ಧರ್ಮಸೂತ್ರವೂ ಈ ವೇದಕ್ಕೇ ಸೇರಿದವು.

ಈ ವೇದದಲ್ಲಿ ಹತ್ತು ಮಂಡಲಗಳು, ೧೦೨೮ ಸೂಕ್ತಗಳು (ಅಥವಾ ಎಂಟು ಅಷ್ಟಕಗಳು, ೬೪ ಅಧ್ಯಾಯಗಳು, ೮೫ ಅನುವಾಕಗಳು). ಒಟ್ಟು ಮಂತ್ರಗಳ ಸಂಖ್ಯೆ ೧೦,೧೮೫ ೧/೨ ಋಕ್ಕುಗಳು (೧೦,೫೮೯ ಎಂದು ಇನ್ನೊಂದು ಮತ); ೧,೫೩,೮೨೬ ಶಬ್ದಗಳೆಂದು ಎಣಿಕೆ ಮಾಡಿದ್ದಾರೆ. ಇವೆಲ್ಲ ಪಾದಬದ್ಧವಾದ, ಛಂದೋಬದ್ಧವಾದ ಮಂತ್ರಗಳು.

ವೇದಾರ್ಥವನ್ನು ತಿಳಿಯಲು ಯಾಸ್ಕರ ನಿರುಕ್ತ (ದುರ್ಗಾಚಾರ್ಯರ ವ್ಯಾಖ್ಯಾನದೊಂದಿಗೆ), ನಿಘಂಟು (ದೇವರಾಜ ಯಜ್ವರ ವ್ಯಾಖ್ಯಾನದೊಂದಿಗೆ), ಋಕ್ ಪ್ರಾತಿಶಾಖ್ಯದ ಮೇಲೆ ಉವ್ವಟರ ಭಾಷ್ಯ, ಸಾಯಣರ ಭಾಷ್ಯ ಇವು ನೆರವಾಗುತ್ತವೆ.

ಯಜುರ್ವೇದವು ಗದ್ಯಪದ್ಯ ಮಿಶ್ರವಾದುದು. ಇದರಲ್ಲಿ ೧೦೯ ಶಾಖೆಗಳಿದ್ದುವಂತೆ. ಈ ವೇದವು ಕೃಷ್ಣಯಜುರ್ವೇದ (ತೈತ್ತಿರೀಯ ಸಂಹಿತೆ,

ಕಠಸಂಹಿತೆ, ಮೈತ್ರಾಣೀಯ ಸಂಹಿತೆಗಳು) ಮತ್ತು ಶುಕ್ಲಯಜುರ್ವೇದ (ಮಾಧ್ಯಂದಿನ ಶಾಖೆ ಮತ್ತು ಕಾಣ್ವಶಾಖೆ) ಎಂಬೆರಡು ವಿಭಾಗಗಳಲ್ಲಿ ಉಳಿದುಬಂದಿದೆ. ತೈತ್ತಿರೀಯ ಸಂಹಿತೆಯಲ್ಲಿ ಏಳು ಅಷ್ಟಕಗಳು, ಎಂಟು ಕಾಂಡಗಳು ಇವೆ. ಒಂದೊಂದು ಅಷ್ಟಕದಲ್ಲೂ ೪೪ ಪ್ರಶ್ನೆಗಳು, ೬೫೧ ಅನುವಾಕಗಳು, ೨೧೯೮ ಕಾಂಡಿಕೆಗಳು ಅಥವಾ ಮಂತ್ರಗಳು (ಒಂದು ಕಾಂಡಿಕೆಯೆಂದರೆ ಐವತ್ತು ಶಬ್ದಗಳು). ಒಟ್ಟು ೧,೧೦,೯೯೬ ಶಬ್ದಗಳು. ಈ ಸಂಹಿತೆಯು ಗದ್ಯಪದ್ಯ ಮಿಶ್ರ ಶೈಲಿಯಲ್ಲಿದೆ. ನಿಯತಾಕ್ಷರವಿಲ್ಲದೆ, ಪಾದಬದ್ಧವಿಲ್ಲದ ಮಂತ್ರಗಳಿವೆ. ಈಗ ಕಠ, ಕಪಿಸ್ಥಲ, ಕಾಲಾಪ, ಮೈತ್ರಾಯಣೀಯ, ತೈತ್ತಿರೀಯ ಶಾಖೆಗಳು ಉಳಿದಿವೆ. (ಯಜುರ್ವೇದದಲ್ಲಿ ಒಟ್ಟು ೧೦೯ ಶಾಖೆಗಳಿದ್ದವು). ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ಕೃಷ್ಣಯಜುರ್ವೇದದ ಬಳಕೆ ಹೆಚ್ಚು. ಉಳಿದ ಪ್ರಾಂತ್ಯಗಳಲ್ಲಿ ಪ್ರಚಲಿತವಾಗಿರುವುದು ಶುಕ್ಲಯಜುರ್ವೇದ.

ಶುಕ್ಲಯಜುರ್ವೇದದ ಮಂತ್ರಗಳು ಸಂಪೂರ್ಣವಾಗಿ ಛಂದೋಬದ್ಧವಾಗಿವೆ. ಈ ಸಂಹಿತೆಯನ್ನು ವಾಜಸನೇಯಿ ಎಂದು ಕರೆಯುವುದುಂಟು. ಇದರ ಮಾಧ್ಯಂದಿನ ಶಾಖೆಯಲ್ಲಿ ೪೦ ಅಧ್ಯಾಯಗಳೂ, ಕಾಣ್ವ ಶಾಖೆಯಲ್ಲಿ ೧೭ ವಿಭಾಗಗಳೂ ಇವೆ. ಒಟ್ಟು ಯಜುರ್ವೇದ ಸಂಹಿತೆಯಲ್ಲಿ ೪೦ ಅಧ್ಯಾಯಗಳು, ೩೦೫ ಅನುವಾಕಗಳು, ೧೯೭೬ (ಅಥವಾ ೧೯೮೫) ಕಾಂಡಿಕೆಗಳು (ಅಥವಾ ಮಂತ್ರಗಳು). ಈ ವೇದಕ್ಕೆ ಸೇರಿದಂತೆ ಆಪಸ್ತಂಬ, ಬೋಧಾಯನ, ಹಿರಣ್ಯಕೇಶಿ ಎಂಬ ಶ್ರೌತಧರ್ಮಸೂತ್ರಗಳೂ, ಮಾನವ ಗೃಹ್ಯಸೂತ್ರವೂ ಇವೆ. ಶತಪಥಬ್ರಾಹ್ಮಣ, ಕಾಣ್ವ ಬ್ರಾಹ್ಮಣ, ಕಾಣ್ವ ಆರಣ್ಯಕ, ಮಾಧ್ಯಂದಿನ ಆರಣ್ಯಕ, ಈಶೋಪನಿಷತ್ತು, ಬೃಹದಾರಣ್ಯಕೋಪನಿಷತ್ತು ಇವೆಲ್ಲ ಶುಕ್ಲ ಯಜುರ್ವೇದಕ್ಕೆ ಸೇರಿದವು. ಈ ವೇದಭಾಗಕ್ಕೆ ಉವ್ವಟರ ಭಾಷ್ಯವಿದೆ.

ಸಾಮವೇದಕ್ಕೆ ಒಂದು ಸಾವಿರ ಶಾಖೆಗಳಿದ್ದವು. ಈಗ ಕೌಥುಮಿ (ಗುಜರಾತಿನಲ್ಲಿ ಪ್ರಚಲಿತ), ಜೈಮಿನೀಯ (ಕರ್ನಾಟಕದಲ್ಲಿ), ರಾಣಾಯನೀಯ (ಮಹಾರಾಷ್ಟ್ರದಲ್ಲಿ) ಎಂಬ ಮೂರು ಮಾತ್ರ ಉಳಿದಿವೆ. ಸಾಮವೇದ ಸಂಹಿತೆಯಲ್ಲಿರುವುದು ೨೯ ಅಧ್ಯಾಯಗಳು, ೬ ಆರ್ಚಿಕಗಳು, ೯ ಸಾಮಗಳು, ೧೮೧೩ ಮಂತ್ರಗಳು. ಇನ್ನೊಂದು ಎಣಿಕೆಯ ಪ್ರಕಾರ ಒಟ್ಟು ೧೫೪೯ ಮಂತ್ರಗಳು. ಇವನ್ನು ಆರ್ಚಿಕ (೫೮೫ ಮಂತ್ರಗಳು), ಉತ್ತರಾರ್ಚಿಕ (೯೬೪ ಮಂತ್ರಗಳು) ಎಂದು ವಿಂಗಡಿಸಿದ್ದಾರೆ.

ಇವೆಲ್ಲ ಗೇಯ ಶೈಲಿಯಲ್ಲಿವೆ. ಮಂತ್ರಗಳಿಗೆ ಉದಾತ್ತ, ಅನುದಾತ್ತ, ಸ್ವರಿತ ಚಿಹ್ನೆಗಳಿಗೆ ಬದಲಾಗಿ ಸಮಯ ಮಾತ್ರಾ ನಿರ್ದೇಶಕ ಸಂಖ್ಯೆಗಳನ್ನು (೯,೨,೩ ಎಂಬ ಅಂಕಗಳು) ಬಳಸುತ್ತಾರೆ.

ಪಂಚವಿಂಶ, ಷಡ್ವಿಂಶ, ಸಾಮವಿಧಾನ, ಆರ್ಷೇಯ, ಗೋಪಥ ಎಂಬ ಬ್ರಾಹ್ಮಣಗಳೂ, ಛಾಂದೋಗ್ಯ ಮತ್ತು ಕೇನೋಪನಿಷತ್ತುಗಳೂ, ಖಾದಿರ, ಗೋಭಿಲ, ಗೌತಮ ಎಂಬ ಗೃಹ್ಯಸೂತ್ರಗಳೂ, ಖಾದಿರ, ಲಾಟ್ಯಾಯನ, ದ್ರುಹ್ಯಾಯಣ ಎಂಬ ಶ್ರೌತಸೂತ್ರಗಳೂ, ಗೋತಮಧರ್ಮಸೂತ್ರವೂ ಸಾಮವೇದಕ್ಕೆ ಸೇರಿದವು. ಆರಣ್ಯಕವೆಂಬ ಹೆಸರು ಸಾಮವೇದದಲ್ಲಿ ಬಳಕೆಯಿಲ್ಲ.

ಅಥರ್ವವೇದದಲ್ಲಿ ಐವತ್ತು ಶಾಖೆಗಳು. ಉಳಿದಿರುವುದು ಎರಡೇ. ಪೈಪ್ಪಲಾದ ಸಂಹಿತೆ ಮತ್ತು ಶೌನಕ ಸಂಹಿತೆ. ಆದರೆ ಅಥರ್ವವೇದಕ್ಕೆ ಪೈಪ್ಪಲಾದ, ಶೌನಕ, ದಾಮೋದ, ಕೌತಾಯನ, ಜಾಮಲ,ಬ್ರಹ್ಮಪಾಲಾಶ, ಶುನರವಾ, ದೇವದರ್ಶಿ, ಚರಣ ವಿದ್ಯೆಗಳೆಂಬ ಒಂಭತ್ತು ಭಾಗಗಳಿವೆ. ಅಥರ್ವ ಸಂಹಿತೆಯಲ್ಲಿ ೨೦ ಕಾಂಡಗಳು, ೩೫ ಪ್ರವಾರಕಗಳು, ೧೧೧ ಅನುವಾಕಗಳು, ೭೭೩ ವರ್ಗಗಳು, ೬೦೦೦ ಮಂತ್ರಗಳು, ಒಟ್ಟು ೧೨,೩೮೦ ಶಬ್ದಗಳು: ಶೌನಕೀಯ ಶಾಖೆಯಲ್ಲಿ ೨೦ ಕಾಂಡಗಳು, ೭೩೧ ಸೂಕ್ತಗಳು.

ಪ್ರಶ್ನ, ಮುಂಡಕ, ಮಾಂಡೂಕ್ಯ ಉಪನಿಷತ್ತುಗಳೂ, ವೈತಾನ ಶ್ರೌತಸೂತ್ರವೂ ಕೌಶಿಕ ಗೃಹ್ಯಸೂತ್ರವೂ ಅಥರ್ವವೇದಕ್ಕೆ ಸೇರುತ್ತವೆ. ಅಥರ್ವವೇದವನ್ನು ಅಥರ್ವಾಂಗೀರಸವೆಂದು ಕರೆಯುವುದು ವಾಡಿಕೆ. ಅಥರ್ವ ಮತ್ತು ಅಂಗೀರಸ ಎಂಬುವರು ಇಲ್ಲಿನ ಪ್ರಮುಖ ಋಷಿಗಳು.

~ ~ ~

ಉಪನಿಷತ್ತುಗಳು

೧

ನಮ್ಮ ದೇಶದ ಆಧ್ಯಾತ್ಮಿಕ ಸಾಹಿತ್ಯದಲ್ಲಿ ಭಗವದ್ಗೀತೆಯನ್ನು ಬಿಟ್ಟರೆ ಅತಿಮುಖ್ಯ ಮತ್ತು ಜನಪ್ರಿಯ ಗ್ರಂಥವೆಂದರೆ ಉಪನಿಷತ್ತುಗಳು. ಸಾವಿರಾರು ವರ್ಷಗಳಿಂದ ನಮ್ಮ ಆಚಾರ್ಯರೂ, ಚಿಂತಕರೂ, ದಾರ್ಶನಿಕರೂ, ನಾಯಕರೂ, ಸಂತರೂ, ಸಭ್ಯರೂ ಉಪನಿಷತ್ತುಗಳಿಂದಲೇ ಸ್ಫೂರ್ತಿಯನ್ನು ಪಡೆದುಕೊಂಡು ಬಂದಿದ್ದಾರೆ. ವೇದಾಂತದರ್ಶನವು ಬೆಳೆದುಬಂದಿರುವುದು ಉಪನಿಷತ್ತಿನ ಆಧಾರದ ಮೇಲೇ. ಸಾಂಖ್ಯ, ಯೋಗ ಮುಂತಾದ ದರ್ಶನಗಳೂ, ಬೌದ್ಧ, ಜೈನ, ಪಾಶುಪತ, ಭಾಗವತ ಮೊದಲಾದ ಪ್ರಕ್ರಿಯೆಗಳೂ ಉಪನಿಷತ್ತಿನ ನಿಲುವಿನಿಂದ ಪ್ರಭಾವಿತವಾಗಿವೆ. ಭಗವದ್ಗೀತೆಯೂ ಉಪನಿಷತ್ತಿನ ಕಾಣ್ಕೆಯನ್ನು ಹಿಡಿದೇ ಒಡಮೂಡಿರುವುದು.

ಉಪನಿಷತ್ತುಗಳು ತುಂಬ ಪ್ರಾಚೀನವಾದ ಸಾಹಿತ್ಯವಾದರೂ (ಇವುಗಳ ರಚನೆ ಕ್ರಿಸ್ತಪೂರ್ವ ಎರಡು ಸಾವಿರಗಳಷ್ಟು ಹಿಂದೆ) ಇಂದಿಗೂ ಅದರ ಪ್ರಸ್ತುತತೆ ಉಳಿದು ಬಂದಿದೆ, ಬೆಳೆಯುತ್ತಲಿದೆ. ನಡುಯುಗದಲ್ಲಿ ಅದರ ಜನಪ್ರೀತಿ ನಾಡಿನ ಹೊರಗೂ ಹರಡಿತು. ಇಲ್ಲಿ ಮೊಗಲ್ ಸಾಮ್ರಾಜ್ಯವಿದ್ದಾಗ, ಶಾ-ಜಹಾನ್ ಚಕ್ರವರ್ತಿಯ ಹಿರಿಯ ಮಗ ದಾರಾ–ಶುಕೋ ಕಾಶ್ಮೀರದಲ್ಲಿ ಪ್ರವಾಸ ಮಾಡುತ್ತಿರುವಾಗ ಒಮ್ಮೆ ಉಪನಿಷತ್ತುಗಳ ಪಠಣವಾಗುತ್ತಿತ್ತು. ದಾರಾ–ಶುಕೋ ಕುತೂಹಲದಿಂದ ಅದೇನೆಂದು ಕೇಳಿ ಉಪನಿಷತ್ತುಗಳ ವಿಚಾರ ಕೇಳಿ ತಿಳಿದುಕೊಂಡನಂತೆ. ಒಡನೆಯೇ ಅವನು ಉಪನಿಷತ್ತುಗಳ ಸ್ವಾರಸ್ಯಕ್ಕೆ ಮಾರುಹೋದ. ದಿಲ್ಲಿಗೆ ಹಿಂದಿರುಗಿದ ಮೇಲೆ ಕಾಶಿಯಿಂದ ಕೆಲವರು ಪಂಡಿತರನ್ನು ಕರೆಯಿಸಿಕೊಂಡು ಅವರ ನೆರವಿನಿಂದ ತನಗೆ ಸಿಕ್ಕ ಉಪನಿಷತುಗಳನ್ನು ಪರ್ಶಿಯನ್ ಭಾಷೆಗೆ

ಅನುವಾದ ಮಾಡಿದ. ಇದೊಂದು ಆಧುನಿಕ ಯುಗದಲ್ಲಿ ಉಪನಿಷತ್ತುಗಳ ಅಧ್ಯಯನಕ್ಕೆ ಪ್ರಮುಖವಾದ ಘಟ್ಟವಾಯಿತು. ಇದು ೧೬೮೦ರ ಮಾತು.

ಮುಂದೆ ೧೭೭೫ರ ಸುಮಾರಿಗೆ ಐರೋಪ್ಯ ಪ್ರಪಂಚಕ್ಕೆ ಉಪನಿಷತ್ತುಗಳ ಪ್ರವೇಶವಾದುದು ಇನ್ನೊಂದು ಘಟ್ಟ. ಫೈಜಾಬಾದಿನಲ್ಲೊಂದು ಮುಗಲ್ ಅರಸೊತ್ತಿಗೆ. ಷೂಜ–ಅಬ್ದುಲ್ಲ ಎಂಬ ಅರಸನ ಓಲಗದಲ್ಲಿ ಲ–ಜೆಂತಿಲ್ ಎಂಬ ಫ್ರೆಂಚ್ ರಾಯಭಾರಿ ಉಪನಿಷತ್ತಿನ ಪರ್ಶಿಯನ್ ಅನುವಾದಗಳನ್ನು ಓದಿ ಮೆಚ್ಚಿಕೊಂಡಿದ್ದ ವನು. ಓಲಗಕ್ಕೊಮ್ಮೆ ಅಂಕ್ವೆತಿಲ್–ದುಪೆರ್ರೋ ಎಂಬ ಐರೋಪ್ಯ ಪಂಡಿತನೊಬ್ಬ ಬಂದ. ಜೆಂದ್ ಅವೆಸ್ತಾ ಎಂಬ ಜೊರಾಸ್ಟ್ರಿಯನ್ ಧರ್ಮಗ್ರಂಥವನ್ನು ಐರೋಪ್ಯರಿಗೆ ದೊರಕಿಸಿಕೊಟ್ಟವನು ಇವನೇ. ಲ–ಜೆಂತಿಲ್ ಇವನಿಗೆ ಉಡುಗೊರೆಯಾಗಿ ತನ್ನಲ್ಲಿದ್ದ ಉಪನಿಷತ್ತಿನ ಗ್ರಂಥಗಳನ್ನು ಕೊಟ್ಟ. ದುಪೆರ್ರೋ ಕೂಡ ಉಪನಿಷತ್ತು ಗಳನ್ನೋದಿ ಮೆಚ್ಚಿಕೊಂಡುದಲ್ಲದೆ, ಅದನ್ನು ಲ್ಯಾಟಿನ್‌ಭಾಷೆಗೆ ಅನುವಾದ ಮಾಡಿದ. ೧೮೦೧-೧೮೦೨ರಲ್ಲಿ ಈ ಅನುವಾದ ಅಚ್ಚಾಯಿತು.

ಈ ಅನುವಾದವನ್ನು ಓದಿ, ಪ್ರಭಾವಿತರಾದವರಲ್ಲಿ ಸುಪ್ರಸಿದ್ಧ ಐರೋಪ್ಯ ದಾರ್ಶನಿಕ ಶೋಪೆನ್ ಹೋ ಒಬ್ಬ. ಉಪನಿಷತ್ತುಗಳ ಅಧ್ಯಯನದಿಂದ ಅವನ ಬದುಕಿನ ದಿಕ್ಕೇ ಬದಲಾಯಿತು; ಅವನ ಚಿಂತನೆಗಳ ಮೇಲೆ ಉಪನಿಷತ್ತುಗಳು ಗಾಢವಾದ ಪ್ರಭಾವವನ್ನು ಬೀರಿದವು. ಹೀಗಾಗಿ ಉಪನಿಷತ್ತುಗಳು ಐರೋಪ್ಯ ದೇಶಗಳಲ್ಲಿ ಜನಪ್ರಿಯವಾದವು.

ಪರ್ಶಿಯನ್ ಮೂಲದಿಂದಲೇ ಉಪನಿಷತ್ತುಗಳ ಸ್ವಾರಸ್ಯವನ್ನು ಅರಿತು ಕೊಂಡವರಲ್ಲಿ ನಮ್ಮ ರಾಜಾ ರಾಮಮೋಹನರಾಯರು ಮೊದಲಿಗರು. ಇವರು ಉಪನಿಷತ್ತುಗಳ ಭಕ್ತರಾಗಿ ಮಾರ್ಪಟ್ಟರು; ಬಂಗಾಳಿಗೆ, ಇಂಗ್ಲೀಷಿಗೆ, ಹಿಂದೂಸ್ತಾನಿಗೆ ಉಪನಿಷತ್ತುಗಳನ್ನು ಅನುವಾದಮಾಡಿ ತಮ್ಮ ಹಣವನ್ನೆ ವೆಚ್ಚಮಾಡಿ ಅಚ್ಚು ಮಾಡಿಸಿದರು. ಉಪನಿಷತ್ತುಗಳನ್ನೇ ಆಧ್ಯಾತ್ಮಿಕ ಜೀವನದ ಅಡಿಗಲ್ಲಾಗಿ ಕಾಣಿಸಲು ಬ್ರಾಹ್ಮಸಮಾಜವನ್ನು ಸ್ಥಾಪನೆ ಮಾಡಿದರು. ಇವರ ಪ್ರಭಾವಕ್ಕೊಳಗಾದ ಮಹರ್ಷಿ ದೇವೇಂದ್ರನಾಥ ಠಾಕೂರರು (ರವೀಂದ್ರನಾಥರ ತಂದೆ) ಉಪನಿಷತ್ತುಗಳ ಪ್ರಚಾರಕ್ಕೆ ತುಂಬ ಶ್ರಮಿಸಿದರು. ಶ್ರೀಮಂತರಾಗಿದ್ದ ಅವರನ್ನು ಆಧ್ಯಾತ್ಮಿಕತೆಯತ್ತ ಹೊರಳಿಸಿದ್ದು ಆಕಸ್ಮಿಕವಾಗಿ ಅವರೆಡೆಗೆ ಉಪನಿಷತ್ತಿನ ಮಂತ್ರವಿದ್ದ ಕಾಗದದ ತುಣುಕೊಂದು

ಹಾರಿಬಂದುದು. ಈಶೋಪನಿಷತ್ತಿನ ಮೊದಲ ಮಂತ್ರ ಅದು. ಅದನ್ನು ಓದುತ್ತ ಓದುತ್ತ ಅವರು ಮೈಮರೆತರು, ಅದರದ್ದೇ ಗೀಳಿನಲ್ಲಿ ತಪಸ್ಯೆ ಶುರುವಾಯಿತು, ದಿವ್ಯದರ್ಶನವೂ ಆಯಿತು.

ಆ ಕಾಲದಿಂದ ಮುಂದೆ ನಮ್ಮ ನಾಡಿನಲ್ಲೂ ಹೊರಗಡೆಯೂ ಉಪನಿಷತ್ತುಗಳ ಅಧ್ಯಯನ, ಅನುವಾದ, ಪ್ರಚಾರ, ಪ್ರಕಟಣೆಗಳು ಬಿರುಸಿನಿಂದ ನಡೆಯತೊಡಗಿದವು.

೨

ಉಪನಿಷತ್ತುಗಳು ವೈದಿಕ ಪರಂಪರೆಯಲ್ಲಿ ಪ್ರಮುಖವೆನಿಸಿದ ಸಾಹಿತ್ಯ. ವೇದವಾಙ್ಮಯವನ್ನು ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು, ಉಪನಿಷತ್ತುಗಳು ಎಂದು ವಿಭಾಗ ಮಾಡುವುದು ವಾಡಿಕೆ. ಸಂಹಿತೆಗಳು ಮಂತ್ರಭಾಗ. ಬ್ರಾಹ್ಮಣಗಳ ವಿನಿಯೋಗವಿರುವುದು ಯಜ್ಞಯಾಗಾದಿಗಳ ಸಂದರ್ಭದಲ್ಲಿ ; ಅದನ್ನು ಕರ್ಮಕಾಂಡ ವೆನ್ನುತ್ತಾರೆ. ಮೀಮಾಂಸಕರು ವೇದವೆಂದರೆ ಸಂಹಿತೆಯೂ (ಮಂತ್ರಗಳೂ), ಬ್ರಾಹ್ಮಣಗಳೂ ಸೇರಿದ ವಾಙ್ಮಯವೆಂದೇ ನಿರ್ದೇಶಿಸಿದರು. ಬ್ರಾಹ್ಮಣಗಳಲ್ಲಿ ಮಾಡಬೇಕಾದ ಕರ್ಮಗಳನ್ನು ನಿರೂಪಿಸುವ ವಿಧಿ, ಆ ಕರ್ಮಗಳನ್ನು ಪ್ರಶಂಸೆ ಮಾಡುವುದು (ಸ್ತುತಿ), ಮಾಡದಿರುವುದನ್ನು ತೆಗಳುವುದು (ನಿಂದೆ), ಇತರರು ಮಾಡಿದ ಈ ಕರ್ಮಗಳನ್ನು ಉಲ್ಲೇಖಿಸಿ ಅವರು ಪಡೆದುಕೊಂಡ ಫಲಗಳನ್ನು ಹೇಳುವುದು (ಪರಕೃತಿ), ಹಿಂದಿನ ಕಾಲದಲ್ಲಿ ಇಂಥ ಕರ್ಮಗಳನ್ನು ಮಾಡಿದವರ ವಿಚಾರ ಹೇಳುವುದು (ಪುರಾಕಲ್ಪ) ಎಂಬ ವಿವರಗಳಿವೆ. ಇವಲ್ಲದೆ ವಿಧಿಸಿದ ಕರ್ಮಗಳ ಔಚಿತ್ಯವನ್ನೂ ಅಗತ್ಯವನ್ನೂ ಮತ್ತೆ ನಿರೂಪಿಸುವ ಅನುವಾದ ಭಾಗವೂ ಇರುತ್ತದೆ. ಬ್ರಾಹ್ಮಣಗಳು ಹೇಳುವ ಯಜ್ಞಯಾಗಾದಿಗಳಲ್ಲಿ ತೊಡಗದೆ, ಅವುಗಳ ಸಾಂಕೇತಿಕವಾದ ತಾತ್ಪರ್ಯದಲ್ಲಿ ಮಾತ್ರ ಗಮನವಿಟ್ಟು ಚಿಂತನೆಮಾಡುವುದು ಆರಣ್ಯಕ ಭಾಗ. ನಿದರ್ಶನಕ್ಕೆ ಅಶ್ವಮೇಧಯಾಗವೆಂದರೆ ಕುದುರೆಯನ್ನು ಬಲಿಕೊಡುವುದಲ್ಲ. ಇಡೀ ವಿಶ್ವವೇ ಅಶ್ವ (ಎಂದರೆ ನಾಳೆ ಇಲ್ಲದಿರುವುದು, ಕ್ಷಣಿಕವಾದುದು); ಮುಂಜಾನೆಯೇ ಕುದುರೆಯ ತಲೆ ಇತ್ಯಾದಿ ಚಿಂತನೆಮಾಡುವುದು ಯಾಗದ ಸ್ವಾರಸ್ಯ. ಬೃಹದಾರಣ್ಯಕದಲ್ಲಿ ಇದನ್ನು ಕಾಣಬಹುದು. ಕರ್ಮಕಾಂಡವು ಗೃಹಸ್ಥರಿಗಾದರೆ, ಆರಣ್ಯಕಗಳು ವಾನಪ್ರಸ್ಥರಿಗೆ ಎಂಬುದೊಂದು ವಿವರಣೆ.

ಆರಣ್ಯಕಗಳಿಗೆ ಹೊಂದಿಕೊಂಡಂತೆ, ಕಡೆಯ ಭಾಗದಲ್ಲಿ ಬರುವುವು ಉಪನಿಷತ್ತುಗಳು. ಆರಣ್ಯಕಗಳ ಧೋರಣೆಯನ್ನೇ ಇವು ಮುಂದುವರೆಸಿಕೊಂಡು ಹೋಗುತ್ತವೆ. ಸಂಕೇತದ ನೆಲೆಯನ್ನು ದಾಟಿ ತತ್ತ್ವವನ್ನು ಕಂಡುಕೊಳ್ಳಲು ಹವಣಿಸುತ್ತವೆ. ಹೀಗೆ ಉಪನಿಷತ್ತುಗಳು ಯಜ್ಞಯಾಗಾದಿಗಳನ್ನು ಕೈ ಬಿಟ್ಟು, ತತ್ತ್ವವನ್ನು ಅರಿತುಕೊಳ್ಳಲು ಹೊರಟಿದ್ದರಿಂದ ಈ ಸಾಹಿತ್ಯ ಜ್ಞಾನಕಾಂಡವೆನಿಸಿಕೊಂಡಿತು.

ವೇದವೆಂಬ ಮಾತಿಗೆ ತಿಳಿವಳಿಕೆಯೆಂದೇ ಅರ್ಥ (ವಿದ್ + ಘಞ್). ಈ ಅರ್ಥ ಕೈಗೂಡುವುದು ವೇದದ ಕಡೆಯ ಭಾಗವಾದ ಉಪನಿಷತ್ತುಗಳಲ್ಲಿಯೇ. ಸಂಹಿತಾಭಾಗದಲ್ಲಿ ಕಲ್ಪನೆಗಳು, ಬ್ರಾಹ್ಮಣಭಾಗದಲ್ಲಿ ಕ್ರಿಯೆಗಳು, ಆರಣ್ಯಕ ಭಾಗದಲ್ಲಿ ವಿವರಣೆಗಳು; ಉಪನಿಷದ್ಭಾಗದಲ್ಲೇ ತತ್ತ್ವದ ತಿಳಿವಳಿಕೆಗೆ ಎಡೆಯಿರುವುದು. ಹೀಗಾಗಿ ಉಪನಿಷತ್ತುಗಳಿಗೆ ವೇದಾಂತವೆಂಬ ಹೆಸರು. ವೇದದ ಕಡೆಯ ಭಾಗ ಎಂಬುದೊಂದು ಅರ್ಥ (ವೇದವೆಂಬ ವಾಙ್ಮಯದ ಚರಮಭಾಗ); ವೇದದ ನಿಲುವು ನಿರ್ಣಾಯಕವಾಗಿ ತಿಳಿಯುವುದು ಇಲ್ಲಿಯೇ ಎಂಬುದು ಇನ್ನೊಂದು ಅರ್ಥ (ಅಂತವೆಂಬ ಮಾತಿಗೆ ನಿರ್ಣಯವೆಂಬ ಅರ್ಥವೂ ಇದೆ). ಉಪನಿಷತ್ತು ಗಳನ್ನು ವೇದಾಂತಗಳೆಂದೇ ನಿರ್ದೇಶಿಸುವುದು ಶಂಕರಾಚಾರ್ಯರ ಕಾಲದಲ್ಲೂ (೬೩೨-೬೬೪) ರೂಢಿಯಲ್ಲಿದ್ದಿತು. ಆಚಾರ್ಯರಿಗೆ ವೇದಾಂತವೆಂಬ ದರ್ಶನ ವಿಭಾಗದ ಪರಿಚಯವಿದ್ದುದು ಉಪನಿಷತ್ತಿನ ದರ್ಶನ ಎಂಬರ್ಥದಲ್ಲಷ್ಟೇ.

ವೇದಾಧ್ಯಯನವೆಂದರೆ ಬರಿಯ ವೇದಪಾಠವೇ ಅಲ್ಲ, ಮಂತ್ರಗಳ ಅರ್ಥವನ್ನೂ ತಿಳಿದುಕೊಂಡು ವಿಚಾರಮಾಡಬೇಕಾದ ಅಗತ್ಯವೂ ಇದೆ. ಪೂರ್ವಮೀಮಾಂಸಾ ಸೂತ್ರಗಳಿಗೆ ಶಬರ ಸ್ವಾಮಿಗಳು ಬರೆದ ಭಾಷ್ಯದಲ್ಲಿ ಯಾಜ್ಞಿಕರ ಅಭಿಪ್ರಾಯ ಇದೇ ಎಂದು ಸ್ಪಷ್ಟಪಡಿಸಿದ್ದಾರೆ. ('ನ ಚ ಅಧ್ಯಯನ ಮಾತ್ರಾತ್ ತತ್ರಭವಂತೋ ಯಾಜ್ಞಿಕಾಃ ಫಲಮಾಮನಂತಿ' ೧,೧,೧) ಯಾಜ್ಞವಲ್ಕ್ಯ ಸ್ಮೃತಿಯ ಮೇಲೆ ವಿಶ್ವರೂಪದ ಟೀಕೆಯೂ ವೇದವ್ರತವೆಂದರೆ ಮಂತ್ರದ ಮಾತನ್ನೂ ಅದರ ಅರ್ಥವನ್ನೂ ಮನಗಾಣುವುದು ಎಂದು ಹೇಳುತ್ತದೆ ('ವೇದಸ್ಯ ಪಾರನಯನಂ ಅರ್ಥತೋ ಗ್ರಂಥತಶ್ಚ ಸ್ವೀಕರಣಂ, ನ ಗ್ರಂಥತ ಏವ' ೧,೫೧). ಅರ್ಥ ತಿಳಿದುಕೊಂಡಮೇಲೆ ವಿಚಾರದ ಅಗತ್ಯವಿದ್ದೇ ಇದೆ. ಮೀಮಾಂಸೆಯೆನ್ನುವ ಮಾತಿಗೆ ವಿಚಾರವೆಂದೇ ಅರ್ಥ. ಉಪನಿಷತ್ತುಗಳು ಮೀಮಾಂಸೆಯ ಸ್ವಭಾವದವೇ.

ವೇದವು ವಿಚಾರದಲ್ಲಿಯೇ ಮುಗಿಯಬೇಕೆಂಬ ನಿಲುವು ವೇದಾಂತ ಮೀಮಾಂಸೆ. ವೇದಾಂತವೆಂಬ ದರ್ಶನ ಮೈದಳೆದದ್ದು ಹೀಗೆ.

ಉಪನಿಷತ್ತುಗಳ ಕಾಣ್ಕೆಯನ್ನು ಆಧರಿಸಿಕೊಂಡು ವೇದಾಂತ ದರ್ಶನ ಸಿದ್ಧವಾಯಿತು. ಈ ವೇದಾಂತ ದರ್ಶನದ ಮೂರು ಪ್ರಸ್ಥಾನಗಳಲ್ಲಿ ಮೊದಲನೆಯದು ಮತ್ತು ಮುಖ್ಯವಾದುದು ಉಪನಿಷತ್ತುಗಳೇ. ಉಪನಿಷತ್ತುಗಳ 'ಸಾರಸಂಗ್ರಹ' ರೂಪವಾದ ಭಗವದ್ಗೀತೆ ಎರಡನೆಯ ಪ್ರಸ್ಥಾನ. ಉಪನಿಷತ್ತುಗಳ ನಿಲುವನ್ನು ವಿಚಾರಮಾಡಿ ಯುಕ್ತಿಯಿಂದ ಸಿದ್ಧಪಡಿಸುವುದು ಮೂರನೆಯ ಪ್ರಸ್ಥಾನವಾದ ಶಾರೀರಕಮೀಮಾಂಸಾಸೂತ್ರಗಳು. ಶಾರೀರಕವೆಂದರೆ ಶರೀರದಲ್ಲಿರುವ ಆತ್ಮ. ಈ ಆತ್ಮನೇ ತತ್ತ್ವ ಎಂದು ವಿಚಾರಮಾಡುವುದು ಮೀಮಾಂಸೆ. ಇದನ್ನು ಮಾಡುವುದು ಉಪನಿಷತ್ತಿನ ಮಾತುಗಳನ್ನು ಮನನ ಮಾಡುವುದರಿಂದಲೇ (ಉಪನಿಷದ್ವಾಕ್ಯ ಮೀಮಾಂಸಾ). ಶಾರೀರಕ ಮೀಮಾಂಸೆಯೆಂದು ಕರೆಯುವುದು ಈ ಅರ್ಥದಲ್ಲೇ. ಇದನ್ನೊಳಗೊಂಡ ಸೂತ್ರಗಳನ್ನು ಬಾದರಾಯಣರೆಂಬುವರು ರಚಿಸಿದರಾಗಿ ಇವುಗಳಿಗೆ ಬಾದರಾಯಣಸೂತ್ರಗಳೆಂದೂ ಹೆಸರು. ಬ್ರಹ್ಮಸೂತ್ರವೆಂದೂ ಕರೆಯುವುದುಂಟು. ಹೀಗೆ ವೇದಾಂತವೆಂದರೆ ಉಪನಿಷದ್ ದರ್ಶನವೆಂದೇ ಅರ್ಥ.

೩

ಉಪನಿಷತ್ತೆಂಬ ಮಾತಿಗೆ ಅರ್ಥವಾದರೂ ಏನು? ಈ ಮಾತಿಗೆ ಮೂಲಸಾಮಗ್ರಿ 'ಸದ್' ಎನ್ನುವ ಧಾತು. ಈ ಧಾತುವಿಗೆ 'ಕುಳಿತುಕೊಳ್ಳುವುದು' ಎಂಬ ಅರ್ಥವಿದೆ. ಇದಕ್ಕೆ 'ಉಪ' ಮತ್ತು 'ನಿ' ಎಂಬ ಉಪಸರ್ಗಗಳನ್ನು ಸೇರಿಸಿ ಕ್ವಿಪ್ ಪ್ರತ್ಯಯದಿಂದ ಉಪನಿಷತ್ ಎಂಬ ಪದವಾಗುತ್ತದೆ. 'ನಿ' ಎಂಬ ಉಪಸರ್ಗಕ್ಕೆ 'ಚೆನ್ನಾಗಿ' ಎಂದರ್ಥ; 'ಉಪ' ಎಂದರೆ 'ಹತ್ತಿರ', 'ಸಮೀಪದಲ್ಲಿ'; ಉಪನಿಷತ್ತೆಂದರೆ ಹತ್ತಿರದಲ್ಲಿ, ಚೆನ್ನಾಗಿ ಕುಳಿತುಕೊಳ್ಳುವುದು. ಹತ್ತಿರದಲ್ಲಿ ಎಂದರೆ ಗುರುವಿನ ಬಳಿ; ಚೆನ್ನಾಗಿ ಎಂದರೆ ಶ್ರದ್ಧೆಯಿಂದ, ಸಾವಧಾನವಾಗಿ, ಏಕಾಗ್ರತೆಯಿಂದ ಕುಳಿತುಕೊಳ್ಳುವುದು ಎಂಬ ಮಾತಿನಲ್ಲಿ ಸೇವೆ ಮಾಡುವುದು, ಒಲ್ಲೈಸುವುದು, ಮನನ ಮಾಡುವುದು, ಕೇಳುವುದು ಎಂಬರ್ಥಗಳೆಲ್ಲ ಸೇರುತ್ತವೆ.

ತತ್ತ್ವವನ್ನು ತಿಳಿಯಬೇಕೆನ್ನುವವನು ಸರಿಯಾಗಿ ಗುರುವನ್ನು ಅರಸಿ,

ಅವನನ್ನು ತನ್ನ ವಿನಯದಿಂದ, ಆಸ್ಥೆಯಿಂದ, ತತ್ಪರತೆಯಿಂದ ಒಲಿಸಿಕೊಂಡು, ಅವನ ಹತ್ತಿರ ಏಕಾಂತದಲ್ಲಿ ಕುಳಿತು ಅವನ ಉಪದೇಶವನ್ನು ಕೇಳುವನು; ಕೇಳಿದ್ದನ್ನು ಮನನಮಾಡಿಕೊಳ್ಳುವನು. ಯಾವುದೇ ಕೆಲಸವನ್ನು ಮಾಡುತ್ತಿದ್ದರೂ, ಊಟಮಾಡುವಾಗಲೂ ನಡೆದಾಡುವಾಗಲೂ ಗುರುವಿನ ಉಪದೇಶವೇ ಇವನ ಮನಸ್ಸಿನಲ್ಲಿ; ಅದನ್ನು ಬಿಟ್ಟು ಬೇರೊಂದು ಚಿಂತೆಯೂ ಅವನಿಗಿರದು. ತತ್ತ್ವ ಮನದಟ್ಟಾಗುವವರೆಗೆ ಗುರುವನ್ನು ಬಿಟ್ಟು ಹೋಗುವ ಆಲೋಚನೆಯಾಗಲಿ ಇರದು. ತತ್ತ್ವ ಬೇಗ ಮನದಟ್ಟಾಗಬೇಕೆನ್ನುವ ಅವಸರವಾಗಲೀ ಇಲ್ಲ. ಆತುರಕ್ಕೆ ಪಕ್ಕಾಗುವ ವಸ್ತುವಲ್ಲ ತತ್ತ್ವ. ಇದು 'ಚೆನ್ನಾಗಿ' ಕುಳಿತುಕೊಳ್ಳುವುದರ ಧ್ವನಿ.

ಹೀಗೆ ಶಿಷ್ಯನು ತನ್ನ ಹತ್ತಿರ 'ಚೆನ್ನಾಗಿ' ಕುಳಿತುಕೊಂಡಾಗ, ಗುರುವು ಅವನಿಗೆ ಮಾಡುವ ಉಪದೇಶವಾದರೂ ಸಾಮಾನ್ಯವಾದುದಲ್ಲ. ತತ್ತ್ವವನ್ನು ಅರಿತುಕೊಳ್ಳುವ ಬಗೆಗಳನ್ನೆಲ್ಲ, ಅದರ ಗುಟ್ಟುಗಳನ್ನೆಲ್ಲ, ಅದರ ಇಂಗಿತಗಳನ್ನೆಲ್ಲ ತಿಳಿಯಹೇಳುತ್ತಾನೆ. ಶಿಷ್ಯನು ಯೋಗ್ಯನೆಂಬ, ಸಮರ್ಥನೆಂಬ ಮನವರಿಕೆಯಾಗಬೇಕಷ್ಟೆ. ಗುರುವಿನ ಉಪದೇಶವೂ ಸಮರ್ಥವಾಗುತ್ತದೆ. ಬೇರೆಯ ಶಿಷ್ಯನಿಗೆ ಈ ಬಗೆಯ ಉಪದೇಶ ದೊರೆಯಲಾರದು. 'ಅಂತೆಗೆ ತಕ್ಕ ಬೊಂತೆ'. ಮೆಚ್ಚಿನ ಶಿಷ್ಯನಿಗೆ ಗುರು ಮಾಡುವುದು ರಹಸ್ಯೋಪದೇಶ; ತನ್ನ ಒಡಲನ್ನೇ ತೆರೆದು ಶಿಷ್ಯನಿಗೆ ತೋರಿಸುತ್ತಾನೆ. ಉಪನಿಷತ್ತೆಂದರೆ ಈ ತೆರನಾದ ರಹಸ್ಯೋಪದೇಶವೆಂದೂ ಅರ್ಥವಿದೆ. ಶಿಷ್ಯನು ಗುರುವಿಗೆ ತುಂಬ ಬೇಕಾದವನಾಗಿ, ಅವನ ಹತ್ತಿರವೇ ಸರಿಯುವುದರಿಂದ ಉಪನಿಷತ್ತಿಗೆ 'ಸಮೀಪ ಸದನ', ಎಂದರೆ ಹತ್ತಿರ ಹೋಗುವುದು ಎಂಬರ್ಥವನ್ನೂ ಸೂಚಿಸುತ್ತಾರೆ (ತ್ರಿಕಾಂಡಶೇಷ). ಸರಿಯಾದ ಗುರುವನ್ನು ಅರಸಿ ಅವನ ಬಳಿಗೆ ಹೋಗುವುದೂ ಸಮೀಪಸದನವೇ; ಅವನನ್ನು ತನ್ನ ಸೇವೆಯಿಂದ, ಶ್ರದ್ಧೆಯಿಂದ ಮೆಚ್ಚಿಸಿ ಅವನಿಗೆ ಹತ್ತಿರವಾಗುವುದೂ ಸಮೀಪಸದನವೇ.

ಗುರುವಿನ ಹತ್ತಿರ ನಿಂತು (ಚೆನ್ನಾಗಿ ಕುಳಿತು) ಅವನ ರಹಸ್ಯೋಪದೇಶವನ್ನು ಪಡೆದುಕೊಂಡವನಿಗೆ ತಿಳಿಯುವುದು ತತ್ತ್ವ. ರಹಸ್ಯೋಪದೇಶವೆಂದರೆ ತತ್ತ್ವವೇ ತಾನೇ? ಅಮರಕೋಶಕ್ಕೆ ಟೀಕೆಯನ್ನು ಬರೆದ ಭರತನೆಂಬುವವನು ಉಪನಿಷತ್ತೆಂಬ ಮಾತಿಗೆ ತತ್ತ್ವವೆಂದೇ ಅರ್ಥ ಹೇಳಿರುವುದು ಈ ನೆಲೆಯಲ್ಲಿ. ರಹಸ್ಯೋಪದೇಶವನ್ನೂ ತತ್ತ್ವನಿರೂಪಣೆಯನ್ನೂ ಮಾಡಿ ಮುಗಿಸಿದಾಗ ಗುರು ಹೇಳುವ ಮಾತು

'ಇತ್ಯುಪನಿಷತ್' (ಎಂದರೆ ಇಲ್ಲಿಗೆ ಉಪನಿಷತ್ತು ಮುಗಿಯಿತು) ಎಂಬುದು. ಗುರುವಿನ ಪ್ರವಚನವನ್ನೇ ಒಂದು ಗ್ರಂಥ, ಒಂದು ಪ್ರಕರಣ ಎಂದು ಭಾವಿಸಿದರೆ ಅದೇ ಉಪನಿಷತ್ತು ಎನಿಸಿಕೊಳ್ಳುತ್ತದೆ. ಬೇರೆ ಬೇರೆ ಉಪನಿಷತ್ತುಗಳು ಬೇರೆ ಬೇರೆ ಗ್ರಂಥಗಳು, ಪ್ರಕರಣಗಳು ಎಂದಾದುದು ಹೀಗೆ. ಹಲವಾರು ಉಪನಿಷತ್ತುಗಳು ಎನ್ನುವಾಗ ನಮ್ಮ ಗಮನದಲ್ಲಿರುವುದು ಗ್ರಂಥಗಳು. ಮೊದಲಿಗೆ ಉಪನಿಷತ್ತೆಂದರೆ ರಹಸ್ಯೋಪದೇಶ, ತತ್ತ್ವನಿರೂಪಣೆಯೆಂಬಷ್ಟೇ ಅರ್ಥವಿದ್ದುದು 'ಏಷ ಆದೇಶಃ, ಏಷ ಉಪದೇಶಃ, ಏಷಾ ವೇದೋಪನಿಷತ್' ಎಂಬ ಒಕ್ಕಣೆಯಿಂದ ಸ್ಪಷ್ಟವಾಗುತ್ತದೆ.

ಗ್ರಂಥರೂಪವಾದ ಉಪನಿಷತ್ತುಗಳಿಗೆ ಭಾಷ್ಯವನ್ನು ಬರೆದವರಲ್ಲಿ ಮೊದಲಿಗರು ಶಂಕರಾಚಾರ್ಯರು (೬೩೨-೬೬೪). ಅವರ ಪ್ರಕಾರ ಉಪನಿಷತ್ತೆಂಬ ಮಾತಿನ ಮೂಲ ಸಾಮಗ್ರಿ 'ಷಡ್‌ಲೃ' ಎಂಬ ಧಾತು. ಇದಕ್ಕೆ 'ಹೋಗಲಾಡಿಸುವುದು, ಬಿಡಿಸುವುದು, ಹರಿದು ಹಾಕುವುದು' (ವಿಶರಣೇ) ಎಂದರ್ಥ. ಸಂಸಾರದ ಅನರ್ಥಗಳಿಗೆ ಕಾರಣವಾಗಿರುವುದು ಅವಿದ್ಯೆ ಅಥವಾ ಅಜ್ಞಾನ (ತತ್ತ್ವವನ್ನು ತಿಳಿಯದಿರುವುದು ಅಥವಾ ತಪ್ಪಾಗಿ ತಿಳಿಯುವುದು). ಇದನ್ನು ಹೋಗಲಾಡಿಸಿಕೊಳ್ಳದೆ ಮನುಷ್ಯನಿಗೆ ಶಾಶ್ವತವಾದ ಶಾಂತಿಯೆಂಬ ಪುರುಷಾರ್ಥ ಒದಗಿಬರುವುದಿಲ್ಲ. ಆಧ್ಯಾತ್ಮಿಕಸಾಧನೆಗಳೆಲ್ಲವೂ ಇದರ ಸಲುವಾಗಿಯೇ ಇರುವುದು. ಅವಿದ್ಯೆ ತೊಲಗುವುದು ವಿದ್ಯೆಯಿಂದಲೇ. ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ಬೆಳಕು ಬೇಕಷ್ಟೆ. ಬೇರೆ ಯಾವ ಸಾಧನೆಯಿಂದಲೂ ಸಂಸಾರದ ಕಾರಣವು ಮರೆಯಾಗದು. ಹೀಗೆ ಅವಿದ್ಯೆಯನ್ನು ಕಳೆದುಕೊಳ್ಳುವ ಉಪಾಯ ಗ್ರಂಥರೂಪವಾದ ಉಪನಿಷತ್ತುಗಳಲ್ಲಿ ಕಾಣಸಿಗುವುದರಿಂದ ಅವು ಉಪನಿಷತ್ತೆನಿಸಿಕೊಂಡವು.

ಉಪನಿಷತ್ತುಗಳಲ್ಲಿ 'ಆತ್ಮನನ್ನು ತಿಳಿದುಕೋ' ಎಂಬುದೇ ಪ್ರಧಾನವಾಗಿ ಬರುವ ಕರೆಯಾದುದರಿಂದ, ತಿಳಿದುಕೊಳ್ಳುವುದು ಉಪನಿಷತ್ತಿನ ಉದ್ದೇಶ. ಈ ದೃಷ್ಟಿಯಿಂದಲೇ ಉಪನಿಷತ್ತುಗಳನ್ನು ಜ್ಞಾನಕಾಂಡವೆಂದು ಕರೆಯುವುದು. ಜ್ಞಾನಕ್ಕೆ ವಿದ್ಯೆಯೆಂಬ ಇನ್ನೊಂದು ಹೆಸರೂ ಇರುವದರಿಂದ ಪರತತ್ತ್ವವೆನಿಸಿದ ಆತ್ಮನನ್ನು (ಎಂದರೆ ಬ್ರಹ್ಮನನ್ನು) ಅರಿತುಕೊಳ್ಳುವುದು ಬ್ರಹ್ಮವಿದ್ಯೆಯೆಂದೂ ಪ್ರಸಿದ್ಧವಾಯಿತು. ಈ ಬ್ರಹ್ಮವಿದ್ಯೆಯು ನಮ್ಮ ಹತ್ತಿರ ಬರಲು ನೆರವಾಗುವ ಉಪನಿಷತ್ತುಗಳು ಕೂಡ ಬ್ರಹ್ಮವಿದ್ಯಾಗ್ರಂಥಗಳು ('ಉಪನಿಷದ್ಯತೇ ಪ್ರಾಪ್ಯತೇ ಬ್ರಹ್ಮವಿದ್ಯಾ ಅನಯಾ').

ಮನುಷ್ಯನು ತನ್ನ ಬದುಕಿನಲ್ಲಿ ಬಯಸುವುದನ್ನು ಪುರುಷಾರ್ಥವೆನ್ನುತ್ತಾರಷ್ಟೆ? ಇವು ನಾಲ್ಕು ಬಗೆಯಾಗಿವೆ—ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದು. ಮೊದಲ ಮೂರೂ ಇಲ್ಲಿನ ಬದುಕಿಗೆ ಅಗತ್ಯವಾಗಿವೆಯಾಗಿ ಅವು 'ತ್ರಿವರ್ಗ' ವೆನಿಸಿಕೊಂಡವು. ಧರ್ಮವನ್ನು ಕೈ ಬಿಡದೆ ಹಣವನ್ನು ಸಂಪಾದಿಸುವುದಾಗಲಿ (ಅರ್ಥ), ವಿಷಯ ಸುಖವನ್ನು ಪಡೆದುಕೊಳ್ಳುವುದಾಗಲೀ (ಕಾಮ) ನಡೆದು ಮನಸ್ಸು ಪ್ರಾಪಂಚಿಕವಾಗಿ ಮುನ್ನಡೆದರೆ ಅದು ಅಭ್ಯುದಯವೆನಿಸಿಕೊಳ್ಳುತ್ತದೆ. ಇದನ್ನು ಮೀರಿ ಸಂಸಾರದ ಕೋಟಲೆಗಳನ್ನೆಲ್ಲ ತೀರಿಸಿಕೊಂಡು ಮತ್ತೆ ಸಂಸಾರದ ಸುಳಿಗೆ ಸಿಕ್ಕಿಕೊಳ್ಳದಿರುವುದು ಮೋಕ್ಷ. ಅದನ್ನು ನಿಃಶ್ರೇಯಸವೆಂದು ಕರೆಯುತ್ತಾರೆ. ತ್ರಿವರ್ಗವನ್ನು ದಾಟಿ ಇದಿರುವುದರಿಂದ 'ಅಪವರ್ಗ'. ಅಭ್ಯುದಯಕ್ಕೆ ಧರ್ಮ ಕಾರಣವಾಗುವಂತೆ ನಿಃಶ್ರೇಯಸಕ್ಕೆ ಆತ್ಮಜ್ಞಾನ ಕಾರಣವಾಗುತ್ತದೆ. ಈ ನಿಃಶ್ರೇಯಸವನ್ನೇ ಕುರಿತು ಹೇಳುವ ಗ್ರಂಥಗಳು ಉಪನಿಷತ್ತುಗಳು. ಈ ಅರ್ಥದಲ್ಲಿ ಉಪನಿಷತ್ತೆಂಬ ಮಾತಿಗೆ 'ನಿಃಶ್ರೇಯಸವು ಯಾವುದರಲ್ಲಿ ಅಡಗಿ ಕುಳಿತಿದೆಯೋ' ಅದು ('ಉಪನಿಷಣ್ಣಂ ಅಸ್ಯಾಂ ಪರಂ ಶ್ರೇಯಃ') ಎಂಬ ವಿವರಣೆಯೂ ಇದೆ.

ಉಪನಿಷತ್ತುಗಳೆಂಬ ಗ್ರಂಥರಾಶಿಯಲ್ಲಿ ಆತ್ಮವಿದ್ಯೆಯ ವಿವರಗಳೆಲ್ಲ ದೊರೆಯುವುದರಿಂದ ಉಪನಿಷತ್ತನ್ನು ವೇದಾಂತಶಾಸ್ತ್ರವೆಂದೂ ಕರೆಯುವುದುಂಟು. ಮನುಷ್ಯನ ಪುರಾಷಾರ್ಥಸಾಧನೆಗೆ ಅಗತ್ಯವಾದುದು ತತ್ತ್ವವಿವೇಚನೆ. ತತ್ತ್ವವನ್ನು ತಿಳಿಯಹೇಳುವುದರೊಂದಿಗೆ, ಮನುಷ್ಯನು ದಾರಿತಪ್ಪಿ, ಕಂಗೆಟ್ಟು ಹಾಳಾಗದಂತೆ ಅವನ ಒಳಿತನ್ನು ಕುರಿತು ಉಪದೇಶಮಾಡುವುದು ಶಾಸ್ತ್ರ ('ತತ್ತ್ವ ಹಿತಯೋಃ ಯಥಾವಚ್ಛಾಸನಂ'). ಉಪನಿಷತ್ತುಗಳಲ್ಲಿ ಇವೆರಡೂ ಇವೆ. ಆದ್ದರಿಂದ ಶಾಸ್ತ್ರ.

೪

ಉಪನಿಷತ್ತುಗಳು ವೇದವಾಙ್ಮಯದ ಕಡೆಯ ಭಾಗವಾಗಿ ವೇದಾಂತ ವೆನಿಸಿಕೊಂಡವು ಎಂದು ಮೊದಲೇ ಹೇಳಿದೆವಲ್ಲ. ಈ ವಿಚಾರವನ್ನು ಕುರಿತು ಸ್ವಲ್ಪ ವಿವರಣೆಯ ಅಗತ್ಯವಿದೆ. ವೇದವಾಙ್ಮಯವು ಮೊದಲಿಗೆ ಬರಹದಲ್ಲಿ ಮೂಡಿ ಬರಲಿಲ್ಲ. ಕೇಳ್ಮೆಯಿಂದಲೇ ಅದು ಗುರು-ಶಿಷ್ಯಪರಂಪರೆಯಲ್ಲಿ ಉಳಿದುಕೊಂಡಿದ್ದಿತು. ಗುರು ಹೇಳುವುದನ್ನು ಆದರದಿಂದ ಶಿಷ್ಯ ಕೇಳಿ, ತನ್ನ ಮನಸ್ಸಿನಲ್ಲಿ ಅದನ್ನು ಚೆನ್ನಾಗಿ

ಬೇರೂರಿಸಿಕೊಳ್ಳುವುದು ಹಿಂದಿನ ಪದ್ಧತಿ. ಆದ್ದರಿಂದ ವೇದಾಧ್ಯಯನ 'ಶ್ರುತಿ' ಯೆನಿಸಿಕೊಂಡಿತು. ಶ್ರುತಿಯೆಂದರೆ ಕಿವಿಯಿಂದ ಕೇಳಿಸಿಕೊಳ್ಳುವುದು. ನೆನಪಿನಲ್ಲಿರಿಸಿ ಕೊಳ್ಳುವುದಕ್ಕೆ ನೆರವಾಗಲೆಂದು ಛಂದಸ್ಸಿನ ಬಳಕೆಯಿದ್ದಿತಾಗಿ ವೇದಕ್ಕೆ ಛಂದವೆಂಬ ಹೆಸರೂ ಇದೆ.

ವೇದವಾಙ್ಮಯವು ಒಂದೇ ಎಂಬುದೂ, ಅಖಂಡವಾದುದು ಎಂಬುದೂ ಸಂಪ್ರದಾಯದ ಕಲ್ಪನೆಗಳು. ವೇದವೆಂಬ ಮಾತಿನ ಬಳಕೆ ಬಹುಮಟ್ಟಿಗೆ ಏಕವಚನ ದಲ್ಲೇ. ಆದರೆ ವಿನಿಯೋಗದ ದೃಷ್ಟಿಯಿಂದ ಮೊದಲಿಗೆ ಮೂರು ವೇದಗಳೆಂದೂ (ತ್ರಯೀ), ಅನಂತರ ನಾಲ್ಕು ವೇದಗಳೆಂದೂ (ಚತುರ್ವೇದ) ಎಣಿಕೆಗೆ ಬಂದವು. ವಿನಿಯೋಗವೆಂದರೆ ಉಪಯೋಗಕ್ಕೆ ತಂದುಕೊಳ್ಳುವುದು. ಯಜ್ಞಯಾಗಾದಿಗಳಲ್ಲಿ ವೇದಮಂತ್ರಗಳನ್ನು ಬಳಸಿಕೊಳ್ಳುವುದೋ, ತಂತ್ರಗಳಲ್ಲಿ ವೇದದ ವಿಧಿಗಳನ್ನು ಅಳವಡಿಸಿಕೊಳ್ಳುವುದೋ, ಆರೋಗ್ಯ ಚಿಕಿತ್ಸೆ ಧನಸಂಪತ್ತು ಮೊದಲಾದ ಪ್ರಯೋಜನಗಳಿಗೆ ವೈದಿಕ ಮಂತ್ರಗಳನ್ನೋ ವೈದಿಕ ಕ್ರಮಗಳನ್ನೋ ಬಳಸಿಕೊಳ್ಳುವುದು ವಿನಿಯೋಗ.

'ತ್ರಯೀ' ಎನ್ನುವಾಗ ಋಗ್ವೇದ, ಯಜುರ್ವೇದ, ಸಾಮವೇದ ಎಂದು ವಿಭಾಗ. ಈ ವಿಭಾಗವೇರ್ಪಟ್ಟ ಸಂದರ್ಭವೆಂದರೆ ಯಜ್ಞಯಾಗಾದಿಗಳಲ್ಲಿ ಅಗತ್ಯವಾಗಿ ಇರಲೇಬೇಕಾದ ಮೂವರು ಋತ್ವಿಜರು— ಹೋತೃ (ದೇವತೆಗಳನ್ನು ಆಹ್ವಾನಿಸಿ, ಅವರನ್ನು ಸ್ತುತಿಸಿ, ಯಜ್ಞಕ್ಕೆ ಬರಮಾಡಿಕೊಳ್ಳುವವನು), ಅಧ್ವರ್ಯು (ಬಂದ ದೇವತೆಗಳಿಗೆ ಅಗ್ನಿಯ ಮೂಲಕವಾಗಿ ಎಡೆಯನ್ನೊಪ್ಪಿಸುವವನು), ಉದ್ಗಾತೃ (ಕೆಲವೊಂದು ಸಂದರ್ಭದಲ್ಲಿ ದನಿಯೇರಿಸಿ ಹಾಡುವವನು). ಹೋತೃ ತನ್ನ ಕೆಲಸಕ್ಕೆ ಬಳಸಿಕೊಳ್ಳುವುದು ಋಗ್ವೇದವನ್ನು, ಅಧ್ವರ್ಯು ಯಜುರ್ವೇದವನ್ನು, ಉದ್ಗಾತೃ ಸಾಮವೇದವನ್ನು. ಈ ಮೂವರಲ್ಲದೆ ಬ್ರಹ್ಮನೆಂಬ ನಾಲ್ಕನೆಯ ಋತ್ವಿಜನೂ ಇರುತ್ತಿದ್ದ. ಉಳಿದ ಮೂವರ ಕೆಲಸಗಳು ಸರಿಯಾಗಿ ನಡೆಯುವಂತೆ ನೋಡಿ ಕೊಳ್ಳುವವ ಇವನು. ಇವನಿಗೆ ಮೂರೂ ವೇದಗಳ ಪರಿಚಯ ಚೆನ್ನಾಗಿ ಇರುತ್ತಿತ್ತು.

ಕಾಲಾಂತರದಲ್ಲಿ ಬ್ರಹ್ಮನೆಂಬ ಈ ನಾಲ್ಕನೆಯ ಋತ್ವಿಜನ ಸಲುವಾಗಿಯೇ ಅಥರ್ವವೇದವೆಂಬ ಇನ್ನೊಂದು ವೇದವೂ ಸಿದ್ಧವಾಗಿ, ವೇದಗಳು ನಾಲ್ಕೆಂಬ ಎಣಿಕೆ ಶುರುವಾಯಿತು. ಆದರೆ ಸ್ವಭಾವದಲ್ಲಿಯೂ, ಶೈಲಿಯಲ್ಲಿಯೂ,

ವಿನಿಯೋಗದಲ್ಲಿಯೂ ಇದು ಇತರ ಮೂರು ವೇದಗಳಿಗಿಂತ ತೀರ ಬೇರೆಯಾಗಿರುವು ದನ್ನು ಗಮನಿಸಬಹುದು. ಇದು ಹೇಗಾದರೂ ಇರಲಿ, ವೇದಗಳು ನಾಲ್ಕೆಂಬ ಎಣಿಕೆಯೇನೋ ಉಳಿದುಕೊಂಡಿತು. ಒಂದೊಂದು ವೇದವೂ ಬರಹದಲ್ಲಿ ಬರದೆ ಗುರುಶಿಷ್ಯ ಸಂಪ್ರದಾಯದಲ್ಲಿಯೇ ಬಂದುದರಿಂದ ಹಲವಾರು ಶಾಖೆಗಳು ಒದಗಿಬಂದುದು ಸಹಜವೇ. ಹೀಗಾಗಿ ಋಗ್ವೇದದಲ್ಲಿ ಇಪ್ಪತ್ತೊಂದು ಶಾಖೆಗಳು, ಯಜುರ್ವೇದದಲ್ಲಿ ಒಂದು ನೂರು ಮತ್ತು ಒಂಬತ್ತು ಶಾಖೆಗಳು, ಸಾಮವೇದದಲ್ಲಿ ಒಂದು ಸಾವಿರ ಶಾಖೆಗಳು, ಅಥರ್ವ ವೇದದಲ್ಲಿ ಐವತ್ತು ಶಾಖೆಗಳು ಎಂದು ಸಂಪ್ರದಾಯದ ಎಣಿಕೆ. ಆದರೆ ಇವೆಲ್ಲವೂ ನಮ್ಮ ಕಾಲದಲ್ಲಿ ಉಳಿದು ಬಂದಿಲ್ಲವೆನ್ನಿ.

ಋಗ್ವೇದವೇ ಮೂಲಭೂತವಾದ ವೇದವೆನ್ನುವುದರಲ್ಲಿ ಸಂಶಯವಿಲ್ಲ. ಈಗ ಯಜುರ್ವೇದವೆಂಬ ಗ್ರಂಥದಲ್ಲಿ ಅರ್ಧದಷ್ಟು ಭಾಗ ಋಗ್ವೇದಮಂತ್ರಗಳೇ ಇವೆ. ಯಜುರ್ವೇದವು ಗದ್ಯಪದ್ಯಾತ್ಮಕವಾದುದು. ಋಗ್ವೇದವಾದರೊ ಕೇವಲ ಪದ್ಯಾತ್ಮಕವಾಗಿದೆ. ಇನ್ನು ಸಾಮವೇದದಲ್ಲಿ ಎಪ್ಪತ್ತೈದು ಋಕ್ಕುಗಳನ್ನು ಬಿಟ್ಟರೆ ಉಳಿದದ್ದೆಲ್ಲ ಋಗ್ವೇದದಿಂದಲೇ ಗ್ರಹಿಸಿದ್ದು. ಇದೂ ಪದ್ಯಾತ್ಮಕವಾದ ವೇದವೇ; ಪದ್ಯವೆಂದರೆ ಛಂದೋಬದ್ಧವಾದ, ಪಾದಬದ್ಧವಾದ ಮಂತ್ರಗಳು; ಸಾಮವೇದದ ಮಂತ್ರಗಳು ಗಾನಕ್ಕೆ ತಕ್ಕಂಥವು. ಅಥರ್ವ ವೇದದಲ್ಲಿ ಒಂದನೇ ಐದು ಭಾಗದಷ್ಟು ಋಗ್ವೇದದಿಂದಲೇ ಆಯ್ದುಕೊಂಡ ಋಕ್ಕುಗಳು. ಈ ವೇದದಲ್ಲಿ ಗದ್ಯಭಾಗವೂ ಇದೆ. ಛಂದೋಬದ್ಧವಾದ ಋಕ್ಕುಗಳೂ ಇವೆ. ಈ ನಾಲ್ಕು ವೇದಗಳನ್ನೂ ಸಂಹಿತೆಗಳೆಂದು ಕರೆಯುತ್ತಾರೆ. ಸಂಹಿತೆಯೆಂದರೆ ಒಟ್ಟುಗೂಡಿಸಿದ್ದು ಎಂಬರ್ಥ ವಾದರೂ, ಪದಗಳನ್ನು ಬಿಡಿಸದೆ ಸಹಜವಾಗಿ ಸೇರಿಸಿಕೊಂಡು ಹೇಳುವುದು ಎಂಬರ್ಥವೇ ಸಾಂಪ್ರದಾಯಿಕವಾದುದು. ಪದಗಳನ್ನು ಬಿಡಿಸಿ ಬಿಡಿಸಿ ಹೇಳಿದಾಗ ಅದು ಪದಪಾಠವೆನಿಸಿಕೊಳ್ಳುತ್ತದೆ. ಸೇರಿಸಿ ಹೇಳಿದಾಗ ಸಂಹಿತಾಪಾಠ. ನಿರುಕ್ತದಲ್ಲಿ 'ಪದ ಪ್ರಕೃತಿಃ ಸಂಹಿತಾಃ ವರ್ಣಾನಾಂ ಏಕ ಪ್ರಾಣಯೋಗಾಃ ಸಂಹಿತಾ' ಎಂಬ ನಿರ್ದೇಶನವನ್ನು ಕಾಣುತ್ತೇವೆ. 'ಅಗ್ನಿಮೀಳೇ' ಎಂದಾಗ ಸಂಹಿತಾಪಾಠ, 'ಅಗ್ನಿಂ ಈಳೇ' ಎಂದಾಗ ಪದಪಾಠ.

ಈಗ ಋಗ್ವೇದದಲ್ಲಿ ಐತರೇಯ, ಕೌಷೀತಕೀ ಎಂಬೆರಡು ಶಾಖೆಗಳೂ, ಯಜುರ್ವೇದದಲ್ಲಿ ಶುಕ್ಲಯಜುರ್ವೇದ, ಕೃಷ್ಣಯಜುರ್ವೇದ ಎಂಬೆರಡು

ಸಂಹಿತೆಗಳೂ, ಸಾಮವೇದದಲ್ಲಿ ತಲವಕಾರ (ಜೈಮಿನೀಯ) ಮತ್ತು ತಾಂಡ್ಯ ಎಂಬ ಎರಡು ಶಾಖೆಗಳೂ, ಅಥರ್ವವೇದದಲ್ಲಿ ಶೌನಕ, ಪಿಪ್ಪಲಾದ ಎಂಬ ಶಾಖೆಗಳೂ ಬಳಕೆಯಲ್ಲಿವೆ. ನಮಗೆ ಇಲ್ಲಿ ಮುಖ್ಯವಾದ ವಿಚಾರವೆಂದರೆ ಒಂದೊಂದು ವೇದಶಾಖೆಯಲ್ಲೂ ಕಂಡುಬರುವ ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳೆಂಬ ವಿಭಾಗ. ಇದನ್ನು ಆಗಲೇ ಹೇಳಲಾಗಿದೆ. ಮಂತ್ರದ್ರಷ್ಟಾರರಾದ ಋಷಿಗಳು ತಮ್ಮ ತಪಸ್ಸಿನಿಂದ, ಒಳಗಣ ಬೆಳಕಿನಿಂದ, ಸಾಕ್ಷಾತ್ಕರಿಸಿಕೊಂಡ ಮಂತ್ರಗಳ ಸಂಕಲನವು ಸಂಹಿತೆಯಲ್ಲಿ ಕಾಣಸಿಗುತ್ತವೆ. ಈ ಮಂತ್ರಗಳನ್ನು ಯಜ್ಞವೇ ಮೊದಲಾದ ಕ್ರಿಯೆಗಳಿಗೆ ಬಳಸುವ ಬಗೆಯನ್ನು (ಎಂದರೆ ವಿನಿಯೋಗವನ್ನು) ಹೇಳುವ ಭಾಗ ಬ್ರಾಹ್ಮಣ. ವೇದಮಂತ್ರಗಳ ತಾತ್ಪರ್ಯವನ್ನೂ, ವೇದವಿಧಿಗಳ ಸ್ವಾರಸ್ಯವನ್ನೂ ಸಂಕೇತವನ್ನೂ ಅರಿತುಕೊಳ್ಳಲು ನೆರವಾಗುವ ಭಾಗ ಆರಣ್ಯಕ. ಬ್ರಾಹ್ಮಣಗಳಲ್ಲಿರುವಂತೆ ಆರಣ್ಯಕದಲ್ಲೂ ಕರ್ಮದ ಪ್ರಸಕ್ತಿಯಿದೆ. ಆದರೆ ಕರ್ಮದ ಆಚರಣೆಗಿಂತ, ಸಾಂಕೇತಿಕ ಅರ್ಥ ಮತ್ತು ತಾತ್ಪರ್ಯಗಳ ಕಡೆ ಗಮನ ಹೆಚ್ಚು. ಈ ಆರಣ್ಯಕಗಳ ಕೊನೆಯಲ್ಲಿ ಉಪನಿಷತ್ತುಗಳು ರಹಸ್ಯೋಪದೇಶಗಳಾಗಿ, ತತ್ತ್ವಚಿಂತನೆಯ ಪ್ರಕಾರಗಳಾಗಿ ಸೇರಿಕೊಂಡಿವೆಯೆಂಬುದನ್ನು ಮೊದಲೇ ಸೂಚಿಸಿದೆವಷ್ಟೇ.

೫

ಬ್ರಹ್ಮಚಾರಿ ಅಧ್ಯಯನ ಮಾಡುವುದು ಸಂಹಿತೆಯ ಭಾಗವನ್ನು. ಗೃಹಸ್ಥರಿಗೆ ಪ್ರಸಕ್ತವಾಗುವುದು ಬ್ರಾಹ್ಮಣಗಳು. ಅಭ್ಯುದಯದ ಉದ್ದೇಶದಿಂದ ಮಾಡಬೇಕಾದ ಕರ್ಮಗಳನ್ನು ಬ್ರಾಹ್ಮಣಗಳು ತಿಳಿಸುತ್ತವೆ. ಬ್ರಹ್ಮವೆಂಬ ಮಾತಿಗೆ ಯಜ್ಞ, ಮಂತ್ರ ಎಂಬರ್ಥಗಳು. ಯಜ್ಞವೆಂಬ ಪದದ ಹರವಿನಲ್ಲಿ ಎಲ್ಲ ಧಾರ್ಮಿಕ ಕ್ರಿಯೆಗಳೂ ಸೇರಿಕೊಳ್ಳುತ್ತವೆ. ಬ್ರಹ್ಮವನ್ನು ಅರಸಿ ಒಲಿಸಿಕೊಳ್ಳುವುದರ ಬಗೆಯನ್ನು ಹೇಳುವ ಗ್ರಂಥ ಬ್ರಾಹ್ಮಣ. ಗೃಹಸ್ಥರು ತಮಗೆ ಮುಪ್ಪಡರಿದಾಗ, ಸಂಸಾರದ ಭಾರವನ್ನು ಮಕ್ಕಳಿಗೆ ವಹಿಸಿ, ಊರಿನ ನೆರೆಯಲ್ಲಿದ್ದ ಕಾಡುಗಳಲ್ಲಿ ನೆಲೆಸಿ ವೇದಮಂತ್ರಗಳ ತಾತ್ಪರ್ಯವನ್ನೂ, ವೈದಿಕ ಕ್ರಿಯೆಗಳ ಸಂಕೇತಗಳನ್ನೂ ಕುರಿತು ಚಿಂತನೆ ಮಾಡುತ್ತಿದ್ದುದು ಆರಣ್ಯಕಗಳಿಗೆ ಮೂಲವಾಯಿತು. ಇದೇ ಮನೋವೃತ್ತಿಯು ಮುಂದರಿದು ಕರ್ಮದ

ಪ್ರಸಕ್ತಿಯನ್ನೂ, ಮಂತ್ರಗಳ ಸಾಂಕೇತಿಕ ಚಿಂತನೆಯನ್ನೂ ಕೈಬಿಟ್ಟು, ಕೇವಲ ತಪಸ್ಸಿನಿಂದಲೇ ತತ್ತ್ವವನ್ನು ನೇರವಾಗಿ ಅರಿತುಕೊಳ್ಳುವ ನೆಲೆಯಲ್ಲಿ ಉಪನಿಷತ್ತುಗಳು ಸಿದ್ಧವಾದುವು.

ಗ್ರಂಥರೂಪವಾದ ಉಪನಿಷತ್ತುಗಳು ಆರಣ್ಯಕಗಳನ್ನನುಸರಿಸಿ ಕಾಣಸಿಕೊಳ್ಳು ವುದು ಈ ಕಾರಣದಿಂದ. ಆದರೆ ಎಲ್ಲ ಉಪನಿಷತ್ತುಗಳೂ ಆರಣ್ಯಕಗಳಾದ ಮೇಲೇ ಬರುತ್ತವೆ ಎನ್ನುವಂತಿಲ್ಲ. ಕೆಲವು ಬ್ರಾಹ್ಮಣಗಳಿಗೆ ಹೊಂದಿಕೊಂಡೇ ಬರುವುದುಂಟು. ಮತ್ತೆ ಕೆಲವು ಸಂಹಿತೆಗಳ ನಂತರವೂ ಬರುವುದುಂಟು. ಅಂತೂ ವೇದವಾಙ್ಮಯದಲ್ಲಿ ಸಂಹಿತೆಗೊ, ಬ್ರಾಹ್ಮಣಕ್ಕೊ, ಆರಣ್ಯಕಕ್ಕೋ ತೆಕ್ಕೆಹಾಕಿಕೊಂಡೇ ಬರುವ ಮತ್ತು ವೇದಶಾಖೆಗಳೊಂದಿಗೇ ನಂಟನ್ನು ಪಡೆದುಕೊಂಡಿರುವ, ಉಪನಿಷತ್ತುಗಳನ್ನು ವೇದಾಂತಗಳೆಂದು ನಿರ್ದೇಶಿಸುತ್ತಾರೆ. ಶಂಕರಾಚಾರ್ಯರು ಇಂಥ ಉಪನಿಷತ್ತುಗಳನ್ನು ಮಾತ್ರವೇ ಶ್ರುತಿಯಂತೆ ಕಾಣಸಿದ್ದಾರೆ. ಅವುಗಳಿಗೆ ಭಾಷ್ಯ ಬರೆದಿದ್ದಾರೆ. ಅವುಗಳ ಆಧಾರದ ಮೇಲೆ ವೇದಾಂತ ದರ್ಶನದ ಕಟ್ಟಡವನ್ನು ಎಬ್ಬಿಸಿದ್ದಾರೆ.

ಇಂಥ 'ವೇದಾಂತಗಳು' (ಎಂದರೆ ಶ್ರುತಿರೂಪವಾದ ಉಪನಿಷತ್ತುಗಳು) ಹತ್ತೆಂಬ ಎಣಿಕೆ ಸಾಂಪ್ರದಾಯಿಕವಾದುದು. ಈ ಉಪನಿಷತ್ತುಗಳಲ್ಲಿ ಸೇರದೆ, ಅರ್ವಾಚೀನವೆನ್ನಬಹುದಾದ ಮುಕ್ತಿಕೋಪನಿಷತ್ತು ಕೂಡ ಈ ಹತ್ತು ಉಪನಿಷತ್ತುಗಳನ್ನೇ ಎಣಿಸಿದೆ–

ಈಶ-ಕೇನ-ಕಠ-ಪ್ರಶ್ನ-ಮುಂಡ-ಮಾಂಡೂಕ್ಯ-ತಿತ್ತಿರಿಃ ।
ಐತರೇಯಂ ಚ ಛಾಂದೋಗ್ಯಂ ಬೃಹದಾರಣ್ಯಕಂ ತಥಾ ॥

ಈಶೋಪನಿಷತ್ತು (ಅಥವಾ ಈಶಾವಾಸ್ಯ ಉಪನಿಷತ್ತು), ಕಠೋಪನಿಷತ್ತು (ಅಥವಾ ಕಾಠಕೋಪನಿಷತ್ತು), ಕೇನ (ಅಥವಾ ತಲವಕಾರೋಪನಿಷತ್ತು), ಪ್ರಶ್ನೋಪನಿಷತ್ತು, ಮುಂಡಕೋಪನಿಷತ್ತು, ಮಾಂಡೂಕ್ಯೋಪನಿಷತ್ತು, ತೈತ್ತಿರೀಯೋಪ ನಿಷತ್ತು, ಐತರೇಯೋಪನಿಷತ್ತು, ಛಾಂದೋಗ್ಯೋಪನಿಷತ್ತು ಮತ್ತು ಬೃಹದಾರಣ್ಯ ಕೋಪನಿಷತ್ತು ಇವು ದಶೋಪನಿಷತ್ತುಗಳು.

ಶಂಕರಾಚಾರ್ಯರು ಮತ್ತು ಮಧ್ವಾಚಾರ್ಯರು ಶ್ರುತಿಪ್ರಸ್ಥಾನ ಭಾಷ್ಯಕ್ಕೆ ಆರಿಸಿಕೊಂಡದ್ದು ಇಷ್ಟನ್ನೇ. ಶಂಕರಾಚಾರ್ಯರು ತಮ್ಮ ಸೂತ್ರಪ್ರಸ್ಥಾನ ಭಾಷ್ಯದಲ್ಲಿ

ವಿಷಯಸಮರ್ಥನೆಗಾಗಿ ಈ ಹತ್ತು ಉಪನಿಷತ್ತುಗಳಲ್ಲದೆ ಶ್ವೇತಾಶ್ವತರ, ಕೌಷೀತಕೀ, ಪೈಂಗೀರಹಸ್ಯಬ್ರಾಹ್ಮಣ, ಜಾಬಾಲ ಎಂಬ ಇತರ ಉಪನಿಷತ್ತುಗಳನ್ನೂ ಉಲ್ಲೇಖಿಸಿ ಕೊಂಡಿದ್ದಾರೆ.

ಸೂತ್ರಪ್ರಸ್ಥಾನಕ್ಕೆ ಪ್ರಧಾನವಾದುದು ಬಾದರಾಯಣರ ವೇದಾಂತ ಸೂತ್ರಗಳೆಂದು ಈಗಾಗಲೇ ತಿಳಿದೆವಷ್ಟೆ? ಇಲ್ಲಿ ಔಪನಿಷದದರ್ಶನವೇ ಸಿದ್ಧವಾಗಿರುವುದು. ಇದಕ್ಕಾಗಿ ಈ ಸೂತ್ರಗ್ರಂಥದ ಮೊದಲ ಇಪ್ಪತ್ತೆಂಟು ಅಧಿಕರಣಗಳು ಇಪ್ಪತ್ತೆಂಟು ಉಪನಿಷದ್ವಾಕ್ಯಗಳನ್ನು ಎತ್ತಿಕೊಂಡು ಅವುಗಳ ತಾತ್ಪರ್ಯವನ್ನು ಸೂಚಿಸುತ್ತವೆ. ಬಾದರಾಯಣರು ಈ ಕೆಲಸಕ್ಕೆ ಆರಿಸಿಕೊಂಡ ಉಪನಿಷತ್ತುಗಳು—

ಛಾಂದೋಗ್ಯ (ಹನ್ನೆರಡು ಬಾರಿ)
ಬೃಹದಾರಣ್ಯಕ (ನಾಲ್ಕು ಬಾರಿ)
ಕಠ (ನಾಲ್ಕು ಬಾರಿ)
ಮುಂಡಕ (ಮೂರು ಬಾರಿ)
ತೈತ್ತಿರೀಯ (ಎರಡು ಬಾರಿ)
ಕೌಷೀತಕೀ (ಎರಡು ಬಾರಿ)
ಪ್ರಶ್ನ (ಒಮ್ಮೆ)

ಬಾದರಾಯಣರ ಸೂತ್ರಗಳಿಗೆ ಶಂಕರಾಚಾರ್ಯರು ಭಾಷ್ಯವನ್ನು ರಚಿಸುವಾಗ ಮುಖ್ಯವಾದ ಉಪನಿಷತ್ತುಗಳನ್ನು ಮತ್ತೆ ಮತ್ತೆ ಉದ್ಧರಿಸಿದ್ದಾರೆ. ಛಾಂದೋಗ್ಯೋಪನಿಷತ್ತಿನ ವಾಕ್ಯಗಳನ್ನು ೮೧೦ ಬಾರಿ, ಬೃಹದಾರಣ್ಯಕ ವಾಕ್ಯಗಳನ್ನು ೫೬೭ ಬಾರಿ, ತೈತ್ತಿರೀಯ ವಾಕ್ಯಗಳನ್ನು ೧೪೨ ಬಾರಿ, ಮುಂಡಕೋಪನಿಷತ್ತಿನಿಂದ ವಾಕ್ಯಗಳನ್ನು ೧೨೯ ಬಾರಿ, ಕಠದಿಂದ ೧೦೩ ಬಾರಿ, ಕೌಷೀತಕಿಯಿಂದ ೮೮ ಬಾರಿ, ಶ್ವೇತಾಶ್ವತರದಿಂದ ೫೩ ಬಾರಿ, ಪ್ರಶ್ನದಿಂದ ೩೯ ಬಾರಿ ಮತ್ತು ಐತರೇಯದಿಂದ ೨೨ ಬಾರಿ ಶಂಕರಾಚಾರ್ಯರು ಬಳಸಿಕೊಂಡಿರುವುದನ್ನು ಕಾಣಬಹುದು. ಬಾದರಾಯಣರು ಅವಲಂಬಿಸಿದ ಉಪನಿಷತ್ತುಗಳನ್ನೇ ಆಚಾರ್ಯರೂ ಹಿಡಿದಿದ್ದಾರೆ. ಜೊತೆಗೆ ಶ್ವೇತಾಶ್ವತರ ಮತ್ತು ಐತರೇಯ ಎಂಬೆರಡು ಉಪನಿಷತ್ತುಗಳನ್ನು ಅಧಿಕವಾಗಿ ಆಶ್ರಯಿಸಿದ್ದಾರೆ. ಇಷ್ಟನ್ನು ನಾವು ಸಾಂಪ್ರದಾಯಿಕ ಉಪನಿಷತ್ತುಗಳೆಂದು ಪರಿಗಣಿಸಿದರೆ ಸರಿಯಾದೀತು.

ಉಪನಿಷತ್ತುಗಳೆಂಬ ಹೆಸರನ್ನು ಹೊತ್ತು, ಅಧ್ಯಯನದ ಪುಣ್ಯವನ್ನೂ ಅಷ್ಟಿಷ್ಟು ಪಡೆದುಕೊಂಡಿರುವ ಪ್ರಕರಣ ಗ್ರಂಥಗಳು ನೂರಾರು ಇವೆ. ನೂರೆಂಟು ಉಪನಿಷತ್ತುಗಳು ಎಂದು ಒಂದು ಎಣಿಕೆ. ಮುಕ್ತಿಕೋಪನಿಷತ್ತಿನಲ್ಲಿ ಇವೆಲ್ಲದರ ಒಕ್ಕಣೆಯಿದೆ. ಒಂದು ಸಾವಿರದ ನೂರು ಒಂಬತ್ತು ಉಪನಿಷತ್ತುಗಳಿವೆಯೆಂಬ ಸೂಚನೆಯೂ ಇಲ್ಲಿಯೇ ಇದೆ. ವೆಬರ್ ಎಂಬ ಪಂಡಿತನು ೨೩೫ ಉಪನಿಷತ್ತುಗಳನ್ನು ಸಂಗ್ರಹಿಸಿದನು. ಮ್ಯಾಕ್ಸ್‌ಮುಲ್ಲರ್ ೧೭೦ ಉಪನಿಷತ್ತುಗಳನ್ನು ಪಡೆದುಕೊಂಡನಂತೆ. ಪಾಲ್ ಡಾಯ್‌ಸನ್ ೧೨೩ ಉಪನಿಷತ್ತುಗಳನ್ನು ಪಟ್ಟಿಮಾಡಿದ್ದಾನೆ. ಐವತ್ತು, ಎಪ್ಪತ್ತು, ನೂರು, ನೂರೆಂಟು ಉಪನಿಷತ್ತುಗಳ ಸಂಕಲನಗಳು ಪ್ರಕಟವಾಗಿವೆ. ಹ್ಯೂಮ್ ಎಂಬಾತ ಹದಿಮೂರು ಉಪನಿಷತ್ತುಗಳನ್ನು ಇಂಗ್ಲೀಷಿಗೆ ಅನುವಾದ ಮಾಡಿದ.

ಮೇಲೆ ಕಾಣಿಸಿದ ಹತ್ತು ಸಾಂಪ್ರದಾಯಿಕ ಉಪನಿಷತ್ತುಗಳನ್ನು ಬಿಟ್ಟು ಉಳಿದ ಈ ಪ್ರಕರಣ ಗ್ರಂಥಗಳಲ್ಲಿ ಯೋಗ, ತಂತ್ರ, ಸಾಧನೆ, ಪೂಜೆ, ಪರಿಕರ ಇವುಗಳೇ ಎದ್ದು ಕಾಣುತ್ತವೆ. ಶೈವ, ವೈಷ್ಣವ, ಶಾಕ್ತ ಎಂಬ ಮತಪ್ರಕ್ರಿಯೆಗಳೂ ಇವುಗಳಲ್ಲಿ ತೋರಿಕೊಂಡಿವೆ. ಸಂಹಿತೆ, ಬ್ರಾಹ್ಮಣ, ಆರಣ್ಯಕಗಳ ನೇರವಾದ ನಂಟೂ ಇರದು. ಶೈಲಿಯಲ್ಲೂ, ವಸ್ತುವಿನಲ್ಲೂ ತೀರ ಭಿನ್ನವಾಗಿವೆ. ಔಪನಿಷದ ದರ್ಶನ ಎನ್ನುವಾಗ ಈ ಪ್ರಕರಣಗಳಲ್ಲಿರುವ ವಿಚಾರಗಳು ಎಷ್ಟು ಮಾತ್ರಕ್ಕೂ ಅಡಕವಾಗುವುದಿಲ್ಲ. ಆತ್ಮಜ್ಞಾನ, ಬ್ರಹ್ಮವಿದ್ಯೆ ಇದೇ ಔಪನಿಷದ ದರ್ಶನದ ಮುಖ್ಯವಸ್ತು. ಇದು ಈ ಪ್ರಕರಣಗಳಲ್ಲಿ ಪ್ರಧಾನವಾಗುವುದಿಲ್ಲ. ಇವೆಲ್ಲ ಕಾರಣಗಳಿಂದ ಉಪನಿಷತ್ತುಗಳೆಂದರೆ ಶಂಕರಾಚಾರ್ಯರು ಗ್ರಹಿಸಿರುವ ಹತ್ತು ಮಾತ್ರ ಎನ್ನಬಹುದು. ಇವುಗಳೊಂದಿಗೆ ಶ್ವೇತಾಶ್ವತರ, ಕೌಷೀತಕೀ, ಮೈತ್ರಾಯಣೀಯ ಎಂಬ ಮೂರು ಉಪನಿಷತ್ತುಗಳನ್ನು ಸೇರಿಸಿಕೊಂಡರೂ ಅಡ್ಡಿಯಿಲ್ಲ.

೬

ಒಂದೊಂದು ವೇದಕ್ಕೂ ಶಾಖೆಗಳಿರುವುದನ್ನು ಮೊದಲೇ ಹೇಳಿದೆವಷ್ಟೆ? ಋಗ್ವೇದಕ್ಕೆ ಇಪ್ಪತ್ತೊಂದು ಶಾಖೆಗಳಿವೆಯೆಂದು ಪ್ರತೀತಿಯಿದ್ದರೂ, ಈಗ ಉಳಿದಿರುವುದೇ ಎರಡೇ ಶಾಖೆಗಳು. ಶಾಕಲ ಎಂಬುದೊಂದು, ಬಾಷ್ಕಲ

ಎಂಬುದೊಂದು. ಈಗ ನಮ್ಮ ದೇಶದಲ್ಲಿ ಬಹುವಾಗಿ ಬಳಕೆಯಲ್ಲಿರುವ ಋಗ್ವೇದ ಸಂಹಿತೆಯು ಶಾಕಲ ಶಾಖೆಯೇ. ಇದಕ್ಕೆ ಮೂರು ಬ್ರಾಹ್ಮಣಗಳಿವೆ—ಐತರೇಯ ಬ್ರಾಹ್ಮಣ, ಕೌಷೀತಕೀ ಬ್ರಾಹ್ಮಣ (ಇದನ್ನು ಶಾಂಖಾಯನ ಬ್ರಾಹ್ಮಣವೆಂದೂ ಕರೆಯುವುದುಂಟು) ಮತ್ತು ಪೈಂಗೀ ಬ್ರಾಹ್ಮಣ. ಮೊದಲ ಎರಡು ಬ್ರಾಹ್ಮಣಗಳಿಗೆ ಅದೇ ಹೆಸರಿನ ಆರಣ್ಯಕಗಳು ಇವೆ. ಈ ಬ್ರಾಹ್ಮಣಗಳ ಕಡೆಯ ಭಾಗವಾಗಿ ಮೊದಲ ಎರಡು ಬ್ರಾಹ್ಮಣಗಳಿಗೆ ಅದೇ ಹೆಸರಿನ ಆರಣ್ಯಕಗಳೂ ಇವೆ. ಈ ಆರಣ್ಯಕಗಳ ಕಡೆಯ ಭಾಗವಾಗಿ ಉಪನಿಷತ್ತುಗಳೂ ಇವೆ—ಕ್ರಮವಾಗಿ ಐತರೇಯೋಪನಿಷತ್ತು ಮತ್ತು ಕೌಷೀತಕೀ ಉಪನಿಷತ್ತು. ಇವೆರಡೇ ಋಗ್ವೇದಕ್ಕೆ ಸೇರಿದ ಉಪನಿಷತ್ತುಗಳು. ನೂರೆಂಟು ಉಪನಿಷತ್ತುಗಳನ್ನು ಎಣಿಸುವಾಗಲೇನೋ ಇನ್ನೂ ಎಂಟು ಉಪನಿಷತ್ತುಗಳನ್ನು ಋಗ್ವೇದಕ್ಕೆ ಸೇರಿದಂತೆ ಕಾಣಿಸುತ್ತಾರೆನ್ನಿ.

ಎರಡನೆಯದಾದ ಯಜುರ್ವೇದದಲ್ಲಿ ಒಂದು ನೂರು ಒಂಬತ್ತು ಶಾಖೆಗಳಂತೆ; ಬ್ರಹ್ಮ ಸಂಪ್ರದಾಯದ ಕೃಷ್ಣಯಜುರ್ವೇದ ಮತ್ತು ಆದಿತ್ಯ ಸಂಪ್ರದಾಯದ ಶುಕ್ಲಯಜುರ್ವೇದ ಎಂದೆರಡು ಸಂಹಿತಾ ವಿಭಾಗಗಳು. ಇಲ್ಲಿ ವೇದದಲ್ಲಿ ಮಂತ್ರ (ಋಕ್ಕುಗಳು), ಬ್ರಾಹ್ಮಣ (ಕರ್ಮಗಳನ್ನು ವಿಧಿಸುವ ಭಾಗ), ಅರ್ಥವಾದ (ಬ್ರಾಹ್ಮಣ ವಾಕ್ಯಗಳಿಗೆ ವಿವರಣೆ, ದೃಷ್ಟಾಂತ, ಹಿನ್ನೆಲೆ ಮುಂತಾದವನ್ನು ಒದಗಿಸುವ ಭಾಗ) ಇವು ಮೂರೂ ಇರುತ್ತವೆ. ಇವು ಬೇರೆ ಬೇರೆಯಾಗಿ ಕಾಣಿಸಿಕೊಂಡರೆ ಅದು ಶುಕ್ಲ; ನಿರೂಪಣೆಯಲ್ಲೊಂದು ವ್ಯವಸ್ಥೆಯಿದೆ, ಕ್ರಮವಿದೆ, ವಿಷಯಗಳು ಕಲಸುಮೇಲೋಗರವಾಗಿಲ್ಲ ಎಂದರ್ಥ. ಹಾಗೇ ಮೂರೂ ವಿವರಗಳು ಬಿಡಿಬಿಡಿಯಾಗಿ ಕಾಣದೆ ಕಲಸಿಕೊಂಡು ಬಂದಾಗ ಅದು ಕೃಷ್ಣ. ಶುಕ್ಲವೆಂದರೆ ತಿಳಿಯಾಗಿರುವುದು (ವಿಶದ), ಕೃಷ್ಣವೆಂದರೆ ಬೆರೆತುಹೋಗಿರುವುದು (ಸಂಕೀರ್ಣ).

ಕೃಷ್ಣಯಜುರ್ವೇದಕ್ಕೆ ನಾಲ್ಕು ಶಾಖೆಗಳಿವೆ—ತೈತ್ತಿರೀಯ, ಮೈತ್ರಾಯಣೀಯ, ಕಠ (ಅಥವಾ ಕಾಠಕ) ಮತ್ತು ಕಪಿಷ್ಠ (ಕಪಿಸ್ಥಲ) ಎಂದು. ಕಡೆಯ ಶಾಖೆಯನ್ನು ಬಿಟ್ಟು ಉಳಿದವಕ್ಕೆ (ಎಂದರೆ ಸಂಹಿತೆಗಳಿಗೆ) ಅದೇ ಹೆಸರಿನ ಬ್ರಾಹ್ಮಣಗಳಿವೆ. ಮತ್ತೆ ತೈತ್ತಿರೀಯ ಮತ್ತು ಕಠ ಬ್ರಾಹ್ಮಣಗಳ ಕಡೆಯಲ್ಲಿ ಆ ಹೆಸರಿನ ಆರಣ್ಯಕಗಳೂ ಇವೆ. ಆರಣ್ಯಕಗಳಿಗೆ ಹೊಂದಿಕೊಂಡಂತೆ ಉಪನಿಷತ್ತುಗಳು—ತೈತ್ತಿರೀಯ ಮತ್ತು ಕಠ ಉಪನಿಷತ್ತುಗಳು. ಆದರೆ ಕಠೋಪನಿಷತ್ತನ್ನು ಕುರಿತಂತೆ ಇಲ್ಲೊಂದು ಸಂದಿಗ್ಧ

ಪರಿಸ್ಥಿತಿ. ಈಗ ನಮಗೆ ದೊರೆತಿರುವ ಕಠ (ಕಾಠಕ) ಬ್ರಾಹ್ಮಣದಲ್ಲಿ ಕಠೋಪನಿಷತ್ತು ಸೇರಿಬಂದಿಲ್ಲ. ಕಠಸಂಹಿತೆಯಲ್ಲೂ ಸೇರುವುದಿಲ್ಲ. ಅದರ ಪಾಠ ಬಂದಿರುವುದು ತೈತ್ತಿರೀಯ ಬ್ರಾಹ್ಮಣದಲ್ಲೇ. ಕಠಸಂಹಿತೆಯಲ್ಲೇ ನಚಿಕೇತನ ಉಲ್ಲೇಖವಿದೆಯೆನ್ನಿ. ಈ ಕಾರಣದಿಂದ ಕಠೋಪನಿಷತ್ತನ್ನು ಮಂತ್ರೋಪನಿಷತ್ತೆಂದು ಕರೆಯುವುದೂ ಉಂಟು.

ಇದು ಹೇಗಾದರೂ ಇರಲಿ, ತೈತ್ತಿರೀಯೋಪನಿಷತ್ತು ಮತ್ತು ಕಠೋಪನಿಷತ್ತುಗಳನ್ನು ಕ್ರಮವಾಗಿ ಸಂಹಿತೋಪನಿಷತ್ತು ಮತ್ತು ಬ್ರಾಹ್ಮಣೋಪನಿಷತ್ತುಗಳೆಂದೇ ನಿರ್ದೇಶಿಸುವುದು ವಾಡಿಕೆ. ಇವೆರಡಲ್ಲದೆ ಮೈತ್ರಾಯಣೀಯೋಪನಿಷತ್ತು ಮತ್ತು ಶ್ವೇತಾಶ್ವತರೋಪನಿಷತ್ತುಗಳನ್ನೂ ಕೃಷ್ಣಯಜುರ್ವೇದಕ್ಕೇ ಸೇರಿಸುತ್ತಾರೆ. ಇವೆರಡೂ ಸಂಹಿತೋಪನಿಷತ್ತುಗಳು; ಬ್ರಾಹ್ಮಣಗಳಿಗಾಗಲಿ ಆರಣ್ಯಕಗಳಿಗಾಗಲೀ ಸೇರುವುದಿಲ್ಲ. ಈ ನಾಲ್ಕು ಮುಖ್ಯ ಉಪನಿಷತ್ತುಗಳಲ್ಲದೆ ನೂರೆಂಟು ಉಪನಿಷತ್ತುಗಳಲ್ಲಿ ಇನ್ನೂ ಇಪ್ಪತ್ತೆಂಟು ಉಪನಿಷತ್ತುಗಳು ಕೃಷ್ಣಯಜುರ್ವೇದಕ್ಕೆ ಸೇರಿದಂತೆ ಎಣಿಕೆಯಿದೆ. ಆದರೆ ಇವುಗಳಲ್ಲಿ ಯಾವುದನ್ನೂ ಸಂಹಿತೋಪನಿಷತ್ತೆಂದಾಗಲೀ, ಬ್ರಾಹ್ಮಣೋಪನಿಷತ್ತೆಂದಾಗಲೀ, ಆರಣ್ಯಕೋಪನಿಷತ್ತೆಂದಾಗಲೀ ಗುರುತಿಸುವುದು ಸಾಧ್ಯವಿಲ್ಲ.

ಶುಕ್ಲಯಜುರ್ವೇದವು ಹದಿನೈದು ಶಾಖೆಗಳೆಂಬ ಪ್ರತೀತಿಯಿದ್ದರೂ ಮಾಧ್ಯಂದಿನ ಮತ್ತು ಕಾಣ್ವ ಎಂಬೆರಡು ಶಾಖೆಗಳಲ್ಲಿ ಉಳಿದುಕೊಂಡಿದೆ. ಮಾಧ್ಯಂದಿನ ಶಾಖೆಯನ್ನೇ ವಾಜಸನೇಯಿ ಸಂಹಿತೆಯೆಂದು ಕರೆಯುವುದುಂಟು. ಇದಕ್ಕೆ ಬ್ರಾಹ್ಮಣ ಭಾಗವೆನಿಸಿದ್ದು ಶತಪಥ ಬ್ರಾಹ್ಮಣ. ಇದರ ಕಡೆಯಲ್ಲೊಂದು ಆರಣ್ಯಕ. ಈ ವೇದಕ್ಕೆ ಇದನ್ನು ಬಿಟ್ಟು ಬೇರೆ ಇನ್ನೊಂದು ಬ್ರಾಹ್ಮಣವಿರದು. ಈ ಆರಣ್ಯಕವೇ ಉಪನಿಷತ್ತಿನ ರೂಪದಲ್ಲಿರುವುದರಿಂದ ಇದೇ ಆರಣ್ಯಕೋಪನಿಷತ್ತು. ಎಲ್ಲ ವೇದಗಳ ಎಲ್ಲ ಆರಣ್ಯಕಗಳಿಗಿಂತ ಇದು ದೊಡ್ಡದಾಗಿರುವುದರಿಂದ ಬೃಹದಾರಣ್ಯಕವೆನಿಸಿಕೊಳ್ಳುತ್ತದೆ. ಇದೇ ಬೃಹದಾರಣ್ಯಕೋಪನಿಷತ್ತು. ವಾಜಸನೇಯಿ ಸಂಹಿತೆಯಲ್ಲಿ ನಲವತ್ತು ಅಧ್ಯಾಯಗಳಿವೆ. ಮೊದಲ ಇಪ್ಪತ್ತೈದು ಅಧ್ಯಾಯಗಳು ಕರ್ಮಕಾಂಡ, ಮುಂದಿನ ಮೂರು ಅಧ್ಯಾಯಗಳು ಅದಕ್ಕೆ ವ್ಯಾಖ್ಯಾನ. ಮೂವತ್ತೊಂಬತ್ತನೆಯ ಅಧ್ಯಾಯದವರೆಗೂ ಇದೇ ವಿಚಾರ ಮುಂದುವರಿಯುತ್ತದೆ. ಕಡೆಯದಾದ ನಲವತ್ತನೆಯ ಅಧ್ಯಾಯವೇ ಈಶೋಪನಿಷತ್ತು (ಈಶಾವಾಸ್ಯೋಪನಿಷತ್ತು). ಹೀಗಾಗಿ ಇದು ಸಂಹಿತೋಪನಿಷತ್ತು.

ಇನ್ನು ಸಾಮವೇದಕ್ಕೆ ಸಾವಿರ ಶಾಖೆಗಳೆಂದು ಪತಂಜಲಿ ಹೇಳುತ್ತಾರೆ. ಆದರೆ ಉಳಿದಿರುವುದು ಹದಿಮೂರು ಶಾಖೆಗಳ ಹೆಸರುಗಳು—ಮೂರು ಶಾಖೆಗಳ ಪಾಠಗಳು—ರಾಣಾಯನ, ಕೌಥುಮೀಯ, ಜೈಮಿನೀಯ. ಸಾಮಸಂಹಿತೆಗೆ ತಾಂಡ್ಯ (ತಾಂಡಾಯನ ಅಥವಾ ಪಂಚವಿಂಶ), ತಲವಕಾರ, ಷಡ್ವಿಂಶ (ತಾಂಡ್ಯಕ್ಕೆ ಅನುಬಂಧವಾಗಿ) ಎಂಬ ಬ್ರಾಹ್ಮಣಗಳು. ತಾಂಡ್ಯ ಬ್ರಾಹ್ಮಣದ ಕಡೆಯಲ್ಲಿ ಬಂದಿರುವುದು ಛಾಂದೋಗ್ಯೋಪನಿಷತ್ತು. ಇದು ಆರಣ್ಯಕದ ನಂಟಿಲ್ಲದೆ ನೇರವಾಗಿ ಬ್ರಾಹ್ಮಣಕ್ಕೇ ಹೊಂದಿಕೊಂಡು ಬಂದಿರುವುದರಿಂದ ಬ್ರಾಹ್ಮಣೋಪನಿಷತ್ತು. ತಲವಕಾರ ಬ್ರಾಹ್ಮಣದ ಕಡೆಯಲ್ಲಿ ಬರುವುದು ತಲವಕಾರೋಪನಿಷತ್ತು. ಇದನ್ನು ಕೇನೋಪನಿಷತ್ತೆಂದೂ ಕರೆಯುತ್ತಾರೆ, ಉಪನಿಷತ್ತು 'ಕೇನ' ಎಂಬ ಮಾತಿನಿಂದ ಆರಂಭವಾಗುತ್ತದೆಯಾಗಿ.

ಕಡೆಯದಾಗಿ ಅಥರ್ವವೇದ ಸಂಹಿತೆಯು ಐವತ್ತು ಶಾಖೆಗಳಲ್ಲಿದೆಯೆಂದು ಪ್ರತೀತಿಯಿದ್ದರೂ ಈಗ ಶೌನಕ ಮತ್ತು ಪೈಪ್ಪಲಾದ ಎಂಬೆರಡೇ ಶಾಖೆಗಳಿವೆ. ಇದಕ್ಕೆ ಗೋಪಥವೆಂಬುದೊಂದು ಬ್ರಾಹ್ಮಣವೂ ಇದೆ. ಯಾವ ಆರಣ್ಯಕವೂ ಇರದು. ಗೋಪಥ ಬ್ರಾಹ್ಮಣಕ್ಕೂ ಅಥರ್ವ ಸಂಹಿತೆಗೂ ಇರುವ ನಂಟು ಅಷ್ಟಕ್ಕಷ್ಟೇ. ಇದಕ್ಕೆ ಸಹಜವಾಗಿ ಯಾವ ಉಪನಿಷತ್ತೂ ಇರಲಾರದು. ಆದರೆ ನೂರೆಂಟು ಉಪನಿಷತ್ತುಗಳಲ್ಲಿ ಮೂವತ್ತೊಂದು ಉಪನಿಷತ್ತುಗಳನ್ನು ಅಥರ್ವವೇದಕ್ಕೆ ಸೇರಿದಂತೆ ಎಣಿಸುತ್ತಾರೆ. (ನೂರೆಂಟು ಉಪನಿಷತ್ತುಗಳಲ್ಲಿ ಋಗ್ವೇದಕ್ಕೆ ಹತ್ತೊಂಬತ್ತು, ಸಾಮವೇದಕ್ಕೆ ಹದಿನಾರು ಉಪನಿಷತ್ತುಗಳು ಸೇರುತ್ತವೆ). ಇವುಗಳಲ್ಲಿ ಪ್ರಶ್ನ, ಮುಂಡಕ, ಮಾಂಡೂಕ್ಯ ಎಂಬ ಮೂರು ದಶೋಪನಿಷತ್ತುಗಳ ಹರವಿಗೆ ಸೇರಿಕೊಂಡಿವೆ.

ಈಗ ಉಪಲಬ್ಧವಿರುವ ಅಥರ್ವ ಸಂಹಿತೆಯಲ್ಲಾಗಲೀ, ಗೋಪಥ ಬ್ರಾಹ್ಮಣದಲ್ಲಾಗಲೀ ಈ ಉಪನಿಷತ್ತುಗಳು ಕಾಣಸಿಗುವುದಿಲ್ಲ. ಯಾವುದೋ ಪ್ರಲುಪ್ತವಾದ ಅಥರ್ವಭಾಗಕ್ಕೆ ಸೇರಿಕೊಂಡಿದ್ದರೂ ಇರಬಹುದು. ಬಾದರಾಯಣರು ತಮ್ಮ ವೇದಾಂತ ಸೂತ್ರಗಳಲ್ಲಿ ಮುಂಡಕೋಪನಿಷತ್ತಿನ ವಾಕ್ಯಗಳನ್ನು ಮೂರು ಬಾರಿಯೂ ಪ್ರಶ್ನೋಪನಿಷತ್ತಿನ ವಾಕ್ಯವನ್ನು ಒಂದು ಬಾರಿಯೂ ಉದ್ಧರಿಸಿಕೊಂಡ ಸೂಚನೆಯಿದೆ. ಮಾಂಡೂಕ್ಯೋಪನಿಷತ್ತಿನ ಉಲ್ಲೇಖವಿಲ್ಲ. ಶಂಕರಾಚಾರ್ಯರ ಸೂತ್ರಭಾಷ್ಯದಲ್ಲಿ ಮುಂಡಕವಾಕ್ಯಗಳನ್ನು ೧೨೯ ಬಾರಿಯೂ ಪ್ರಶ್ನವಾಕ್ಯಗಳನ್ನು

೩೯ ಬಾರಿಯೂ ಪ್ರಸ್ತಾಪಿಸಿರುವುದನ್ನು ಕಾಣಬಹುದು. ಇಲ್ಲಿಯೂ ಮಾಂಡೂಕ್ಯದ ಸುದ್ದಿಯಿಲ್ಲ. ಇದು ಮಾಂಡೂಕ್ಯೋಪನಿಷತ್ತಿನ ಪ್ರಾಚೀನತೆಯನ್ನು ಕುರಿತಂತೆ ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ಅಥರ್ವಸಂಹಿತೆಯ ಶೌನಕ ಶಾಖೆಗೆ ಸೇರಿದ್ದೆಂದು ಮುಂಡಕೋಪನಿಷತ್ತನ್ನು, ಪೈಪ್ಪಲಾದ ಶಾಖೆಗೆ ಸೇರಿದ್ದೆಂದು ಪ್ರಶ್ನೋಪನಿಷತ್ತನ್ನು ಗುರುತಿಸುವುದುಂಟು. ಇವು ಸಂಹಿತೋಪನಿಷತ್ತುಗಳೂ ಅಲ್ಲ, ಬ್ರಾಹ್ಮಣೋಪ ನಿಷತ್ತುಗಳೂ ಅಲ್ಲ, ಆರಣ್ಯಕೋಪನಿಷತ್ತುಗಳೂ ಅಲ್ಲ. ಸ್ವತಂತ್ರೋಪನಿಷತ್ತು ಗಳೆನ್ನಬಹುದು. ಮಾಂಡೂಕ್ಯಕ್ಕಾದರೋ ಇವೆರಡಕ್ಕಿರುವಂತೆ ಶಾಖೆಯ ಸಂಬಂಧವೂ ಇಲ್ಲ.

ಅಥರ್ವವೇದವನ್ನು ಬಿಟ್ಟು ಉಳಿದ ಮೂರು ವೇದಗಳಿಗೆ ಸೇರಿದಂತೆ ಇರುವ ನಾಲ್ಕು ಸಂಹಿತೋಪನಿಷತ್ತುಗಳು (ಈಶ, ಕಠ, ಶ್ವೇತಾಶ್ವತರ, ಮೈತ್ರಾಯಣಿ) ಮತ್ತು ಆರು ಆರಣ್ಯಕೋಪನಿಷತ್ತುಗಳು (ಐತರೇಯ, ಕೌಷೀತಕೀ, ತಲವಕಾರ, ಛಾಂದೋಗ್ಯ, ತೈತ್ತಿರೀಯ, ಬೃಹದಾರಣ್ಯಕ) ಇವುಗಳು ಪ್ರಾಚೀನವಾದ 'ದಶೋಪನಿಷತ್ತುಗಳು'. ಆದರೆ ಯಾವ ಕಾರಣದಿಂದಲೋ ಶಂಕರಾಚಾರ್ಯರು ಇವುಗಳಲ್ಲಿ ಕೌಷೀತಕೀ ಉಪನಿಷತ್ತಿಗಾಗಲೀ, ಶ್ವೇತಾಶ್ವತರ–ಮೈತ್ರಾಯಣೀ ಉಪನಿಷತ್ತುಗಳಿಗಾಗಲೀ ಭಾಷ್ಯ ಬರೆಯಲಿಲ್ಲ. ಈ ಮೂರನ್ನು ಬಿಟ್ಟರೆ 'ದಶೋಪನಿಷತ್ತು'ಗಳೆಂಬ ಎಣಿಕೆ ಹೇಗೆ? ಹತ್ತೆಂಬ ಸಂಖ್ಯೆಯನ್ನು ಪೂರೈಸಲು ಅಥರ್ವವೇದದಿಂದ ಮುಂಡಕ, ಮಾಂಡೂಕ್ಯ, ಪ್ರಶ್ನಗಳೆಂಬ ಮೂರು ಉಪನಿಷತ್ತು ಗಳನ್ನು ಸೇರಿಸಿಕೊಂಡಂತೆ ಕಾಣುತ್ತದೆ.

ಶಂಕರಾಚಾರ್ಯರೇನೋ ಈ ಹತ್ತು ಉಪನಿಷತ್ತುಗಳಿಗೆ ಭಾಷ್ಯ ಬರೆದಿದ್ದಾ ರೆಂದು ಪ್ರಸಿದ್ಧವಾಗಿದೆ. ಮಾಂಡೂಕ್ಯೋಪನಿಷತ್ತಿನ ಮೇಲೆ ಅವರ ಹೆಸರಿನಲ್ಲಿರುವ ಭಾಷ್ಯ ದಿಟವಾಗಿ ಅವರದ್ದೇ ಎನ್ನುವ ವಿಚಾರವಾಗಿ ಭಿನ್ನಾಭಿಪ್ರಾಯವಿದೆಯೆನ್ನಿ. ಮಾಂಡೂಕ್ಯೋಪನಿಷತ್ತಿಗೆ ಹೊಂದಿಕೊಂಡಂತೆ ಇರುವ ಗೌಡಪಾದಕಾರಿಕೆಯ ಮೇಲೂ ಆಚಾರ್ಯರದ್ದೆಂಬ ಭಾಷ್ಯವಿದೆ. ಇದು ಹೇಗಾದರೂ ಇರಲಿ, ಶಂಕರಾಚಾರ್ಯರಿಗೆ ಮೊದಲೂ ಉಪನಿಷತ್ತುಗಳಿಗೆ ಭಾಷ್ಯಗಳನ್ನು ಬರೆದವರಿದ್ದರೆಂದು ತೋರುತ್ತದೆ. ಭರ್ತೃಪ್ರಪಂಚರೆಂಬುವವರು ಕಠೋಪನಿಷತ್ತು ಮತ್ತು ಬೃಹದಾರಣ್ಯ ಕೋಪನಿಷತ್ತುಗಳ ಮೇಲೆ ವಾರ್ತಿಕಗಳನ್ನು ಬರೆದಿದ್ದ ಸೂಚನೆಯಿದೆ. ಆತ್ರೇಯ

ಬ್ರಹ್ಮನಾದಿ (ಟಂಕ) ಎಂಬುವವರು ಛಾಂದೋಗ್ಯೋಪನಿಷತ್ತಿನ ಮೇಲೆ ವಾಕ್ಯವೆಂಬ ವ್ಯಾಖ್ಯಾನವನ್ನು ಬರೆದಿದ್ದರು. ದ್ರವಿಡಾಚಾರ್ಯರು ಛಾಂದೋಗ್ಯ, ಬೃಹದಾರಣ್ಯಕ ಎರಡೂ ಉಪನಿಷತ್ತುಗಳಿಗೆ ವಿಸ್ತಾರವಾದ ಭಾಷ್ಯಗಳನ್ನು ರಚಿಸಿದ್ದರಂತೆ. ಆದರೆ ಯಾವುವೂ ಉಳಿದು ಬಂದಿಲ್ಲ.

ಇದರಿಂದ ತಿಳಿದುಬರುವ ಸಂಗತಿಯೆಂದರೆ ಛಾಂದೋಗ್ಯ ಮತ್ತು ಬೃಹದಾರಣ್ಯಕ ಎರಡೂ ಉಪನಿಷತ್ತುಗಳ ಪ್ರಾಚೀನತೆ ಮತ್ತು ಪ್ರಸಿದ್ಧಿ. ವೇದವಾಙ್ಮಯದ ಚೌಕಟ್ಟಿಗೇ ನೇರವಾಗಿ ಹೊಂದಿಕೊಂಡು ಬರುವುವು ಇವು. ಬಾದರಾಯಣರೂ ವೇದಾಂತಸೂತ್ರಗಳ ನೆಲೆಯನ್ನು ನಿರ್ದೇಶಿಸಲು ಹೆಚ್ಚಾಗಿ ಅವಲಂಬಿಸಿರುವುದು ಛಾಂದೋಗ್ಯ (ಹನ್ನೆರಡು ಬಾರಿ) ಮತ್ತು ಬೃಹದಾರಣ್ಯಕ (ನಾಲ್ಕು ಬಾರಿ) ಎರಡು ಉಪನಿಷತ್ತುಗಳನ್ನೇ. ಶಂಕರಾಚಾರ್ಯರೂ ತಮ್ಮ ಸೂತ್ರಭಾಷ್ಯದಲ್ಲಿ ಹೆಚ್ಚಾಗಿ ಉಲ್ಲೇಖಿಸಿರುವುದು ಇವೆರಡೂ ಉಪನಿಷತ್ತುಗಳನ್ನೇ (ಛಾಂದೋಗ್ಯವನ್ನು ೮೧೦ ಬಾರಿ, ಬೃಹದಾರಣ್ಯಕವನ್ನು ೫೬೭ ಬಾರಿ). ಶಂಕರಾಚಾರ್ಯರು ಇವೆರಡು ಉಪನಿಷತ್ತುಗಳ ಮೇಲೆ ಬರೆದಿರುವ ಭಾಷ್ಯಗಳು ಮೌಲಿಕವಾದವು, ಸಮಗ್ರವಾದವು. ಈ ಭಾಷ್ಯಗಳು ಆಚಾರ್ಯರವೇ ಎಂಬುದನ್ನು ಯಾರೂ ಶಂಕಿಸಲಾರರು. ಉಳಿದ ಉಪನಿಷತ್ತುಗಳ ಮೇಲೆ ಇರುವ ಭಾಷ್ಯಗಳ ವಿಚಾರ ಇಷ್ಟು ಖಚಿತವಾಗುವುದಿಲ್ಲ.

ಇವೆರಡೂ ಉಪನಿಷತ್ತುಗಳು ಗದ್ಯರೂಪದಲ್ಲಿವೆ. ಶೈಲಿಯೂ ಪ್ರಾಚೀನವೇ. ಸಂಸ್ಕೃತ ಸಾಹಿತ್ಯದಲ್ಲಿ ಗದ್ಯದ ಹೆಚ್ಚಳಕ್ಕೆ ಪ್ರೇರಣೆ ನೀಡಿದ ಶೈಲಿ ಇದು. ಈ ಎರಡು ಉಪನಿಷತ್ತುಗಳಲ್ಲಿ ಆತ್ಮವಿದ್ಯೆಯ ಭೂಮಿಕೆ ಚೆನ್ನಾಗಿಯೇ ಸಿದ್ಧವಾಗಿದೆ. ಬ್ರಾಹ್ಮಣದ ಕರ್ಮಪ್ರಸಕ್ತಿಯನ್ನಾಗಲೀ ಆರಣ್ಯಕದ ಸಾಂಕೇತಿಕ ಚಿಂತನೆಯ ಪ್ರವೃತ್ತಿಯನ್ನಾಗಲೀ ತೀರ ಕೈಬಿಡದೆ, ತಳ್ಳಿಹಾಕದೆ ಅವುಗಳನ್ನು ಉಪನಿಷತ್ತಿನ ಜ್ಞಾನನಿಷ್ಠೆಯ ನೆಲೆಗೆ ಏರಿಸಿರುವುದು ಇಲ್ಲಿ ಕಾಣುತ್ತದೆ.

ಕೆಲವು ಸ್ವತಂತ್ರೋಪನಿಷತ್ತುಗಳನ್ನು ಅಥರ್ವಪರಿಶಿಷ್ಟದ ಚರಣವ್ಯೂಹ ಪಟ್ಟಿಮಾಡಿದೆ. ಇವುಗಳಲ್ಲಿ ಪ್ರಶ್ನ, ಮುಂಡಕ ಮತ್ತು ಮಾಂಡೂಕ್ಯ ಉಪನಿಷತ್ತುಗಳು ಸೇರುತ್ತವೆ. ಈ ಮೂರಲ್ಲದೆ ಕ್ಷುರಿಕ, ಚೂಲಿಕ, ಗರ್ಭ, ಪ್ರಾಣಾಗ್ನಿಹೋತ್ರ, ಅಥರ್ವಶಿರಸ್, ಅಥರ್ವಶಿಖ ಮುಂತಾಗಿ ಹದಿನೈದು ಉಪನಿಷತ್ತುಗಳು ಇಲ್ಲಿ

ಕಾಣಿಸಿಕೊಂಡಿವೆ. ಈ ಪಟ್ಟಿಯ ಸ್ವಾರಸ್ಯವೆಂದರೆ ಮಾಂಡೂಕ್ಯ, ವೈತಥ್ಯ, ಅದ್ವೈತ, ಅಲಾತಶಾಂತಿ ಎಂದು ನಾಲ್ಕು ಉಪನಿಷತ್ತುಗಳ ಉಲ್ಲೇಖ. ಈಗ ಮಾಂಡೂಕ್ಯವು ಮಾತ್ರ ಉಪನಿಷತ್ತೆಂದೂ, ಉಳಿದವು ಗೌಡಪಾದರ ಮಾಂಡೂಕ್ಯಕಾರಿಕೆಯ ಪ್ರಕರಣಗಳೆಂದೂ ಪ್ರಸಿದ್ಧವಾಗಿವೆ. ಹೀಗೆ ಮಾಂಡೂಕ್ಯೋಪನಿಷತ್ತಿನ ಸ್ವರೂಪವೇ ಸಂದಿಗ್ಧವಾಗುತ್ತದೆ.

೭

ಇಷ್ಟರವರೆಗೆ ಉಪನಿಷತ್ತುಗಳ ಗ್ರಂಥರೂಪವನ್ನು ಕುರಿತು ಹೇಳಿದ್ದಾಯಿತು. ಇನ್ನು ಉಪನಿಷತ್ತಿನ ಸ್ವರೂಪವನ್ನು ವಿವರಿಸಲು ನಾಲ್ಕು ಮಾತು ಹೇಳಬೇಕು. ಉಪನಿಷತ್ತುಗಳ ಹಿಂದೆ ಬಂದಿರುವ ವೇದಭಾಗ ಕರ್ಮವನ್ನು ಕುರಿತದ್ದು. ಕರ್ಮವೆಂದರೆ ಯಾವುದಾದರೂ ಪ್ರಾಪಂಚಿಕ ಪ್ರಯೋಜನವನ್ನು ಬಯಸಿ ಅದನ್ನು ಪಡೆದುಕೊಳ್ಳಲು ಮಾಡಬೇಕಾದ ಯಜ್ಞಯಾಗಾದಿಗಳು. ನಿದರ್ಶನಕ್ಕೆ ಸ್ವರ್ಗವನ್ನು ಬಯಸುವವನು ಜ್ಯೋತಿಷ್ಟೋಮವೆಂಬ ಯಜ್ಞವನ್ನು ಮಾಡಬೇಕೆಂದು ವಿಧಿ. ಸ್ವರ್ಗವೆಂದರೆ ಯಾವುದೋ ಲೋಕ, ದೇಶವೆಂದು ಅರ್ಥವಲ್ಲ. ಎಣೆಯಿಲ್ಲದ, ಕೊನೆಯಿಲ್ಲದ ಸುಖಕ್ಕೆ ಸ್ವರ್ಗವೆಂದು ಹೆಸರು. ಸಂಪತ್ತನ್ನು ಬಯಸುವವನು ಸಂಯಾಜ್ಯಾಹೋಮವನ್ನು ಮಾಡಬೇಕಂತೆ. ದನಕರುಗಳನ್ನು ಬಯಸುವವನು ಸ್ವಿಷ್ಟಿಕೃದ್ಧೋಮವನ್ನು ಮಾಡಬೇಕಂತೆ. ಹೀಗೆ ಒಂದೊಂದು ಪ್ರಯೋಜನಕ್ಕೆ ಒಂದೊಂದು ಕರ್ಮ. ಇವೆಲ್ಲವೂ ಅಭ್ಯುದಯದ ಚೌಕಟ್ಟಿನಲ್ಲಿ ಬರುವುವು. ಕರ್ಮವನ್ನು ಕೈಗೊಂಡಿದ್ದರಿಂದ, ಅಪೂರ್ವವೆಂಬ ಸಾಮರ್ಥ್ಯವು ಒದಗಿ, ಅದರಿಂದಾಗಿ ಬಯಸಿದ ಫಲವು ಕೈಗೂಡುತ್ತದೆ; ಬಯಸುವ ಫಲವು ಅರ್ಥ (ಎಂದರೆ ಹಣ, ಲೌಕಿಕಪರಿಕರಗಳು, ಸುಖ ಸಾಧನೆಗಳು) ಅಥವಾ ಕಾಮ (ವಿಷಯ ಸುಖಗಳು).

ಯಜ್ಞವೆನ್ನುವುದು ಕರ್ಮವಷ್ಟೆ ಅಲ್ಲ. ಅದೊಂದು ವಿಶಿಷ್ಟ ಮನೋವೃತ್ತಿ. ಸಂಸಾರವನ್ನೇ ನಂಬಿಕೊಂಡು, ಅದರಲ್ಲಿ ಸುಸ್ಥಿತಿಯನ್ನು ಪಡೆದುಕೊಳ್ಳಲು, ಬರುವ ತೊಂದರೆಗಳನ್ನು ತಡೆಗಟ್ಟಲು, ಮಂತ್ರಸ್ವರೂಪದ ದೇವತೆಗಳ ನೆರವನ್ನು ಸಾಧಿಸಿಕೊಳ್ಳುವ ಹವಣಿಕೆ ಅದು. ಅಗ್ನಿ, ಇಂದ್ರ, ಸೋಮ, ವರುಣ ಮೊದಲಾದ ದೇವತೆಗಳನ್ನು ತೃಪ್ತಿಪಡಿಸಿ ಅವರನ್ನು ಒಲಿಸಿಕೊಂಡರೆ ಅವರ ನೆರವು ಒದಗೀತು

ಎಂಬ ನಂಬಿಕೆ. ಅವರ ಸಲುವಾಗಿ ಮಾಡುವ ಕರ್ಮಗಳು ವಿಧ್ಯುಕ್ತವಾಗಿರಬೇಕು, ಸಾಂಗವಾಗಿರಬೇಕು, ಸಪರಿಕರವಾಗಿರಬೇಕು, ಶ್ರದ್ಧೆಯಿಂದ ಕೂಡಿರಬೇಕು ಎಂಬ ತವಕವು ಎದ್ದುಕಾಣುತ್ತದೆ.

ಲೋಕಾಯತರು ಕೂಡ ಇವರಂತೆಯೇ ಪ್ರಾಪಂಚಿಕ ಪ್ರಯೋಜನಗಳಷ್ಟನ್ನೇ ನಂಬಿಕೊಂಡವರು. ಆದರೆ ಪ್ರಾಪಂಚಿಕ ಪ್ರಯೋಜನಗಳ ಸಾಧನೆಗೆ ಯಜ್ಞಯಾಗಾದಿಗಳ ಅಗತ್ಯವಿದೆಯೆಂದು ಅವರೇನು ನಂಬಲಿಲ್ಲ; ಪುರುಷ ಪ್ರಯತ್ನವೇ ಸಾಕೆಂದು ಅವರ ನಿಲುವು. ವೈದಿಕ ಕರ್ಮಕಾಂಡವನ್ನು ಎತ್ತಿಹಿಡಿದ ಮೀಮಾಂಸಕರೂ ನಾಸ್ತಿಕರೇ. ಮನುಷ್ಯನಿಗೆ ನೆರವಾಗಲು, ಅವನ ಸ್ಥಿತಿಗತಿಗಳನ್ನು ನಿಯಮನ ಮಾಡಲು, ಅವನ ತಪ್ಪುಗಳಿಗೆ ಶಿಕ್ಷೆಮಾಡಲು ದೇವರೊಬ್ಬನೋ ಹಲವರೋ ಇರುವುದನ್ನು ಅವರು ಒಪ್ಪಲಿಲ್ಲ. ಮಂತ್ರಗಳಿಗೇ ದೇವತಾಸ್ವರೂಪ ಇರುವುದು; ಕರ್ಮದಿಂದ ಒದಗುವ ಅಪೂರ್ವವೇ ಫಲವನ್ನು ಒದಗಿಸಿಕೊಡುವುದು. ಮಂತ್ರದಾಚೆ ದೇವರಿಲ್ಲ; ಅಪೂರ್ವದಾಚೆ ಈಶ್ವರನಿಲ್ಲ. ಪ್ರಪಂಚವಂತೂ ಈಗಿರುವಂತೆಯೇ ಯಾವಾಗಲೂ ಇದ್ದಿತು, ಮುಂದೆಯೂ ಹೀಗೆಯೇ ಇರುತ್ತದೆ. ಸೃಷ್ಟಿಕರ್ತನೊಬ್ಬ ಬೇಕೆಂದು ದೇವರನ್ನು ಕಲ್ಪಿಸಿಕೊಳ್ಳಬೇಕಾಗಿಲ್ಲ. ಸ್ಥಿತಿಗೆ ಕರ್ಮವೊಂದು ಕಲ್ಪನೆ ಸಾಕು.

ಆದರೆ ಲೋಕಾಯತರಿಗೂ ಮೀಮಾಂಸಕರಿಗೂ ಅಂತರವೊಂದಿದ್ದಿತು. ದೇಹವೇ ಆತ್ಮ, ದೇಹದಿಂದ ಬೇರೆಯಾಗಿ ಆತ್ಮನಿಲ್ಲ, ಮರಣವೆಂದರೆ ದೇಹನಾಶ, ಅಲ್ಲಿಗೆ ಆತ್ಮನೂ ತೀರಿಕೊಂಡಂತೆಯೇ. ದೇಹದಲ್ಲಿ ಚೈತನ್ಯವಿದೆಯಲ್ಲ, ಎಂದರೆ ಅದು ದೇಹಧರ್ಮವೇ, ಅದಕ್ಕೆ ಕಾರಣವಾಗಿ ಆತ್ಮನೆಂಬ ವಸ್ತುವಿನ ಅಗತ್ಯವಿರದು. ವೀಳ್ಯದೆಲೆ, ಅಡಿಕೆ, ಸುಣ್ಣ ಸೇರಿಸಿ ಜಗಿಯುವಾಗ ಮೂರರಲ್ಲೂ ಬಿಡಿಬಿಡಿಯಾಗಿ ಇರದ ಕೆಂಪು ಬಣ್ಣ ಹೊಸದಾಗಿ ಬಂದ ಹಾಗೆ, ಜಡವಾದ ದೇಹಸಂಘಾತದಲ್ಲಿ ಜೀವಭಾವ ಬರುತ್ತದೆ, ಅಷ್ಟೆ. ಇದು ಲೋಕಾಯತರ ನಿಲುವು. ಮೀಮಾಂಸಕರಾದರೋ ಕರ್ಮಕಾಂಡವನ್ನು ಎತ್ತಿಹಿಡಿಯುವಾಗ ದೇಹದಿಂದ ಬೇರೆಯಾದ ಆತ್ಮನನ್ನು ಒಪ್ಪಿಕೊಳ್ಳಬೇಕಾಯಿತು. ಕರ್ಮವನ್ನು ಮಾಡಿ ಮುಗಿಸಿದೊಡನೆ ಫಲ ಕಾಣುವುದಿಲ್ಲ; ಅದು ಕಾಲಾಂತರದಲ್ಲಿ ದೇಹಾಂತರದಲ್ಲಿ ಒದಗಿಬರುವುದು. ಕರ್ಮಕ್ಕೂ ಅದರ ಫಲಕ್ಕೂ ಸಂಬಂಧವಿರಲೇಬೇಕಲ್ಲ? ಅದನ್ನು ಕರ್ಮದ ಪರಿಕರಗಳಲ್ಲಾಗಲಿ, ಕರ್ಮದ ಪ್ರಸಂಗದಲ್ಲಾಗಲಿ, ಕರ್ಮಮಾಡುವವನ ದೇಹ

ಇಂದ್ರಿಯ ಮನಸ್ಸುಗಳಲ್ಲಾಗಲಿ ಕಾಣಲಾಗುವುದಿಲ್ಲ. ಆದ್ದರಿಂದ ದೇಹೇಂದ್ರಿಯ ಮನಸ್ಸುಗಳಿಂದ ಬೇರೆಯಾದ, ಕರ್ಮಕ್ಕೆ ಕರ್ತೃ (ಕರ್ಮವನ್ನು ಮಾಡುವವನು) ಭೋಕ್ತೃ (ಕರ್ಮದ ಫಲವನ್ನು ಅನುಭವಿಸುವವನು) ಎನ್ನಬಹುದಾದ, ಆತ್ಮನನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದು ಮೀಮಾಂಸಕರ ನಿಲುವು.

ಶರೀರಾದಿಗಳು ನಾಶವಾದರೂ ಆತ್ಮ ಉಳಿದುಕೊಳ್ಳುತ್ತಾನೆ; ನಿತ್ಯ. ಬೇರೆ ಬೇರೆ ಕರ್ಮಗಳಿಗೂ, ಶರೀರದ ಅವಸ್ಥೆಗಳಿಗೂ, ಸುಖದುಃಖಾದಿ ಅನುಭವಗಳಿಗೂ ಒಂದೇ ಬುನಾದಿಯಾಗಿ, ಏಕಮಾತ್ರ ಸೂತ್ರವಾಗಿ ಇರುವವನು ಆತ್ಮ. ಹಲವು ಮಣಿಗಳನ್ನು ಪೋಣಿಸುವ ಒಂದು ದಾರದಂತೆ ಆತ್ಮನ ಕಲ್ಪನೆ. ಆತ್ಮವೆಂಬ ಮಾತಿಗೆ ಸತತವಾಗಿ ಇರುವ, ಎಲ್ಲ ವಿವರಗಳಲ್ಲಿ ವ್ಯಾಪಕವಾಗಿರುವ ತತ್ತ್ವವೆಂದೇ ಅರ್ಥ. ದೇಹದಲ್ಲಿ ಚೈತನ್ಯವಿರುವುದು ಆತ್ಮನಿಂದಾಗಿ; ಆದರೆ ಚೈತನ್ಯವೇ ಆತ್ಮನ ಸ್ವಭಾವವಲ್ಲ; ಶರೀರ, ಇಂದ್ರಿಯ, ಅರ್ಥ (ಎಂದರೆ ಇಂದ್ರಿಯ ವಿಷಯವಾಗುವ ಹೊರಗಣ ಪದಾರ್ಥಗಳು) ಇವುಗಳ ಸಂನಿಕರ್ಷದಿಂದ (ವ್ಯವಸ್ಥೆಯಿಂದ) ಒದಗಿಬರುವ ಆಗಂತುಕ ಧರ್ಮ. ಅದು ತಾನೇ ತಾನಾಗಿ ಬೆಳಗುವುದೂ (ಸ್ವಯಂಪ್ರಕಾಶ) ಅಲ್ಲ. ನಮ್ಮ ಮನಸ್ಸಿನಿಂದ ಅದನ್ನು ತಿಳಿಯಬೇಕಷ್ಟೆ; 'ನಾನು' ಎನ್ನುವ ಅರಿವಿನಿಂದ ಆತ್ಮನ ಇರವನ್ನು ಕಂಡುಕೊಳ್ಳಬೇಕು. ಇದು ಮೀಮಾಂಸಕರ ವಾದ.

ಹೀಗೆ ಶರೀರ, ಇಂದ್ರಿಯಗಳು, ವಿಷಯಗಳು ಇವು ಮೂರು ಕೂಡಿಕೊಂಡು ಆತ್ಮನನ್ನು ಕಟ್ಟಿಹಾಕುತ್ತವೆ (ತ್ರಿವಿಧಬಂಧ); ಇದರಿಂದಲೇ ಸುಖ, ದುಃಖ ಮೊದಲಾದ ಅನುಭವಗಳು. ಈ ಪ್ರಪಂಚ ಸಂಬಂಧವನ್ನೆ ಬಂಧವೆಂದು ಕರೆದು, ಅದು ಪೂರಾ ತೊಲಗಿದರೆ ಮೋಕ್ಷವೆಂಬ ಕಲ್ಪನೆಯನ್ನೂ ಕುಮಾರಿಲಭಟ್ಟರೆಂಬ ಮೀಮಾಂಸಕರ ಬರಹಗಳಲ್ಲಿ ಕಾಣಬಹುದು. ಮೋಕ್ಷ ಅಥವಾ ಮುಕ್ತಿಯಲ್ಲಿ ಶರೀರ, ಇಂದ್ರಿಯಗಳು, ವಿಷಯಗಳಿರುವುದಿಲ್ಲ; ಆತ್ಮನಿರುತ್ತಾನೆ. ಅವನಿಗೆ ಶರೀರಾದಿಗಳು ಇದ್ದಾಗ ಜ್ಞಾನವೆಂಬ ವಿವರವಿರುತ್ತದೆ; ಚೈತನ್ಯವೆಂದರೆ ಪ್ರಾಣವೂ ಅರಿವೂ ಕೂಡಿಯೇ ತಾನೆ? ಶರೀರಾದಿಗಳು ಇಲ್ಲದಾಗ ಜ್ಞಾನಕ್ಕೆ ಆಸರೆಯೆಲ್ಲಿ? ಅವಕಾಶವೆಲ್ಲಿ? ಆದ್ದರಿಂದ ಮುಕ್ತಿಯಲ್ಲಿ ಆತ್ಮನಿಗೆ ಜ್ಞಾನವಿಲ್ಲ, ಕೇವಲ ಜ್ಞಾನಶಕ್ತಿಯೇನೋ ಇರುತ್ತದೆ.

ಆತ್ಮ ಇರುವುದನ್ನು ಒಪ್ಪಿಕೊಳ್ಳದಿದ್ದರೆ 'ಕರ್ಮಮಾಡು' ಎಂಬ ವೈದಿಕ

ವಿಧಿಗಳಿಗೆ ಅರ್ಥವೇ ಇಲ್ಲ. ಆತ್ಮಜ್ಞಾನವೆಂದರೆ ಕರ್ಮಪ್ರವೃತ್ತಿಗೆ ಕಾರಣವಾಗುವುದು. ಶಾಸ್ತ್ರದಲ್ಲಿ 'ಆತ್ಮನನ್ನು ತಿಳಿದುಕೋ' ಎಂಬ ವಿಧಿಯಿರುವುದು ಕರ್ಮವನ್ನು ಮಾಡಬೇಡ ಎಂಬರ್ಥದಲ್ಲಲ್ಲ; ಕರ್ಮವು ಬಂಧವಾಗದಂತೆ ನೋಡಿಕೋ ಎಂಬರ್ಥದಲ್ಲಿ. ಕರ್ಮದಲ್ಲಿ ನಿತ್ಯ (ಮಾಡಲೇಬೇಕಾದ ಕರ್ಮಗಳು; ಮಾಡದಿದ್ದರೆ ಪ್ರತ್ಯವಾಯವೆಂಬ ದೋಷ ಬರುವಂಥವು), ನೈಮಿತ್ತಿಕ (ಪ್ರಸಂಗಾನುಸಾರವಾಗಿ ಅಗತ್ಯವಾಗುವ ಕರ್ಮಗಳು, ದೋಷವೊದಗಿಸುವಾಗ ಶುದ್ಧಿಮಾಡಿಕೊಳ್ಳುವುದು ಇತ್ಯಾದಿ), ಕಾಮ್ಯ (ಬಯಕೆಯಿಂದ ಮಾಡುವ ಕರ್ಮಗಳು, ಫಲಾಪೇಕ್ಷೆ ಇರುವಂಥವು), ನಿಷಿದ್ಧ (ಮಾಡಲೇ ಬಾರದಂಥ ಕೆಲಸಗಳು) ಎಂಬ ನಾಲ್ಕು ತೆರ. ಇವುಗಳಲ್ಲಿ ಕಾಮ್ಯ ಮತ್ತು ನಿಷಿದ್ಧ ಇವೆರಡೂ ಬಂಧಕ್ಕೆ ಕಾರಣವಾಗುತ್ತವೆ. ಇವನ್ನು ಬಿಟ್ಟರೆ ಆಯಿತು. ನಿತ್ಯ ನೈಮಿತ್ತಿಕ ಕರ್ಮಗಳನ್ನು ಬಿಡುವಂತಿಲ್ಲ.

ಮನುಷ್ಯನು ಮೊದಲು ಎಲ್ಲಾ ತೆರನಾದ ಕರ್ಮಗಳನ್ನೂ ಮಾಡುತ್ತಾನೆ. ಶಾಸ್ತ್ರದಂತೆ ನಡೆದುಕೊಂಡಾಗ ಪ್ರಾಪಂಚಿಕ ವಿಚಾರವಾಗಿ ಉದಾಸೀನಭಾವ ಬರುತ್ತದೆ; ದುಃಖಕ್ಕೆ ಬೇಸರಿಕೆ ಬರುತ್ತದೆ. ಸುಖವೂ ಬೇಡವೆನಿಸುತ್ತದೆ. ಆಗ ಅವನ ಮನಸ್ಸು ಮೋಕ್ಷದ ಕಡೆ ತಿರುಗುತ್ತದೆ. ಕಾಮ್ಯ, ನಿಷಿದ್ಧ ಕರ್ಮಗಳನ್ನು ಬಿಟ್ಟುಬಿಡುತ್ತಾನೆ; ನಿತ್ಯ, ನೈಮಿತ್ತಿಕ ಕರ್ಮಗಳಷ್ಟನ್ನೆ ಮಾಡುತ್ತಾನೆ. ಇದರಿಂದಾಗಿ ಅಲ್ಲಿಯವರೆಗೆ ಕೂಡಿಕೊಂಡು ಬಂದಿದ್ದ ಧರ್ಮಾಧರ್ಮಗಳು ಕ್ಷಯವಾಗುತ್ತ ಬರುತ್ತವೆ. ಆಗ ಆತ್ಮನನ್ನು ಅರಿತುಕೊಂಡರೆ (ಎಂದರೆ ಉಪಾಸನೆ ಮಾಡಿದರೆ) ನಮ್ಮೆಲ್ಲ ಭೋಗಗಳಿಗೂ ಆಸರೆಯಾದ ದೇಹದೊಂದಿಗೆ ನಂಟು ಅಳಿಯುತ್ತದೆ; ಆತ್ಮದೇಹಾದಿಗಳ ಬಂಧದಿಂದ ಮುಕ್ತನಾಗುತ್ತಾನೆ; ಕೇವಲ ಸತ್ (ಬರಿಯ ಇರವು) ಆಗಿ ಉಳಿಯುತ್ತದೆ.

ಇದು ಉಪನಿಷತ್ತುಗಳ ಹಿನ್ನೆಲೆಯಲ್ಲಿದ್ದ ಕರ್ಮಕಾಂಡದ ಕಲ್ಪನೆ. ಇದನ್ನು ಮನವರಿಕೆ ಮಾಡಿಕೊಳ್ಳದಿದ್ದರೆ ಉಪನಿಷತ್ತುಗಳ ನಿಲುವು ಏನೆಂಬುದು ಸ್ಪಷ್ಟವಾಗುವುದಿಲ್ಲ. ವೇದವಾಙ್ಮಯದ ಎರಡನೆಯ ಭಾಗವಾದ ಬ್ರಾಹ್ಮಣಗಳನ್ನು ಕರ್ಮಕಾಂಡವೆಂದೂ, ಕಡೆಯ ಭಾಗವಾದ ಉಪನಿಷತ್ತುಗಳನ್ನು ಜ್ಞಾನಕಾಂಡವೆಂದೂ ಕರೆಯುವುದರ ಸ್ವಾರಸ್ಯವೇನು? ಕರ್ಮಕಾಂಡಕ್ಕೆ ಶಾಸ್ತ್ರಗ್ರಂಥವೆಂದರೆ ಜೈಮಿನಿಗಳ ಮೀಮಾಂಸಾಸೂತ್ರಗಳು; ಇದಕ್ಕೆ ಆಧಾರವಾಗಿರುವುವು ಬ್ರಾಹ್ಮಣಗಳು. ಜ್ಞಾನಕಾಂಡಕ್ಕೆ

ಶಾಸ್ತ್ರಗ್ರಂಥ ಬಾದರಾಯಣರ ವೇದಾಂತ ಸೂತ್ರಗಳು; ಇದಕ್ಕೆ ಆಧಾರ ಉಪನಿಷತ್ತುಗಳು. ಆರಣ್ಯಕಗಳು ಎರಡಕ್ಕೂ ನಡುವೆ ಇವೆ; ಅವುಗಳಲ್ಲಿ ಕರ್ಮಕಾಂಡದಿಂದ ಜ್ಞಾನಕಾಂಡದ ಕಡೆ ಹೊರಳುವ ದೃಷ್ಟಿಯನ್ನು ಗುರುತಿಸಬಹುದು.

ಕರ್ಮಕಾಂಡದ ಆರಂಭದ ದಿನಗಳಲ್ಲಿ (ಎಂದರೆ ಕ್ರಿಸ್ತಪೂರ್ವ ೫೦೦ರ ಸುಮಾರಿಗೆ ಜೈಮಿನಿಗಳು ಮೀಮಾಂಸಾ ಸೂತ್ರಗಳನ್ನು ರಚಿಸಿದಾಗ, ಶಬರಸ್ವಾಮಿಗಳು ಕ್ರಿ.ಪೂ. ೬೦ರ ಸುಮಾರಿಗೆ ಅದರ ಮೇಲೆ ಭಾಷ್ಯವನ್ನು ಬರೆದಾಗ) ಆತ್ಮವಾದವು ಪ್ರಧಾನವಾಗಿ ತೋರಿಕೊಳ್ಳುವುದಿಲ್ಲ; ಆತ್ಮಜ್ಞಾನದ ವಿಚಾರವಾಗಲಿ ಮೋಕ್ಷದ ಕಲ್ಪನೆಯಾಗಲಿ ಕಾಣಸಿಗುವುದೇ ಇಲ್ಲ. ಮುಂದೆ, ಕುಮಾರಿಲಭಟ್ಟರು ಕ್ರಿಸ್ತಶಕ ೬೨೦ರ ಸುಮಾರಿಗೆ ಶಾಬರಭಾಷ್ಯದ ಮೇಲೆ ವಾರ್ತಿಕಗಳನ್ನು ಸಿದ್ಧಪಡಿಸಿದಾಗ ಆತ್ಮವಾದವನ್ನೂ, ಜ್ಞಾನದ ಪಾತ್ರವನ್ನೂ, ಮೋಕ್ಷದ ಪ್ರಸಕ್ತಿಯನ್ನೂ ಕರ್ಮಕಾಂಡದಲ್ಲಿ ಅಳವಡಿಸಿಕೊಂಡರು. ಆದರೆ ಇವೆಲ್ಲವೂ ಕರ್ಮದ ಚೌಕಟ್ಟಿನಲ್ಲಿಯೇ ಕಾಣಿಸಿಕೊಂಡುವು; ಕರ್ಮವೇ ಪ್ರಧಾನವಾದ ವಿವರವಾಗಿ ಉಳಿಯಿತು. ಉಪನಿಷತ್ತುಗಳ ಧೋರಣೆ ಇದಲ್ಲವೆಂಬುದನ್ನು ಬಹು ಹಿಂದೆಯೇ ಬಾದರಾಯಣರು ಸ್ಪಷ್ಟಪಡಿಸಿದ್ದರೂ, ಕರ್ಮಕಾಂಡದ ಹೆಚ್ಚುಗಾರಿಕೆಯೇ ಜನರ ಮನಸ್ಸಿನಲ್ಲಿ ಇನ್ನೂ ಬೇರೂರಿ ನಿಂತಿದ್ದಿತು. ಕುಮಾರಿಲರ ಕಿರಿಯ ಸಮಕಾಲಿಕರಾಗಿದ್ದ ಶಂಕರಾಚಾರ್ಯರು ಉಪನಿಷತ್ತುಗಳಲ್ಲಿ ಕಂಡುಬರುವ ಅಧ್ಯಾತ್ಮವಾದ, ಆತ್ಮಜ್ಞಾನದ ವೈಶಿಷ್ಟ್ಯ ಮತ್ತು ಮೋಕ್ಷಚಿಂತನೆಗಳನ್ನು ಜನರೆದುರು ಚೆನ್ನಾಗಿ ಕಾಣಿಸಿದರು.

ಉಪನಿಷತ್ತುಗಳಲ್ಲಿ ಎದ್ದು ಕಾಣುವುದು ಆತ್ಮಜ್ಞಾನದ ಅಗತ್ಯ. ಆದರೆ ಇದಕ್ಕೆ ಕರ್ಮಕಾಂಡದ ಚೌಕಟ್ಟು ಎಷ್ಟು ಮಾತ್ರಕ್ಕೂ ಇಲ್ಲ. ಬ್ರಾಹ್ಮಣಗಳಲ್ಲಿ ಹೇಳುವ ಕರ್ಮವಿಧಿಗಳನ್ನೂ ಅದಕ್ಕೆ ಅನುಬಂಧಿಯಾಗಿ ಬರುವ ಅರ್ಥವಾದಗಳನ್ನೂ ನಿರಾಕರಿಸಿಯೇ ಉಪನಿಷತ್ತುಗಳು ಹೊರಡುವುದು. ಯಜ್ಞಯಾಗಾದಿಗಳನ್ನು ಆತ್ಮಜ್ಞಾನಕ್ಕೆ ಸಾಧನಗಳೆಂದು ಇವು ಒಪ್ಪುವುದಿಲ್ಲ. ಕರ್ಮದಿಂದಲೇ ಜ್ಞಾನವು ಒದಗಿಬರಬಹುದೆಂದಾಗಲಿ ಉಪನಿಷತ್ತುಗಳು ಅಂಗೀಕರಿಸುವುದಿಲ್ಲ. ಆತ್ಮಜ್ಞಾನದೊಂದಿಗೆ ಕರ್ಮವು ಕೂಡಿಕೊಳ್ಳಬಹುದೆಂಬುದೂ ಉಪನಿಷತ್ತುಗಳಿಗೆ ಸಮ್ಮತವಲ್ಲ. ಕರ್ಮಕಾಂಡದಲ್ಲಿ ಕಂಡುಬರುವ ಆತ್ಮನ ಕಲ್ಪನೆಯಾಗಲಿ ಮೋಕ್ಷದ ವಿವರಣೆಯಾಗಲಿ ಉಪನಿಷತ್ತುಗಳ ಆತ್ಮಜ್ಞಾನ, ಮೋಕ್ಷವಾದಗಳಿಗಿಂತ ಬೇರೆಯಾಗಿಯೇ ಇವೆ.

ಬ್ರಾಹ್ಮಣಗಳದ್ದು ಬಹುರ್ಮುಖ ಪ್ರವೃತ್ತಿಯಾದರೆ ಉಪನಿಷತ್ತುಗಳದ್ದು ಅಂತರ್ಮುಖಪ್ರವೃತ್ತಿ. ಈ ಪ್ರವೃತ್ತಿಗೆ ನೆರವಾಗುವ ಶಮದಮಾದಿ ಸಾಧನೆಗಳು ಯಜ್ಞಯಾಗಾದಿ ಕರ್ಮಗಳಿಗೆ ಅಗತ್ಯವಾದುವಲ್ಲ. ಅಲ್ಲಿ ಬೇಕಾಗುವ ಅರ್ಥಿತ್ವ (ಬೇಕೆಂಬ ಬಯಕೆ), ಅಧಿಕಾರ (ಕರ್ಮವನ್ನು ಕೈಗೊಳ್ಳುವ ಯೋಗ್ಯತೆ), ವಿದ್ವತ್ತೆ (ಮಂತ್ರದ ತಾತ್ಪರ್ಯವನ್ನು ಮನಗೊಳ್ಳುವುದು) ಇವು ಇಲ್ಲಿ ಬೇಕಾದುದಿಲ್ಲ.

೮

ಉಪನಿಷತ್ತುಗಳಲ್ಲಿ ಹೊಸದೊಂದು ವಿದ್ಯೆಯ ಉಪಕ್ರಮವಾಗುತ್ತದೆ. ವಿದ್ಯೆಗಳಲ್ಲಿ ಪರಾ (ಆಚೆಯದು ಅಥವಾ ಮೇಲಿನದು), ಅಪರಾ (ಈಚೆಯದು ಅಥವಾ ಕೆಳಗಿನದು) ಎಂಬೆರಡು ವಿಭಾಗವನ್ನು ಮುಂಡಕೋಪನಿಷತ್ತು ಮಾಡಿದೆ. ನಾಲ್ಕು ವೇದಗಳು, ಆರು ವೇದಾಂಗಗಳು, ಇವುಗಳಲ್ಲಿ ಬರುವ ಎಲ್ಲ ವಿಚಾರಗಳು ಇವೆಲ್ಲವೂ ಅಪರಾ ವಿದ್ಯೆ; ಅಪರವೆಂದರೆ ಇಲ್ಲಿನ ವ್ಯವಹಾರಕ್ಕೆ ನೆರವಾಗಬಲ್ಲುದು; ನಮ್ಮ ಇಂದ್ರಿಯಗಳು, ಮನಸ್ಸು ಅರಿತುಕೊಳ್ಳುವಂಥದು. ಯಾವ ಇಂದ್ರಿಯಕ್ಕೂ ಗೋಚರವಾಗದೆ ಇರುವ, ಸೂಕ್ಷ್ಮವಾದ, ನಿತ್ಯವಾದ, ಸರ್ವವ್ಯಾಪಿಯಾದ ಅಕ್ಷರತತ್ತ್ವವನ್ನು (ಎಂದರೆ ಆತ್ಮವನ್ನು) ಅರಿವಿಗೆ ತಂದುಕೊಡುವಂಥ ವಿದ್ಯೆ ಪರಾ ಎನಿಸಿಕೊಳ್ಳುತ್ತದೆ. ಇದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತೆಯೇ. ಇದು ಪರಾವಿದ್ಯೆಯ ಸ್ವಾರಸ್ಯ.

ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯ ಹೀಗೆ ಶುರುವಾಗುತ್ತದೆ. ಅರುಣನ ಮಗ ಉದ್ದಾಲಕ; ಅವನ ಮಗ ಶ್ವೇತಕೇತು. ಶ್ವೇತಕೇತುವು ತಂದೆಯ ಮಾತಿನಂತೆ ಹನ್ನೆರಡು ವರ್ಷಗಳು ಗುರುಕುಲವಾಸ ಮಾಡಿ ಹಿಂದಿರುಗಿ ಬಂದ. ಎಲ್ಲವನ್ನೂ ಬಲ್ಲೆನೆಂಬ ಗರ್ವದಿಂದ ಬೀಗುತ್ತಿದ್ದ ಇವನನ್ನು ನೋಡಿ ತಂದೆಯು 'ಮಗನೇ, ತುಂಬ ಓದಿಕೊಂಡು ಬಂದಿದ್ದೀಯೆ. ಆದರೆ ಕೇಳದೆ ಇದ್ದದ್ದು ಕೇಳಿದಂತೆ, ತಿಳಿಯದೆ ಇದ್ದದ್ದು ತಿಳಿದಂತೆ ಯಾವ ವಿದ್ಯೆಯಿಂದ ಆಗುವುದೋ ಅದನ್ನು ತಿಳಿದುಕೊಂಡು ಬಂದಿರುವೆಯಾ?' ಎಂದು ಕೇಳಿದ. ಶ್ವೇತಕೇತು ತಬ್ಬಿಬ್ಬಾದ; ಅವನ ಗರ್ವ ಮುರಿಯಿತು. ಅದೆಂಥ ವಿದ್ಯೆ ಇದ್ದೀತು? ತಂದೆಯನ್ನೆ ಅದೇನೆಂದು ತಿಳಿಸುವಂತೆ ಕೇಳಿಕೊಂಡ. ಆಗ ತಂದೆಯು "ಮಣ್ಣಿನ ಮುದ್ದೆಯಿಂದ

ತಟ್ಟೆ, ಬಟ್ಟಲು, ಮುಚ್ಚಳ, ಗಡಿಗೆ, ಮಡಕೆ ಮೊದಲಾದುವನ್ನೆಲ್ಲ ಮಾಡುವರಲ್ಲವೆ? ಮಣ್ಣೆಂಬುದೊಂದೇ ದಿಟವಾದದ್ದು; ಉಳಿದವೆಲ್ಲ ಅದರ ವಿಕಾರಗಳಷ್ಟೆ. ಮಣ್ಣಿನ ವಿಚಾರ ತಿಳಿದುಕೊಂಡರೆ ಆಯಿತು. ಮಣ್ಣಿನಿಂದ ಮಾಡಿದ ಉಳಿದೆಲ್ಲದರ ವಿಚಾರವೂ ತಾನಾಗಿಯೆ ತಿಳಿದಂತಾಗುತ್ತದೆ" ಎಂದು ಪರಾವಿದ್ಯೆಯ ಉಪದೇಶವನ್ನು ಆರಂಭಿಸಿದ.

ಅದೇ ಉಪನಿಷತ್ತಿನ ಏಳನೆಯ ಅಧ್ಯಾಯದಲ್ಲಿ ಇನ್ನೊಂದು ಇಂಥದೇ ಪ್ರಸಂಗ ಬರುತ್ತದೆ. ನಾರದನು ನಾಲ್ಕು ವೇದಗಳನ್ನೂ ಇತಿಹಾಸ ಪುರಾಣಗಳನ್ನೂ ವ್ಯಾಕರಣ, ಶ್ರಾದ್ಧಕಲ್ಪ, ನೀತಿಶಾಸ್ತ್ರ, ಗಣಿತ, ತರ್ಕಶಾಸ್ತ್ರ, ಭೂತತಂತ್ರ, ಧನುರ್ವೇದ, ಜ್ಯೋತಿಷ ಮೊದಲಾದ ವಿದ್ಯೆಗಳನ್ನೂ ತಿಳಿದಿದ್ದವನು. ಆದರೂ ಶೋಕದಿಂದ ಕಂಗಾಲಾಗಿ, ಈ ಯಾವ ವಿದ್ಯೆಯಿಂದಲೂ ದುಃಖವನ್ನು ಪರಿಹರಿಸಿಕೊಳ್ಳುವ ಬಗೆಗಾಣದೆ ಸನತ್ಕುಮಾರನ ಬಳಿಗೆ ಬರುತ್ತಾನೆ. ಈ ವಿದ್ಯೆಗಳೆಲ್ಲ ಬರಿಯ ಹೆಸರುಗಳು ಎಂಬುದನ್ನು ಸನತ್ಕುಮಾರನು ತಿಳಿಸಿ ಆತ್ಮವಿದ್ಯೆಯನ್ನು ಉಪದೇಶಿಸುತ್ತಾನೆ. ಅದರಿಂದ ದುಃಖ ಉಪಶಮನವಾಗುತ್ತದೆ.

ಆತ್ಮವಿದ್ಯೆಯೇ ಉಪನಿಷತ್ತಿನಲ್ಲಿ ಕಾಣಸಿಗುವ ಹೊಸವಿದ್ಯೆ, ಬೇರೆ ವಿದ್ಯೆಗಳಿಗಿಂತ ವಿಲಕ್ಷಣವಾದುದು. ಕರ್ಮಕಾಂಡದಲ್ಲಿ ಬಂದ ಕರ್ತೃ, ಭೋಕ್ತೃ ಎಂಬ ಆತ್ಮ ಉಪನಿಷತ್ತಿನಲ್ಲಿ ಬರುವ ಆತ್ಮನಲ್ಲ. ಆ ಆತ್ಮ ಅನುಮಾನಗಮ್ಯ; ಇವನಾದರೆ ಯಾವ ಯುಕ್ತಿಗೂ, ತರ್ಕಕ್ಕೂ, ವಿಚಾರಕ್ಕೂ ಸಿಗತಕ್ಕವನಲ್ಲ. ಕಣ್ಣಿನಿಂದ ಅವನನ್ನು ನೋಡುವುದಾಗದು, ಕಿವಿಯಿಂದ ಕೇಳುವುದಾಗದು; ಯಾವ ಇಂದ್ರಿಯಕ್ಕೂ ದೊರಕುವನಲ್ಲ. ಪ್ರತ್ಯಕ್ಷಕ್ಕಾಗಲಿ ಅನುಮಾನಕ್ಕಾಗಲಿ ಪಕ್ಕಾಗದವನೆಂದು ಉಪನಿಷತ್ತುಗಳು ಸ್ಪಷ್ಟಪಡಿಸುತ್ತವೆ. ಶಬ್ದಪ್ರಮಾಣವೆಂದರೆ ವೇದ; ಕರ್ಮಕಾಂಡವೆಲ್ಲ ನಿಂತಿರುವುದು ಇದರ ಆಧಾರದ ಮೇಲೇ. ಆದರೆ ಆತ್ಮನನ್ನು ತಿಳಿಸಿಕೊಡುವುದು ವೇದಕ್ಕೂ ಸಾಧ್ಯವಿಲ್ಲ. ವಿದೇಹದ ಅರಸ ಜನಕನು ವೇದವನ್ನೆಲ್ಲ ಓದಿದ್ದರೂ ಆತ್ಮನನ್ನು ಅರಿಯಲಿಲ್ಲವೆಂಬ ಮಾತು ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುತ್ತದೆ.

ಸಾಮಾನ್ಯವಾದ ಜ್ಞಾನವನ್ನು ನಾವು ಪಡೆದುಕೊಳ್ಳುವಾಗ ಪ್ರತ್ಯಕ್ಷ (ಇಂದ್ರಿಯಗಳ ಮೂಲಕವಾಗಿ), ಅನುಮಾನ (ಯುಕ್ತಿಯ ಮೂಲಕವಾಗಿ, ಎಂದರೆ ತರ್ಕದಿಂದ) ಮತ್ತು ಶಬ್ದ (ಆಪ್ತರು ಹೇಳುವ ಮಾತುಗಳು) ಎಂಬ ಮೂರು ನೆರವಾಗುತ್ತವೆ.

ದಿಟವಾಗಿ ಅರಿತುಕೊಳ್ಳುವುದಕ್ಕೆ ಪ್ರಮೆಯೆಂದು ಹೆಸರು; ಅದಕ್ಕೆ ನೆರವಾಗುವುವು ಪ್ರಮಾಣಗಳು (ಮೇಲೆ ಹೇಳಿದ ಪ್ರತ್ಯಕ್ಷ, ಅನುಮಾನ, ಶಬ್ದ). ಪ್ರಮಾಣಗಳಿಂದ ಯಾವುದು ತಿಳಿಯುತ್ತದೆಯೊ ಅದು ಪ್ರಮೇಯ. ಸಾಮಾನ್ಯವಾಗಿ ನಮ್ಮ ತಿಳಿವಳಿಕೆ (ಎಂದರೆ ಜ್ಞಾನ) ಎಲ್ಲವೂ ಹೀಗೆ ಪ್ರಮಾಣ–ಪ್ರಮೇಯ ವ್ಯವಹಾರದಿಂದ ಸಿದ್ಧವಾಗುತ್ತದೆ. ಲೋಕವ್ಯಾಪಾರವೆಲ್ಲ ಹೀಗೆಯೇ ನಡೆಯುವುದು. ಎಲ್ಲ ವಿದ್ಯೆಗಳೂ ಈ ತೆರನಾದ ಪ್ರಮಾಣಗಳನ್ನೆ ಅವಲಂಬಿಸುತ್ತವೆ.

ಆದರೆ ಆತ್ಮವಿದ್ಯೆ (ಆತ್ಮಜ್ಞಾನ, ಆತ್ಮನನ್ನು ಅರಿತುಕೊಳ್ಳುವುದು) ಪ್ರಮಾಣ–ಪ್ರಮೇಯಗಳ ಚೌಕಟ್ಟಿನಲ್ಲಿ ಬರಲಾರದು. ಆತ್ಮನನ್ನು ಯಾವ ಪ್ರಮಾಣಕ್ಕೂ ಪ್ರಮೇಯನೆನ್ನಲಾಗದು. 'ಅಲ್ಲಿಗೆ ಕಣ್ಣು ಹೋಗದು; ಮಾತು ಅದನ್ನು ಮುಟ್ಟದು, ಮನಸ್ಸು ಅಲ್ಲಿಗೆ ಹೋಗಲಾರದೆ ಹಿಂದಿರುಗುತ್ತದೆ. ತರ್ಕದಿಂದ ಅದನ್ನು ಕಂಡುಕೊಳ್ಳಲಾಗದು. ಅದಕ್ಕೆ ರೂಪವಿಲ್ಲ, ಅದು ಶಬ್ದವಲ್ಲ; ಮಾತಿನಿಂದ ಅದನ್ನು ಬಣ್ಣಿಸುವುದು ಸಾಧ್ಯವಿಲ್ಲ. ಅತ್ಯಂತ ಸೂಕ್ಷ್ಮವಾದುದು' ಎಂದು ಮುಂತಾಗಿ ಉಪನಿಷತ್ತುಗಳು ಹೇಳುವಾಗ ಆತ್ಮವಿದ್ಯೆ ಸಾಧಾರಣವಾದ ವಿದ್ಯೆಯಂತಲ್ಲ ಎಂದೇ ಗಮಕ. ಸಾಮಾನ್ಯವಾದ ಸಂವಿಧಾನವನ್ನು ಹಿಡಿದು ಆತ್ಮನನ್ನು ಸಿದ್ಧಪಡಿಸುವುದು ಆಗದು. ಆ ದಾರಿ ಹಿಡಿದರೆ ನಮಗೆ ದಕ್ಕುವುದು ನಿರಾಶೆಯೇ!

ಆದರೂ ಎಲ್ಲ ಉಪನಿಷತ್ತುಗಳು ಅಡಿಗಡಿಗೆ ಆತ್ಮನನ್ನು ಅರಿತುಕೊಳ್ಳಬೇಕೆಂದೆ ಹೇಳುತ್ತವೆಯಲ್ಲವೆ? 'ಈಗಲೇ ಆತ್ಮನನ್ನು ಅರಿತುಕೋ. ಹಾಗೆ ಅರಿತುಕೊಂಡರೆ ಸರಿಯಾದೀತು; ಇಲ್ಲವಾದರೆ ದೊಡ್ಡ ನಷ್ಟ!' ಎಂದು ಒಂದು ಉಪನಿಷತ್ತು ಹೇಳುತ್ತದೆ. ಆತ್ಮನ ಅರಿವೆಂದರೆ ಎಂದೂ ಇದ್ದೇ ಇರುವ ಆತ್ಮನನ್ನು ಸ್ಪಷ್ಟವಾದ ಅನುಭವಕ್ಕೆ ತಂದುಕೊಳ್ಳುವುದು; ಇದನ್ನೇ ಆತ್ಮದರ್ಶನ, ಆತ್ಮಾನುಭೂತಿ ಎಂದು ಕರೆಯುತ್ತಾರೆ. ಇಲ್ಲದಿರುವ ಜ್ಞಾನವನ್ನು ಹೊಸದಾಗಿ ಪಡೆದುಕೊಳ್ಳುವುದು ಸಾಮಾನ್ಯ ವಿದ್ಯೆ. ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳಿಂದ ನಾವು ಪಡೆದುಕೊಳ್ಳುವುದು ಈ ಬಗೆಯ ಜ್ಞಾನವನ್ನೇ; ಇಲ್ಲಿಯವರೆಗೆ ನಮ್ಮ ಪಾಲಿಗೆ ಇಲ್ಲದುದು ಪ್ರಮಾಣದಿಂದ ಒದಗಿಬರುತ್ತದೆ. ಆತ್ಮವಿದ್ಯೆ ಹೀಗಲ್ಲ. ಆತ್ಮ ಯಾರಿಗೂ ಯಾವ ಕಾಲಕ್ಕೂ ಆಗಂತುಕ ವಿಷಯವಲ್ಲ. ಪ್ರಮಾಣದಿಂದ ಅವನು ಸಿದ್ಧವಾಗಬೇಕಿಲ್ಲ. ಅವನಿಲ್ಲದೆ ಪ್ರಮಾಣಗಳೇ ಕೆಲಸ ಮಾಡಲಾರವು.

ಒಂದು ಉಪನಿಷತ್ತು ಹೇಳುತ್ತದೆ— 'ಕಣ್ಣಿನಿಂದ ಆತ್ಮನನ್ನು ನೋಡಲಾಗದು; ಆದರೆ ಆತ್ಮನಿಲ್ಲದಿದ್ದರೆ ಕಣ್ಣಿಗೆ ಏನನ್ನೂ ನೋಡುವ ಶಕ್ತಿಯಿರದು. ಮನಸ್ಸಿನಿಂದ ಆತ್ಮನನ್ನು ಕಲ್ಪಿಸಿಕೊಳ್ಳುವಂತಿಲ್ಲ; ಆದರೆ ಆತ್ಮನಿಲ್ಲದಿದ್ದರೆ ಮನಸ್ಸು ಕೆಲಸವನ್ನೇ ಮಾಡಲಾರದು.' ಇನ್ನೊಂದು ಉಪನಿಷತ್ತು ಆತ್ಮನನ್ನು 'ಕಣ್ಣಿನ ಕಣ್ಣು, ಕಿವಿಯ ಕಿವಿ, ಮನಸ್ಸಿನ ಮನಸ್ಸು' ಎಂದು ಬಣ್ಣಿಸುವಾಗ ಇದೇ ತಾತ್ಪರ್ಯವೇ. 'ಎಲ್ಲವನ್ನೂ ಅರಿತುಕೊಳ್ಳುವುದು ಆತ್ಮವೇ; ಅದನ್ನು ಅರಿತುಕೊಳ್ಳುವವನು ಯಾರು?' ಎಂದು ಮತ್ತೊಂದು ಉಪನಿಷತ್ತು ಆತ್ಮವಿದ್ಯೆಯ ಒಗಟನ್ನು ಎತ್ತಿ ಹೇಳುತ್ತದೆ.

ಆತ್ಮನನ್ನು ತಿಳಿದುಕೋ ಎಂದು ಉಪನಿಷತ್ತು ಹೇಳಿದಾಗ, ತಿಳಿದುಕೊಳ್ಳುವ ಉಪಾಯವೇನು ಎಂಬುದನ್ನೂ ತಿಳಿಯಹೇಳುತ್ತದೆ. ಈ ಉಪಾಯವನ್ನು ತಪಸ್ಸೆಂದು ನಿರ್ದೇಶಿಸಲಾಗಿದೆ. 'ತಪಸಾ ಬ್ರಹ್ಮ ವಿಜಿಜ್ಞಾಸಸ್ವ' (ಎಂದರೆ ತಪಸ್ಸಿನಿಂದ ಬ್ರಹ್ಮವನ್ನು ಅರಿತುಕೋ' ಎಂದರ್ಥ; ಬ್ರಹ್ಮವೇ ಆತ್ಮವೆಂದು ಉಪನಿಷತ್ತಿನ ಒಕ್ಕಣೆ) ಎಂಬುದು ಉಪನಿಷತ್ತು ಸೂಚಿಸುವ ಉಪಾಯ. ತಪಸ್ಸೆನ್ನುವ ಮಾತಿಗೆ ಸುಡುವುದು, ಕಾವನ್ನುಂಟುಮಾಡುವುದು, ಶರೀರವನ್ನು ಶೋಷಣೆ ಮಾಡುವುದು, ಇಂದ್ರಿಯಗಳನ್ನು ಬಿಗಿಹಿಡಿಯುವುದು, ಮನಸ್ಸನ್ನು ಒಂದೆಡೆ ನಿಲ್ಲಿಸುವುದು, ನಿಯಮದಿಂದ ದೇಹವನ್ನು ದಂಡಿಸುವುದು, ಉಪವಾಸವಿದ್ದು ಕೃಚ್ಛ್ರ, ಚಾಂದ್ರಾಯಣ ಮೊದಲಾದ ವ್ರತಗಳನ್ನಾಚರಿಸುವುದು ಹೀಗೆ ಅನೇಕ ಅರ್ಥಗಳಿವೆ. ಆದರೆ ಉಪನಿಷತ್ತುಗಳಲ್ಲಿ ಮಾತು, ಮೈ ಮನಸ್ಸುಗಳನ್ನೆಲ್ಲ ಒಮ್ಮುಖವಾಗಿ ಮಾಡಿ ಆತ್ಮತತ್ತ್ವವನ್ನು ಉಪಾಸನೆ ಮಾಡುವುದೆಂಬ ಅರ್ಥವೇ ಎದ್ದು ಕಾಣುತ್ತದೆ. ತಪಸ್ಸು ಋಗ್ವೇದದಲ್ಲೆ ಕಂಡುಬರುವ ಉಪಾಯ.

ಯೋಗ್ಯನಾದ ಗುರುವಿನ ಬಳಿಗೆ ಶ್ರದ್ಧೆಯಿಂದ ಸಾರಿ, ಅವನ ಉಪದೇಶವನ್ನು ಏಕಾಂತದಲ್ಲಿ ನಿಯಮದಲ್ಲಿದ್ದು, ಮನನ ಮಾಡುತ್ತ, ತದೇಕಧ್ಯಾನದಲ್ಲಿರುವುದು ತಪಸ್ಸು. ದೇಹ-ಮನಸ್ಸುಗಳಲ್ಲಿ ಶುಚಿಯಾಗುವುದು (ಶೌಚ), ಬದುಕಿನಲ್ಲಿ ನೇರವಾಗಿರುವುದು (ಆರ್ಜವ), ಕಾಮುಕನಾಗಿಲ್ಲದಿರುವುದು (ಬ್ರಹ್ಮಚರ್ಯೆ), ಯಾರನ್ನೂ ಗಾಸಿಗೊಳಿಸದಿರುವುದು, ಮಾತನಾಡದಿರುವುದು, ದಿಟವನ್ನೇ ನುಡಿಯುವುದು, ಹಿತವಾದ ಮಾತನ್ನಾಡುವುದು, ಶಾಸ್ತ್ರಾಭ್ಯಾಸ (ಸ್ವಾಧ್ಯಾಯ), ಜಪ (ಅಭ್ಯಸನ) ಇವು ಮಾತಿಗೆ ಸಂಬಂಧಪಟ್ಟ ನಿಯಮಗಳು; ನೆಮ್ಮದಿ

ಯಿಂದಿರುವುದು (ಮನಃಪ್ರಸಾದ), ಗೆಲುವಾಗಿರುವುದು (ಸೌಮ್ಯತ್ವ), ಅತಿಯಾಗಿ ಆಲೋಚನೆಗಳನ್ನು ಮಾಡದಿರುವುದು (ಮೌನ), ಇಂದ್ರಿಯಗಳನ್ನೂ ಮನಸ್ಸನ್ನೂ ಬಿಗಿಹಿಡಿಯುವುದು (ಆತ್ಮವಿನಿಗ್ರಹ), ಒಳ್ಳೆಯ ಭಾವನೆಗಳು (ಭಾವಸಂಶುದ್ಧಿ) ಇವೆಲ್ಲ ಮನಸ್ಸಿಗೆ ಸಂಬಂಧಿಸಿದ ನಿಯಮಗಳು.

ಇವೆಲ್ಲ ನಿಯಮಗಳಿಂದಾಗಿ ಮನಸ್ಸು ಒಳಮುಖನಾಗಿ ಅಡೆತಡೆಯಿಲ್ಲದೆ ಹರಿಯಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಮನಸ್ಸು ಹೊರಗೆ ಹರಿದಾಡುತ್ತ, ಅತ್ತಿತ್ತ ಚೆಲ್ಲಾಡಿ, ನೂರುಚೂರಾಗಿ ಗಾಳಿಪಾಲಾಗುತ್ತದೆ. ಮನಸ್ಸನ್ನು ಹೊರಗೆ ಹೋಗದಂತೆ ತಡೆಯುವುದು ಕಷ್ಟ; ತಡೆದು ಒಳಗೇ ಹರಿಯುವಂತೆ ಮಾಡುವುದು ಇನ್ನೂ ಕಷ್ಟ. ಸ್ವಭಾವವಾಗಿ ಒಡೆದುಹೋಗುವ ಮನಸ್ಸನ್ನು ಒಂದೆಡೆ ಬಿಗಿಯಾಗಿ ಹಿಡಿಯುವುದು ಮತ್ತಷ್ಟು ಕಷ್ಟ. ಇದನ್ನು 'ಅಂತಃಪ್ರಾವಣ್ಯ' ವೆಂದು ಕರೆಯುತ್ತಾರೆ. ತಪಸ್ಸಿನ ಉದ್ದೇಶ ಇದೇ. ಕೆಟ್ಟ ನಡತೆಯನ್ನು ಕೈಬಿಡದೆ, ನೆಮ್ಮದಿಯಾಗಿರದೆ, ಇಂದ್ರಿಯಗಳ ಪ್ರವೃತ್ತಿಯನ್ನು ತಡೆಯದೆ 'ಅಂತಃಪ್ರಾವಣ್ಯ' ಸಿದ್ಧಿಸಲಾರದೆಂದು ಕಠೋಪನಿಷತ್ತಿನ ಒಕ್ಕಣೆಯಿದೆ.

ಈ ಮನೋಧರ್ಮದಿಂದ ಎಡೆಬಿಡದೆ, ಆಸ್ಥೆಯಿಂದ ಶಾಸ್ತ್ರಾಭ್ಯಾಸ ಮಾಡುವುದೂ ತಪಸ್ಸೇ. ಆಪಸ್ತಂಬ ಧರ್ಮಸೂತ್ರದಲ್ಲಿ (೧,೪,೧೨,೨) ಈ ಮಾತು ಬರುತ್ತದೆ—'ತತ್ರ ಶ್ರೂಯತೇ ಸ ಯದಿ ತಿಷ್ಠನ್ನಾಸೀನಃ ಶಯಾನೋ ವಾ ಸ್ವಾಧ್ಯಾಯಮಧೀತೇ ತಪ ಏವ ತತ್ತಪ್ಯತೇ ತಪೋ ಹಿ ಸ್ವಾಧ್ಯಾಯ ಇತಿ.' ಸ್ವಾಧ್ಯಾಯವೆಂದರೆ ತನ್ನ ವೇದಶಾಖೆಯನ್ನು ಅರ್ಥವತ್ತಾಗಿ ಅಧ್ಯಯನ ಮಾಡುವುದೆಂದು ವಾಡಿಕೆಯ ಅರ್ಥವಿದ್ದರೂ, ಶಾಸ್ತ್ರದಲ್ಲಿ ಕೇಳಿದ್ದನ್ನು (ಶ್ರವಣ), ಮನಸ್ಸಿನಿಂದ ಚೆನ್ನಾಗಿ ತನ್ನದಾಗಿ ಮಾಡಿಕೊಂಡು (ಮನನ), ಅದನ್ನೇ ಕುಳಿತಾಗ ನಿಂತಾಗ ಮಲಗಿದಾಗ (ಎಂದರೆ ಸದಾ ಕಾಲವೂ) ಆಲೋಚನೆ ಮಾಡುತ್ತಿರುವುದು (ನಿದಿಧ್ಯಾಸನ), ಸ್ವಾಧ್ಯಾಯವೆಂದು ಇಲ್ಲಿನ ಅರ್ಥ. ಈ ಬಗೆಯ ಶ್ರವಣ, ಮನನ, ನಿದಿಧ್ಯಾಸನಗಳು ತಪಸ್ಸೇ. ಉಪನಿಷತ್ತಿನ ಆಶಯವನ್ನು ಅರಿತುಕೊಳ್ಳುವ ಉಪಾಯವೆಂದರೆ ಇದೇ.

ತಪಸ್ಸಿನಿಂದ ಮನಸ್ಸಿನಲ್ಲಿ ಏಕಾಗ್ರತೆಯೊದಗಿ ವಿಶೇಷವಾದ, ಸೃಜನಾತ್ಮಕವಾದ ಶಕ್ತಿಯೊಂದು ಸಿದ್ಧವಾಗುತ್ತದೆ; ತಪಸ್ಸಿನಿಂದ ಮನಸ್ಸಿನ ಸಂಸ್ಕಾರವೂ ಆಗಿ ಆತ್ಮದರ್ಶನ ಸಾಧ್ಯವಾಗುತ್ತದೆ. ಆತ್ಮನನ್ನು ಕಂಡುಕೊಳ್ಳಲು ನಮಗೆ ಮನಸ್ಸಲ್ಲದೆ ಬೇರೆ

ದಾರಿಯಿಲ್ಲ. ಸಾಮಾನ್ಯವಾಗಿರುವ, ಸಂಸ್ಕಾರವಾಗದ ಮನಸ್ಸು ಬಹಿರ್ಮುಖವಾಗಿರುತ್ತದೆ; ಅದು ಆತ್ಮನನ್ನು ಎಂದೂ ಕಾಣಲಾರದು. ಉಪನಿಷತ್ತು ಸೂಚಿಸುವ ಉಪಾಯವೆಂದರೆ ಮನಸ್ಸನ್ನು ಒಳಮುಖನಾಗಿ ಹರಿಯಬಿಡುವುದು. 'ಶಾಸ್ತ್ರಾಚಾರ್ಯೋಪದೇಶ'ದಿಂದ ಸಂಸ್ಕೃತವಾದ ಮನಸ್ಸು ಆತ್ಮದರ್ಶನಕ್ಕೆ ಅಧಿಕಾರಿಯಾಗುತ್ತದೆ. ಉಪನಿಷತ್ತುಗಳಲ್ಲಿ ಬರುವ 'ಮನಸ್ಸು ಅದನ್ನು ಮುಟ್ಟಲಾರದು' ಎಂಬ ಮಾತನ್ನೂ, 'ಮನಸ್ಸಿನಿಂದಲೇ ಅದನ್ನು ಅರಿತುಕೊಳ್ಳಬೇಕು' ಎಂಬ ಮಾತನ್ನೂ ಸಮನ್ವಯ ಮಾಡಿಕೊಳ್ಳುವುದು ಹೀಗೆ.

೬

ಉಪಾಸನೆಯೆಂಬ ಪ್ರಕ್ರಿಯೆಯೂ ಉಪನಿಷತ್ತಿನಲ್ಲಿ ಮತ್ತೆ ಮತ್ತೆ ಬರುತ್ತದೆ. ಉಪಾಸನೆಯೆಂಬ ಮಾತಿಗೂ ಉಪನಿಷತ್ತಿನಂತೆಯೆ 'ಹತ್ತಿರ ಹೋಗಿ ಕುಳಿತುಕೊಳ್ಳುವುದು' ಎಂದೇ ಅರ್ಥ. ತಿಳಿದುಕೊಳ್ಳುವುದು (ವೇದನ), ನೇರವಾಗಿ ನೋಡುವುದು (ದರ್ಶನ), ಎಡೆಬಿಡದೆ ಮನಸ್ಸಿನಲ್ಲಿ ನಿಲ್ಲಿಸಿಕೊಳ್ಳುವುದು (ಧ್ರುವಾನುಸ್ಮೃತಿ) ಇವು ಉಪಾಸನೆಗೆ ಪರ್ಯಾಯಪದಗಳೇ. ಇಲ್ಲಿ ಆತ್ಮ (ಅಥವಾ ಬ್ರಹ್ಮ) ಮುಖ್ಯವಾಗಿ ಉಪಾಸ್ಯ (ಎಂದರೆ ಉಪಾಸನೆಗೆ ಪಾತ್ರವಾಗುವ ವಸ್ತು). ಉಪನಿಷತ್ತುಗಳಲ್ಲಿ ಆತ್ಮನನ್ನು ಕಾಣಲು ಹಲವಾರು ಉಪಾಸನೆಗಳನ್ನು ಸೂಚಿಸಲಾಗಿದೆ. ಇವಕ್ಕೆ ವಿದ್ಯೆಗಳೆಂದು ಹೆಸರು. ವಿದ್ಯೆಗೆ 'ವಿಧಿಚೋದಿತೋ ಜ್ಞಾನ ವಿಶೇಷಃ' ಎಂಬ ನಿರ್ದೇಶನವಿದೆ. ಶಾಸ್ತ್ರದಲ್ಲಿ ಹೇಳಿರುವ ಸಾಧನೆಗಳು ಇವು. ಇವು ಅರಿವನ್ನು ವಿಶಿಷ್ಟರೀತಿಯಿಂದ ಒಡಮೂಡಿಸುತ್ತವೆ.

ಒಂದೊಂದು ಉಪನಿಷತ್ತಿನಲ್ಲಿ ಒಂದೊಂದು ವಿದ್ಯೆ; ಕೆಲವು ಉಪನಿಷತ್ತುಗಳಲ್ಲಿ ಹಲವಾರು ವಿದ್ಯೆಗಳು. ಒಟ್ಟು ಮೂವತ್ತೆರಡು ವಿದ್ಯೆಗಳೆಂದು ಎಣಿಕೆ. ಛಾಂದೋಗ್ಯದಲ್ಲಿ ವೈಶ್ವಾನರ ವಿದ್ಯೆ, ಸದ್ವಿದ್ಯೆ, ಉಪಕೋಸಲ ವಿದ್ಯೆ, ಮಧುವಿದ್ಯೆ, ಪಂಚಾಗ್ನಿವಿದ್ಯೆ, ಅಕ್ಷಿವಿದ್ಯೆ ಮೊದಲಾದುವು; ಬೃಹದಾರಣ್ಯಕದಲ್ಲಿ ಜ್ಯೋತಿರ್ವಿದ್ಯೆ, ಬಾಲಾಕಿವಿದ್ಯೆ, ಮೈತ್ರೇಯಿವಿದ್ಯೆ, ಗಾರ್ಗ್ಯಕ್ಷರವಿದ್ಯೆ, ಶಾಂಡಿಲ್ಯವಿದ್ಯೆ, ಉಪಸ್ತಕಹೋಲವಿದ್ಯೆ, ಮೊದಲಾದುವು. ತೈತ್ತಿರೀಯದಲ್ಲಿ ಭಾರ್ಗವೀ ವಾರುಣೀ ವಿದ್ಯೆ, ನ್ಯಾಸವಿದ್ಯೆ, ದಹರವಿದ್ಯೆ, ಆನಂದಮಯವಿದ್ಯೆ, ಮೊದಲಾದುವು; ಕಠದಲ್ಲಿ ಪರಮಪುರುಷವಿದ್ಯೆ,

ನಚಿಕೇತವಿದ್ಯೆ, ಅಂಗುಷ್ಠಪ್ರಮಿತವಿದ್ಯೆ ಮೊದಲಾದುವು; ಕೌಷೀತಕಿಯಲ್ಲಿ ಪರ್ಯಾಂಕ ವಿದ್ಯೆ, ಪ್ರತರ್ದನವಿದ್ಯೆ ಇವು; ಮುಂಡಕದಲ್ಲಿ ಅಕ್ಷರವಿದ್ಯೆ, ಇವೆಲ್ಲ ನಿದರ್ಶನಗಳು.

ಉಪನಿಷತ್ತುಗಳಲ್ಲಿ ಈ ವಿದ್ಯೆಗಳ ಪ್ರಸ್ತಾಪ ಬರುವುದು ಸಾಮಾನ್ಯವಾಗಿ ಗುರುಶಿಷ್ಯ ಸಂವಾದ ಸಂದರ್ಭದಲ್ಲಿ. ಉಪನಿಷತ್ತುಗಳ ರಚನೆಯ ರೀತಿಯೇ ಇದಕ್ಕೆ ಅನುಕೂಲವಾಗಿದೆಯೆನ್ನಬಹುದು. ಆತ್ಮನನ್ನು (ಬ್ರಹ್ಮನನ್ನು) ತಿಳಿಯಬೇಕೆಂಬ ಉತ್ಕಟವಾದ ಅಪೇಕ್ಷೆಯುಳ್ಳ ಶಿಷ್ಯನು ಸಮರ್ಥನಾದ ಗುರುವೊಬ್ಬನನ್ನು ಅರಸಿಕೊಂಡು ಹೋಗುವನು. ಹೀಗೆ ಹೋಗದೆ ಆತ್ಮಜ್ಞಾನವಾಗದೆಂದು ಉಪನಿಷತ್ತು ಸ್ಪಷ್ಟಪಡಿಸುತ್ತದೆ. ಗುರುವು ಬ್ರಹ್ಮನಿಷ್ಠನಾಗಿ, ಶ್ರೋತ್ರಿಯನಾಗಿರಬೇಕೆಂದೂ ಶಿಷ್ಯನು ಸಮಿತ್ಪಾಣಿಯಾಗಿ (ಎಂದರೆ ವಿನಯಶ್ರದ್ಧೆಗಳಿಂದ ಕೂಡಿದವನಾಗಿ) ಇರಬೇಕೆಂದೂ ಉಪನಿಷತ್ತಿನ ಒಕ್ಕಣೆ. ಇಂಥ ಹಲವಾರು ಗುರುಶಿಷ್ಯರು ಉಪನಿಷತ್ತುಗಳಲ್ಲಿ ಕಾಣಸಿಕೊಳ್ಳುತ್ತಾರೆ; ಇವರೆಲ್ಲರೂ ಐತಿಹಾಸಿಕ ವ್ಯಕ್ತಿಗಳೆಂಬುದರಲ್ಲಿ ಸಂಶಯವಿರದು. ವಿದೇಹದ (ಈಗಿನ ತಿರ್ಹುತ್) ಅರಸ ಜನಕ ಶಿಷ್ಯನಾದರೆ ಯಾಜ್ಞವಲ್ಕ್ಯನು ಗುರು; ಯಾಜ್ಞವಲ್ಕ್ಯನ ಹೆಂಡತಿ ಮೈತ್ರೇಯಿಯೂ ಗಂಡನ ಶಿಷ್ಯಳೇ. ಪಾಂಚಾಲ ದೇಶದ ಉದ್ದಾಲಕ ಆರುಣಿ ಗುರು, ಅವನ ಮಗ ಶ್ವೇತಕೇತು ಶಿಷ್ಯ. ಕಾಶಿಯ ಅಜಾತಶತ್ರು ಗುರು, ಗಾರ್ಗ್ಯಬಾಲಾಕಿ ಶಿಷ್ಯ; ಪಿಪ್ಪಲಾದನೆಂಬ ಗುರುವಿನ ಶಿಷ್ಯರಲ್ಲಿ ಭಾರ್ಗವನೆಂಬುವನು ವಿದರ್ಭದವನು, ಆಶ್ವಲಾಯನ ಕೋಸಲದವನು. ಶಾಕಾಯನ್ಯನೆಂಬ ಗುರುವಿನ ಬಳಿ ಶಿಷ್ಯನಾದ ಬೃಹದ್ರಥನು ಅಯೋಧ್ಯೆಯ ಅರಸ, ಇಕ್ಷ್ವಾಕುವಂಶದವನು. ಹಾಗೆಯೇ ಸನತ್ಕುಮಾರನೆಂಬ ಗುರು, ನಾರದನೆಂಬ ಶಿಷ್ಯ; ಹಾರಿದ್ರುಮತ (ಗುರು), ಸತ್ಯಕಾಮಜಾಬಾಲ (ಶಿಷ್ಯ) ; ಅಶ್ವಪತಿ (ಗುರು), ಭೃಗು (ಶಿಷ್ಯ); ಪ್ರಜಾಪತಿ– ವಿರೋಚನ ಈ ಗುರುಶಿಷ್ಯರು ನಿದರ್ಶನಗಳು. ಇವರಲ್ಲದೆ ಮಹೀದಾಸ, ಐತರೇಯ, ಶ್ವೇತಾಶ್ವತರ, ರೈಕ್ವ, ದಧ್ಯಙ್‌ಶೌನಕ, ಉಷಸ್ತಿ ಚಾಕ್ರಾಯಣ, ಗಾರ್ಗಿ ವಾಚಕ್ನವಿ ಮೊದಲಾದ ಗುರುಗಳ ಉಲ್ಲೇಖ ದೊರೆಯುತ್ತದೆ. ಈ ಗುರುಶಿಷ್ಯರ ಒಕ್ಕಣೆಗಳನ್ನು ಗಮನಿಸಿದರೆ ಕುರುಕ್ಷೇತ್ರವೆಂಬ ಭೂಭಾಗದಲ್ಲಿಯೇ (ಎಂದರೆ ಈಗಿನ ಪಂಜಾಬ್ ಗಡಿಯಾದ ಸಿರ್‌ಹಿಂದ್‌ನಿಂದ ಉತ್ತರಪ್ರದೇಶದ ವಿದೇಹದವರೆಗೆ) ಉಪನಿಷತ್ತಿನ ವಿದ್ಯೆಗಳು ಮೈದಳೆದುವೆಂದು ಹೇಳಬಹುದು.

ಈ ವಿದ್ಯೆಗಳಲ್ಲೆಲ್ಲ ಮುಖ್ಯವಾದ ವಿವರವೆಂದರೆ ಗುರುವಿನಿಂದ ಹೇಳಲ್ಪಟ್ಟಂತೆ, ಅಥವಾ ಶಾಸ್ತ್ರವು ನಿರ್ದೇಶಿಸುವಂತೆ, ಯಾವುದಾದರೂ ಆಸರೆಯನ್ನು ಹಿಡಿದು ಮನಸ್ಸನ್ನು ಅದರಲ್ಲಿ ಬೇರೂರಿಸುವುದು; ಬೇರೆ ಆಲೋಚನೆಗಳು ಬಂದರೆ ಅವನ್ನು ದೂರ ಸರಿಸಿ, ಮನಸ್ಸು ಕದಲದೆ ಧ್ಯಾನಕ್ಕೆ ಆರಿಸಿಕೊಂಡ ವಿಷಯದಲ್ಲೇ ಧಾರಾಕಾರವಾಗಿ ನಿಲ್ಲುವಂತೆ ಮಾಡುವುದು. 'ಸಮಾನ ಚಿತ್ತವೃತ್ತಿ ಸಂತಾನ'ವೆಂದು ಶಂಕರಾಚಾರ್ಯರು ಉಪಾಸನೆಯನ್ನು ಬಣ್ಣಿಸಿದ್ದಾರೆ. ಶಿಷ್ಯನ ಮನೋವೃತ್ತಿ, ಸ್ವಭಾವ, ಒಲವು ಹಿನ್ನೆಲೆ ಸಾಮರ್ಥ್ಯಗಳನ್ನು ಗಮನಿಸಿ ಗುರುವು ಯಾವ ಆಸರೆ ಅನುಕೂಲವಾದುದೆಂದು ನಿರ್ಧರಿಸುತ್ತಾನೆ. ಉಪಾಸನೆಗಳು ಬೇರೆಬೇರೆಯಾಗುವುದು ಈ ಕಾರಣದಿಂದ. ಎಲ್ಲರಿಗೂ ಒಂದೇ ಉಪಾಸನೆಯೆಂದರೆ ಸರಿಯಾಗುವುದಿಲ್ಲ; ಅವರವರಿಗೆ ತಕ್ಕಂತೆ ಉಪಾಸನೆಗಳಿರಬೇಕು. ಎಲ್ಲರೂ ಒಂದೇ ಬಗೆಯ ವ್ಯಕ್ತಿಗಳಲ್ಲವಷ್ಟೆ? ಉಪನಿಷತ್ತುಗಳು ತತ್ತ್ವವನ್ನು ನಿರೂಪಿಸುವ ಬಗೆಯೂ ಬೇರೆ ಬೇರೆಯಾಗಿರುವುದನ್ನು ನೋಡಬಹುದು. ಇದರಿಂದಾಗಿ ಕೆಲವು ಪಾಶ್ಚಾತ್ಯಪಂಡಿತರೂ, ಅವರನ್ನನುಸರಿಸಿದ ನಮ್ಮ ಪಂಡಿತರೂ ಉಪನಿಷತ್ತುಗಳ ಉಪದೇಶದಲ್ಲಿ ವೈವಿಧ್ಯವಿದೆ, ಅವುಗಳಲ್ಲಿ ಸಮನ್ವಯ ಎಂಬುದು ಸಾಧ್ಯವಿಲ್ಲ ಎಂಬ ಭ್ರಮೆಗೆ ಒಳಗಾಗಿದ್ದಾರೆ. ಉಪದೇಶದ ವಸ್ತು ಒಂದೇ, ವಿಧಾನ ಬೇರೆ ಬೇರೆ ಎಂಬುದು ಸಾಂಪ್ರದಾಯಿಕ ನಿಲುವು.

ಉಪಾಸನೆಯ ಉದ್ದೇಶ ಜ್ಞಾನವೇ. ಉಪನಿಷತ್ತು ಜ್ಞಾನಕಾಂಡವೆನ್ನುವುದು ಈ ದೃಷ್ಟಿಯಿಂದಲೇ. ಉಪಾಸನೆಯು ಬ್ರಾಹ್ಮಣಗಳಲ್ಲಿ ಹೇಳುವ ಕರ್ಮಗಳಂತಲ್ಲ. ಉಪಾಸನೆಯಿಂದ ಪ್ರಾಪಂಚಿಕವಾದ ಯಾವ ಪ್ರಯೋಜನವನ್ನೂ ಸಾಧಕನು ಬಯಸುವುದಿಲ್ಲ; ಆತ್ಮಜ್ಞಾನವೊಂದೇ ಉಪಾಸನೆಯ ಫಲ. ಆದ್ದರಿಂದ ಉಪನಿಷತ್ತುಗಳಲ್ಲಿ ಕೆಲವೊಮ್ಮೆ ವಿದಿ(ಎಂದರೆ ಜ್ಞಾನ)ಯಿಂದ ಆರಂಭಿಸಿ ಉಪಾಸ್ತಿ (ಎಂದರೆ ಉಪಾಸನೆ) ಯಲ್ಲಿ ಮುಗಿಸುವುದನ್ನು ಕಾಣುತ್ತೇವೆ; ಮತ್ತೆ ಕೆಲವು ಕಡೆ ಉಪಾಸ್ತಿಯಿಂದ ಆರಂಭಿಸಿ ವಿದಿಯಲ್ಲಿ ಮುಗಿಸುವುದೂ ಉಂಟು. ಎಂದಮೇಲೆ ವಿದಿ-ಉಪಾಸ್ತಿ(ಜ್ಞಾನ-ಉಪಾಸನೆ)ಗಳು ಬೇರೆಬೇರೆಯಲ್ಲವೆಂದಾಯಿತು.

ಕೆಲವು ಉಪನಿಷತ್ತುಗಳಲ್ಲಿ (ನಿದರ್ಶನಕ್ಕೆ ಕಠ, ಶ್ವೇತಾಶ್ವತರ, ಮೈತ್ರಾಯಣೀಯಗಳಲ್ಲಿ) ತಪಸ್ಸು ಅಥವಾ ಉಪಾಸನೆಯನ್ನು ಯೋಗದ ಚೌಕಟ್ಟಿನಲ್ಲಿ

ಕಾಣಿಸಲಾಗಿದೆ. ಮುಂದೆ ಅಥರ್ವವೇದಕ್ಕೆ ಸೇರಿಕೊಂಡ ಕೆಲವು ಉಪನಿಷತ್ತುಗಳು ಯೋಗೋಪನಿಷತ್ತುಗಳೆಂದೇ ಕರೆಸಿಕೊಳ್ಳುತ್ತವೆ. ಇವುಗಳಲ್ಲಿ ಪಾತಂಜಲ ಯೋಗ, ಹಠಯೋಗ, ಲಯಯೋಗಗಳನ್ನು ಅಳವಡಿಸಿಕೊಂಡಿದ್ದಾರೆ. ಆದರೆ ಪ್ರಾಚೀನ ಉಪನಿಷತ್ತುಗಳಲ್ಲಿ ಯೋಗವೆಂದರೆ ಬ್ರಹ್ಮನಲ್ಲಿ ಮನಸ್ಸು ಸೇರಿಕೊಂಡು ಮರೆಯಾಗುವುದೆಂಬರ್ಥವೇ ಇದೆ.

ಬೃಹದಾರಣ್ಯಕದಲ್ಲಿ ಉಪರತಿಯೆಂಬ ಯೋಗಮಾರ್ಗದ ಉಲ್ಲೇಖವಿದೆ. ಇದು ಅಷ್ಟಾಂಗಯೋಗದ ಪ್ರತ್ಯಾಹಾರಕ್ಕೆ ಸಮನಾದುದು. ಛಾಂದೋಗ್ಯದಲ್ಲಿ ಸತ್ತ್ವಶುದ್ಧಿಯ ಅಗತ್ಯವನ್ನು ಹೇಳಲಾಗಿದೆ. ಕಠದಲ್ಲೂ, ಕೌಷೀತಕೀ ಪ್ರಶ್ನ ಉಪನಿಷತ್ತುಗಳಲ್ಲಿ ಸಮಾಧಿಯ ವರ್ಣನೆಯಿದೆ. ಶ್ವೇತಾಶ್ವತರ, ಮೈತ್ರಾಯಣೀಯ ಗಳಲ್ಲಿ ಪ್ರಾಣಾಯಾಮದ ವಿಚಾರ ಬರುತ್ತದೆ.

ಆದರೂ ಉಪನಿಷತ್ತುಗಳು ಹಿಡಿಯುವ ದಾರಿಯೇ ಬೇರೆ; ಪಾತಂಜಲ ಯೋಗವು ಹಿಡಿಯುವ ದಾರಿಯೇ ಬೇರೆ. ಇಂದು ಪ್ರಸಿದ್ಧವಾಗಿರುವ ಯೋಗಸಾಧನೆಗಳು ಉಪನಿಷತ್ತಿನ ಒಲವಿಗೆ ಹೊರತಾದುವು. ಶಾರೀರಿಕವಾದ ಯಾವ ಸಾಧನೆಯನ್ನೂ ಉಪನಿಷತ್ತು ಆತ್ಮಜ್ಞಾನಕ್ಕೆ ಸಹಕಾರಿಯೆಂದು ಸೂಚಿಸುವುದಿಲ್ಲ. ಉಪನಿಷತ್ತು ಹೇಳುವ ಉಪಾಸನೆಯಲ್ಲಿ ಇಂದ್ರಿಯ ನಿಗ್ರಹ, ಸತ್ತ್ವಶುದ್ಧಿಗಳ ಅಗತ್ಯವಿದ್ದರೂ ಪ್ರಧಾನವಾಗಿ ಅದು ಧ್ಯಾನವೆಂಬ ಮಾನಸವ್ಯಾಪಾರವೇ. ಕ್ರಿಯಾಭಾಗವನ್ನೇ ಎತ್ತಿ ಹೇಳುವ ಯೋಗದ ಕಲ್ಪನೆ ಉಪನಿಷತ್ತಿನದಲ್ಲ. ಉಪಾಸನೆಗೆ ಆಸನವೇನು ಮುಖ್ಯವಲ್ಲ; ಪ್ರಾಣೋಪಾಸನೆಯಲ್ಲಿ ಪ್ರಾಣಾಯಾಮದ ಪಾತ್ರವೇನು ಇರದು: ನಿದಿಧ್ಯಾಸನವೆಂದರೆ ಧಾರಣವೂ ಅಲ್ಲ, ಸಮಾಧಿಯೂ ಅಲ್ಲ. ಉಪನಿಷತ್ತುಗಳ ಉಪಾಸನೆಯೆಂದರೆ ದಿಟವಾಗಿ ಶ್ರವಣ, ಮನನ, ನಿದಿಧ್ಯಾಸನಗಳಷ್ಟೆ.

ಈ ವಿಚಾರವಾಗಿ ಜನರಲ್ಲಿ ಒಂದು ತಪ್ಪು ಕಲ್ಪನೆಯಿದೆ. ಇದು, ಈಗ ನಮಗೆ ಪರಿಚಿತವಾಗಿರುವ ಯೋಗಸಾಧನೆಗಳು ವೈದಿಕಪರಂಪರೆಗೆ ಸೇರಿದುವು ಎಂಬುದು; ಉಪನಿಷತ್ತಿನ ಉಪಾಸನೆಯನ್ನೂ ಯೋಗಮಾರ್ಗವನ್ನೂ ವಿರಸವಿಲ್ಲದೆ ಸೇರಿಸಿಕೊಳ್ಳಬಹುದು ಎಂಬುದು. ಕೆಲವು ಪ್ರಾಚೀನ ಉಪನಿಷತ್ತುಗಳಲ್ಲಿ (ಮುಖ್ಯವಾಗಿ ಕಠ, ಶ್ವೇತಾಶ್ವತರ, ಮೈತ್ರಾಯಣೀಯಗಳಲ್ಲಿ) ಯೋಗದ ಪಾರಿಭಾಷಿಕ ಪದಗಳು ಕಾಣಸಿಗುವುದು ದಿಟ. ಆದರೆ ಇವೆಲ್ಲ ಯಜುರ್ವೇದಕ್ಕೆ ಸೇರಿದ ಉಪನಿಷತ್ತುಗಳು.

ಯಜ್ಞಯಾಗಾದಿಗಳಿಗೆ ಹೇಳಿದ್ದು ಯಜುರ್ವೇದ. ಯಜ್ಞಯಾಗಾದಿಗಳು ಕರ್ಮಕಾಂಡವೆನಿಸಿಕೊಳ್ಳುತ್ತವೆ; ಕ್ರಿಯಾತ್ಮಕವಾದ ಯೋಗವೂ ಕರ್ಮಕಾಂಡವೇ. ಋಗ್ವೇದಕ್ಕೆ ಸಾಮವೇದಕ್ಕೆ ಸೇರಿದ ಉಪನಿಷತ್ತುಗಳಲ್ಲಿ ಈ ಬಗೆಯ ಯೋಗದ ಗಂಧಗಾಳಿಯೂ ಸುಳಿಯದು. ಇನ್ನು ಯೋಗೋಪನಿಷತ್ತುಗಳೆಲ್ಲ ಅಥರ್ವವೇದಕ್ಕೆ ಸೇರಿದವು. ಅಥರ್ವವೇದವೂ ಯಜ್ಞ, ತಂತ್ರ, ಭೈಷಜ್ಯ, ಆಭಿಚಾರ ವ್ರತಗಳನ್ನೇ ಹೇಳುತ್ತದೆಯಾಗಿ ಅದರ ಸ್ವರೂಪವೂ ಕರ್ಮಕಾಂಡದ್ದೇ. ಅದರಲ್ಲಿ ಅಷ್ಟಾಂಗಯೋಗ, ಹಠಯೋಗದ ಸಿದ್ಧಿಗಳು, ವಿಭೂತಿಗಳು ಕಂಡುಬಂದರೆ ಆಶ್ಚರ್ಯವೇನಿಲ್ಲ.

೧೦

ಬ್ರಹ್ಮವಿದ್ಯೆಯು ಪರಾವಿದ್ಯೆಯೆಂದು ಹೇಳಿದೆಯಷ್ಟೆ. ಉಪನಿಷತ್ತುಗಳಲ್ಲಿ ಹೇಳಿರುವ ವಿದ್ಯೆಗಳು ನಿರ್ಗುಣನಾದ, ನಿರ್ವಿಶೇಷನಾದ ಬ್ರಹ್ಮನನ್ನು (ಆತ್ಮನನ್ನು) ಪಡೆದುಕೊಳ್ಳುವ ಸಲುವಾಗಿ ಇರುವುವು. ಉಪನಿಷತ್ತುಗಳಲ್ಲಿ ಪ್ರತಿಪಾದ್ಯನಾದ ಬ್ರಹ್ಮನಿಗೆ ರೂಪವಿರದು, ಮಾತಾಗಲಿ ಮನಸ್ಸಾಗಲಿ ಅವನನ್ನು ಮುಟ್ಟದು. ಎಂದಮೇಲೆ ಅವನು ಯಾವ ಉಪಾಸನೆಗಾಗಲಿ ವಿಷಯವಾಗುವುದು ಹೇಗೆ? ಅವನು ಜ್ಞೇಯ, ಉಪಾಸ್ಯನಲ್ಲವಲ್ಲವೆ? ಉಪನಿಷತ್ತುಗಳೂ ಅವನು ಅಗ್ರಾಹ್ಯ (ಪಡೆದುಕೊಳ್ಳಲಾರದವನು), ಅನಿರ್ದೇಶ್ಯ (ಬಣ್ಣನೆಗೆ ಬಾರದವನು), ಅರೂಪ (ಯಾವೊಂದು ಆಕಾರವೂ ಇಲ್ಲದವನು), ಅಣು, ಸುಸೂಕ್ಷ್ಮ (ಇಂದ್ರಿಯಗಳಿಗೆ, ಮನಸ್ಸಿಗೆ ಗೋಚರನಾಗದವನು) ಎಂದೆಲ್ಲ ಹೇಳುತ್ತವೆಯಷ್ಟೆ? ಎಂದರೆ ಇರುವುದೆಲ್ಲ ಬ್ರಹ್ಮವೇ (ಸರ್ವಂ ಖಲ್ವಿದಂ ಬ್ರಹ್ಮ) ಎಂದಾದಾಗ ಬ್ರಹ್ಮನಿಗೆ ಮೂರ್ತ (ಸಗುಣ, ಸಾಕಾರ), ಅಮೂರ್ತ (ನಿರ್ಗುಣ, ನಿರಾಕಾರ) ಎಂದೆರಡು ರೂಪಗಳನ್ನು ಊಹಿಸಿಕೊಳ್ಳಬೇಕೆಂದು ಬೃಹದಾರಣ್ಯಕ ಸೂಚಿಸುತ್ತದೆ. ಉಪಾಸನೆಯು ಪ್ರಸಕ್ತವಾಗುವುದು ಮೊದಲ ರೂಪದಲ್ಲಿ. ಅದನ್ನು ಉಪಾಸ್ಯಬ್ರಹ್ಮನೆನ್ನಬಹುದು.

ವಿದ್ಯೆಯಲ್ಲಿ ಪರ, ಅಪರ ಎಂದಿರುವಂತೆಯೇ ಬ್ರಹ್ಮನಲ್ಲೂ ಪರ, ಅಪರ ಎಂಬೆರಡು ಬಗೆಗಳು. ಅಪರ ಬ್ರಹ್ಮನೆಂದರೆ ಈ ಜಗತ್ತಿಗೆ ಕಾರಣನಾದವನು, ಪಾಲಕನಾದವನು, ನಿಯಾಮಕನಾದವನು. ಇದನ್ನು 'ಸತ್ಯ'ವೆಂದು ಉಪನಿಷತ್ತು ಕರೆದು ಪರಬ್ರಹ್ಮನನ್ನು 'ಸತ್ಯಸ್ಯ ಸತ್ಯ' (ಸತ್ಯದ ಸತ್ಯ) ಎಂದು ಹೇಳುತ್ತದೆ;

ಪರಬ್ರಹ್ಮನನ್ನು ಅಮೃತವೆಂದೂ ಕರೆದು, 'ಸತ್ಯವು ಅಮೃತವನ್ನು ಮುಚ್ಚಿದೆ' ('ಅಮೃತಂ ಸತ್ಯೇನ ಛನ್ನಂ') ಎಂದು ಬೃಹದಾರಣ್ಯಕವು ವಿವರಿಸುತ್ತದೆ. ಸತ್ಯವೆಂದರೆ ದಿಟವಾಗಿ ಇರುವುದು; ಇದ್ದು ತೋರಿಕೊಳ್ಳುವುದು. ಅದರಲ್ಲಿ ರೂಪವುಳ್ಳದ್ದು, ಖಚಿತವಾದದ್ದು, ಉಳಿದುಕೊಳ್ಳುವುದು ಎಂಬ ಭಾಗವೂ ಇರುತ್ತದೆ (ಇದು ಸತ್); ರೂಪವಿಲ್ಲದ್ದು, ಖಚಿತವಲ್ಲದ್ದು, ತೋರಿ ಮರೆಯಾಗುವಂಥದು ಎಂಬ ಭಾಗವೂ ಇರುತ್ತದೆ (ಇದು ತ್ಯಂ); ಎರಡೂ ಕೂಡಿ ಸತ್ಯ. ಇವೆರಡರ ಆಚೆಯಿರುವುದು 'ಸತ್ಯಸ್ಯ ಸತ್ಯ'; ಹುಟ್ಟುವುದೂ ಇಲ್ಲ, ಅಳಿಯುವುದೂ ಇಲ್ಲವಾದುದರಿಂದ 'ಅಮೃತ'.

'ಅಮೃತ'ವನ್ನೇ (ಸತ್ಯಸ್ಯ ಸತ್ಯ) ಉಪನಿಷತ್ತುಗಳು ಆತ್ಮ, ರಸ, ಆನಂದ, ಪುರುಷ ಎಂದೆಲ್ಲ ನಿರ್ದೇಶಿಸುತ್ತವೆ. ಛಾಂದೋಗ್ಯದಲ್ಲಿ ಇದನ್ನು ಇರವು (ಸತ್), ಅರಿವು (ಚಿತ್), ಆನಂದ ಎಂದು ಬಣ್ಣಿಸಲಾಗಿದೆ. ಮೂರ್ತವಾದ ಸತ್ಯವನ್ನು ಸತ್, ಅಸತ್, ಅವ್ಯಕ್ತ, ಅಕ್ಷರ ಎಂಬ ಮಾತುಗಳಿಂದ ಸೂಚಿಸುತ್ತಾರೆ. ಇದು ಸಗುಣ, ಸಕ್ರಿಯ, ಸೋಪಾಧಿಕ (ಉಪಾಧಿಗಳಿಂದ ಕೂಡಿದ್ದು). ಕೆಲವೊಮ್ಮೆ ಈಶ, ಈಶ್ವರ ಎಂದೂ ಕರೆಯುತ್ತಾರೆ. ಉಪಾಸನೆಗಳು ಇದರ ಚೌಕಟ್ಟಿನಲ್ಲೇ ಪ್ರಸಕ್ತವಾಗುವುವು. ನಿದರ್ಶನಕ್ಕೆ ಛಾಂದೋಗ್ಯದಲ್ಲಿ 'ತಜ್ಜಲಾನ್' ಎಂದು ಉಪಾಸನೆ ಮಾಡಬೇಕೆಂದು ವಿಧಿ. 'ತಜ್ಜಲಾನ್' ಎಂಬ ಮಾತನ್ನು ಮನನ ಮಾಡುವಾಗ 'ತಜ್ಜ' (ಅದರಿಂದಲೇ ಇವೆಲ್ಲವೂ ಹುಟ್ಟಿಬರುತ್ತವೆ), 'ತಲ್ಲ' (ಅದರಲ್ಲಿಯೇ ಎಲ್ಲವೂ ಮರೆಯಾಗುತ್ತವೆ) ಮತ್ತು 'ತದನ್' (ಅದರಿಂದಲೇ ಎಲ್ಲವೂ ಉಳಿದುಕೊಂಡಿವೆ) ಎಂದು ಭಾಸವಾಗುತ್ತದೆ. ಇದು ಬ್ರಹ್ಮ ನಮಗೆ ನೇರವಾಗಿ ಕಾಣಿಸಿಕೊಳ್ಳುವ ಒಂದು ಬಗೆಯಷ್ಟೆ; ಪರನೆನ್ನುವ ಬ್ರಹ್ಮನಿಗೆ ಇದು ಯಾವುದರ ಸಂಪರ್ಕವೂ ಇರದು, ಅದನ್ನು 'ತಜ್ಜಲಾನ್' ಎಂದು ಉಪಾಸನೆ ಮಾಡುವಂತಿಲ್ಲ. ಅದರ ಅರಿವೆಂದರೆ ಸಾಕ್ಷಾದನುಭವವೇ; ಆ ಅನುಭವವನ್ನು ಯಾವ ಮಾತಿನಿಂದಲೂ ಬಣ್ಣಿಸುವಂತಿಲ್ಲ.

ಉಪಾಸನೆಗಾಗಿ ನಾವು ನಿರ್ಗುಣ, ನಿರ್ವಿಶೇಷ ಪರಬ್ರಹ್ಮನ ಮೇಲೆ ಕೆಲವೊಂದು ವಿವರಗಳನ್ನು ಗುಣಧರ್ಮಗಳಂತೆ ಹೇರಿ (ಅಧ್ಯಾರೋಪ ಮಾಡಿ) ವಿಚಾರ ಮಾಡುವಾಗ, ಈ ಗುಣಧರ್ಮಗಳನ್ನು ಅಪ್ರಸಕ್ತವೆಂದು ತಳ್ಳಿಹಾಕಿ (ಅಪವಾದ ಮಾಡಿ) ನಮ್ಮ ಕಲ್ಪನೆಗಳು ಯಾವುವೂ ಬ್ರಹ್ಮನನ್ನು ಗುರುತಿಸಲಾರವು

ಎಂದು ಮನದಟ್ಟುಮಾಡಿಕೊಳ್ಳುವುದು 'ನೇತಿ ನೇತಿ' (ಇದಲ್ಲ, ಇದಲ್ಲ) ಮಾರ್ಗ. ತೈತ್ತಿರೀಯೋಪನಿಷತ್ತಿನಲ್ಲಿ ಶಿಷ್ಯನು (ಭೃಗು) ಗುರುವಿನ (ಅವನ ತಂದೆಯ) ಬಳಿ ಬಂದು 'ಬ್ರಹ್ಮನನ್ನು ತಿಳಿಸಿಕೊಡು' ಎಂದು ಕೇಳಿದಾಗ, 'ಅನ್ನವನ್ನು ಬ್ರಹ್ಮವೆಂದು ತಿಳಿ' ಎಂದು ಉಪದೇಶ ಸಿಗುತ್ತದೆ. ಹೊರಗಣ ಆಹಾರದಿಂದ, ಭೂತಗಳಿಂದ ಉಂಟಾಗಿ ಅವುಗಳಿಂದಲೇ ಉಳಿದಿರುವ ದೇಹವೇ ಬ್ರಹ್ಮವೆಂದು ಕಾಣು, ಎಂಬುದು ಉಪದೇಶ. ಶಿಷ್ಯನು ಇದನ್ನು ಕುರಿತು ಮನನ ಮಾಡಿದಾಗ ಅವನಿಗೆ ಈ ಉಪದೇಶ ಸರಿಕಾಣುವುದಿಲ್ಲ. ಮತ್ತೆ ಗುರುವಿನ ಬಳಿ ಬಂದಾಗ, ಗುರುವು ಈಗ 'ಪ್ರಾಣವನ್ನು ಬ್ರಹ್ಮವೆಂದು ತಿಳಿ' ಎಂದು ಉಪದೇಶ ಮಾಡಿಕಳಿಸುತ್ತಾನೆ. ದೇಹದೊಳಗಿರುವುದು ಪ್ರಾಣ; ದೇಹಕ್ಕಿಂತ ಸೂಕ್ಷ್ಮವಾದುದು, ದೇಹವನ್ನು ಎತ್ತಿ ನಿಲ್ಲಿಸುವುದು ಪ್ರಾಣ. ದೇಹವನ್ನಾದರೆ ನೋಡಬಹುದು; ಪ್ರಾಣವನ್ನು ನೋಡಲಾಗದು. ಶಿಷ್ಯನು ಇದನ್ನೂ ಮನನ ಮಾಡಿ, ಇದೂ ಸಮರ್ಪಕವಲ್ಲವೆಂದು ನಿಶ್ಚಯಿಸಿ ಮತ್ತೆ ಗುರುವಿನ ಬಳಿ ಬರುತ್ತಾನೆ. ಈಗ ಇನ್ನೊಂದು ಉಪದೇಶ 'ಮನಸ್ಸನ್ನು ಬ್ರಹ್ಮವೆಂದು ತಿಳಿ' ಎಂದು. ಪ್ರಾಣದೊಳಗಿದ್ದು, ಪ್ರಾಣವನ್ನು ಉಳಿಸಿ ನಿಲ್ಲಿಸುವುದು ಮನಸ್ಸು; ಪ್ರಾಣಕ್ಕಿಂತ ಸೂಕ್ಷ್ಮವಾದುದು, ವ್ಯಾಪಕವಾದುದು. ಹೀಗೆಯೇ ಮುಂದೆ ವಿಜ್ಞಾನ (ಎಂದರೆ ಅರಿವು) ಬ್ರಹ್ಮವೆಂಬ ಉಪದೇಶ ಬಂದು, ಆನಂದವೇ ಬ್ರಹ್ಮವೆಂಬ ಉಪದೇಶ ಕಡೆಯದಾಗುತ್ತದೆ.

ಇದು ಪಂಚಕೋಶ ವಿವೇಕವೆನಿಸಿಕೊಳ್ಳುತ್ತದೆ. ಕೋಶವೆಂದರೆ ಒರೆ; ಒಂದನ್ನು ಒಳಗಿರಿಸಿಕೊಂಡಿರುವ ಇನ್ನೊಂದು. ಮೊದಲು ಭೌತಿಕವಾದ ಅನ್ನ, ಅದರೊಳಗೆ ಪ್ರಾಣ, ಪ್ರಾಣದೊಳಗೆ ಮನಸ್ಸು, ಮನಸ್ಸಿನೊಳಗೆ ವಿಜ್ಞಾನ, ವಿಜ್ಞಾನದೊಳಗೆ ಆನಂದ. ಆನಂದ ತನ್ನ ನೆಲೆಯಲ್ಲೇ ಇರುವಂಥದು; ಅದು ಇನ್ನೊಂದಕ್ಕೆ ಪರತಂತ್ರವಲ್ಲ. ಇದೇ ಬ್ರಹ್ಮ. ಆದರೆ ಅದನ್ನು ಅರಿತುಕೊಳ್ಳಲು ಹಂತಹಂತವಾಗಿ, ಕ್ರಮವಿಡಿದು ಅಧ್ಯಾರೋಪ-ಅಪವಾದಗಳನ್ನು ಮಾಡಿಕೊಳ್ಳ ಬೇಕಾಗುತ್ತದೆ. ಅನ್ನವೆನ್ನುವುದು ಮೊದಲ ಅಧ್ಯಾರೋಪ. ಅದು ಬ್ರಹ್ಮವಲ್ಲ ಎಂದು ಅಪವಾದ ಮಾಡಿದ ಮೇಲೆ ಪ್ರಾಣ ಎರಡನೆಯ ಅಧ್ಯಾರೋಪ. ಅದೂ ಬ್ರಹ್ಮವಲ್ಲ ಎಂದು ಅಪವಾದ ಮಾಡಿಕೊಂಡ ಮೇಲೆ ಮನಸ್ಸು ಮೂರನೆಯ ಅಧ್ಯಾರೋಪ. ಹೀಗೆ ಮುಂದೆ ವಿಜ್ಞಾನ, ಕಡೆಗೆ ಆನಂದ. ಅದಾದ ಮೇಲೆ

ಅಧ್ಯಾರೋಪವೂ ಇಲ್ಲ, ಅಪವಾದವೂ ಇಲ್ಲ. ಅನಂತರ ಶಿಷ್ಯನಿಗೆ ಸಂಶಯವುಳಿಯಲಿಲ್ಲ; ಮತ್ತೆ ಉಪದೇಶ ಬೇಕಾಗಲಿಲ್ಲ.

ಇದು ಅಂತಃಪ್ರಾವಣ್ಯದ ನಿದರ್ಶನವೂ ಹೌದು. ಹೊರಗಿನ ವಿವರಗಳಿಂದ ಹೊರಟು ಒಳಗೆ ಒಳಗೆ ಸರಿಯುವ ದಾರಿ; ಕಡೆಗೆ, ಬದುಕಿನ ಕೇಂದ್ರವಾದ ಹೃದಯದೊಳಗಿನ ಆಕಾಶವನ್ನು ಮುಟ್ಟಿ ಅಲ್ಲಿರುವ ಆನಂದವನ್ನು ಕಂಡುಕೊಳ್ಳುವುದರಲ್ಲಿ ಈ ದಾರಿ ಮುಗಿಯುತ್ತದೆ. ಈ ಆಕಾಶವನ್ನು ಪರಮವ್ಯೋಮವೆಂದು ಕರೆದಿದ್ದಾರೆ; ಗುಹೆಯೆಂದೂ ಬಣ್ಣಿಸಿದ್ದಾರೆ. ಆತ್ಮನೆಂದರೆ ಈ ಗುಹೆಯಲ್ಲಿ ಅಡಗಿರುವವನು ('ನಿಹಿತಂ ಗುಹಾಯಾಂ ಪರಮೇವ್ಯೋಮನ್'). ಈ ಆಕಾಶವು ಅವ್ಯಾಕೃತವಾದುದು (ಎಂದರೆ ನಾಮ-ರೂಪದಲ್ಲಿ ವಿಧವಿಧವಾಗಿ ಕಾಣಿಸಿಕೊಳ್ಳುವುದಲ್ಲ) ಎಂದು ಬೃಹದಾರಣ್ಯಕದ ಒಕ್ಕಣೆ. ಇದರಿಂದ ಈ ಐದೂ ಕೋಶಗಳು ಹೊರಹೊಮ್ಮಿರುವುದು. ಈ ಆಕಾಶದಲ್ಲಿ ಆನಂದವಿರದಿದ್ದರೆ ಯಾರು ತಾನೆ ಉಸಿರಾಡುತ್ತಿದ್ದರು, ಯಾರು ತಾನೆ ಅಲುಗಾಡುತ್ತಿದ್ದರು?– ಎಂದು ತೈತ್ತಿರೀಯದ ಪ್ರಶ್ನೆ. ಆನಂದವನ್ನು ರಸವೆಂದೇ ನಿರ್ದೇಶಿಸಿದ್ದಾರೆ; ಬ್ರಹ್ಮನು ರಸವೇ ('ರಸೋ ವೈ ಸಃ'). ಈ ಉಪನಿಷತ್ತು ಆರಂಭವಾಗುವುದು ಬ್ರಹ್ಮನನ್ನು 'ಸತ್ಯಂ ಜ್ಞಾನಂ ಅನಂತಂ' ಎಂದು ಬಣ್ಣಿಸುವುದರಿಂದ. ಸತ್ಯವೆಂದರೆ ಇರವು, ಜ್ಞಾನವೆಂದರೆ ಅರಿವು, ಅನಂತವೆಂದರೆ ದೇಶಕಾಲಗಳನ್ನು ಮೀರಿರುವುದು. ಅನ್ನಮಯ ಮತ್ತು ಪ್ರಾಣಮಯ ಕೋಶಗಳನ್ನು ಸತ್ಯವೆಂದೂ, ಮನೋಮಯ ಮತ್ತು ವಿಜ್ಞಾನಮಯ ಕೋಶಗಳನ್ನು ಜ್ಞಾನವೆಂದೂ, ಆನಂದಮಯ ಕೋಶವನ್ನು ಅನಂತವೆಂದೂ ಮಧ್ವಾಚಾರ್ಯರು ವಿವರಿಸಿದ್ದಾರೆ. ಅನಂತಾಕಾಶವೆಂಬ ವ್ಯವಹಾರವಿಲ್ಲವೆ?

ಇನ್ನೊಂದು ವಿದ್ಯೆ ಛಾಂದೋಗ್ಯದಲ್ಲಿ ಬರುತ್ತದೆ; ಉಪಕೋಸಲ ವಿದ್ಯೆಯೆಂದು ಅದರ ಹೆಸರು. 'ಕಂ ಬ್ರಹ್ಮ ಖಂ ಬ್ರಹ್ಮ' ಎನ್ನುವುದು ಇಲ್ಲಿನ ಉಪದೇಶ. ಕಂ ಎಂದರೆ ಸುಖ; ಖಂ ಎಂದರೆ ಆಕಾಶ. ಸುಖವೆಂದರೆ ಇಂದ್ರಿಯಗಳಿಂದ ಬರುವ ಸೀಮಿತವಾದ, ಕ್ಷಣಿಕವಾದ ಸುಖವಲ್ಲ; ತೈತ್ತಿರೀಯದಲ್ಲಿ ಬರುವ ಆನಂದ. ಅಲ್ಲಿ ಹೇಳುವ ಪರಮವ್ಯೋಮವನ್ನು ಇಲ್ಲಿ ಅನಂತಾಕಾಶ (ಖಂ) ಎಂದು ಕರೆದಿದ್ದಾರೆ; ಇದು ನಮಗೆ ಪರಿಚಿತವಾದ ಭೂತಾಕಾಶವಲ್ಲ. ಪರಮವ್ಯೋಮದ ಆನಂದವೇ ಬ್ರಹ್ಮವೆಂದು ತಾತ್ಪರ್ಯ. ಇದು ನಮ್ಮ ಆತ್ಮವೇ ಎಂಬುದು ಇದೇ ಉಪನಿಷತ್ತಿನಲ್ಲಿ

ಬರುವ 'ಕೋ ನು ಆತ್ಮಾ ಕಿಂ ಬ್ರಹ್ಮ?' ('ನಮ್ಮಗಳ ಆತ್ಮ ಯಾರು? ಬ್ರಹ್ಮ ಯಾವುದು?') ಎಂಬ ಪ್ರಶ್ನೆಯಿಂದ ಸ್ಪಷ್ಟವಾಗುತ್ತದೆ.

ಹೀಗೆ ಉಪನಿಷತ್ತಿನಲ್ಲಿ ಉಪಾಸನೆಗಳು ಅಡಕವಾಗಿವೆ. ಉಪಾಸನೆಗಳನ್ನು ಸತ್ಯವತೀ, ಅಂಗವತೀ, ಅನ್ಯವತೀ, ನಿದಾನವತೀ ಎಂದು ನಾಲ್ಕು ತೆರನಾಗಿ ವಿಭಾಗ ಮಾಡುವುದುಂಟು. ಸತ್ಯವತಿಯೆಂದರೆ ದೃಷ್ಟಿ (ಯಾವುದನ್ನು ಕುರಿತು ಉಪಾಸನೆ ಮಾಡತೊಡಗುವೆವೋ ಅದು) ಮತ್ತು ಬುದ್ಧಿ (ಅದು ಏನೆಂದು ಭಾವಿಸಿಕೊಂಡು ಉಪಾಸನೆ ಮಾಡುವೆವೋ ಅದು) ಎರಡರಲ್ಲಿ ಸಾಮಾನಾಧಿ ಕರಣ್ಯವಿರುವುದು; ಎಂದರೆ ದೃಷ್ಟಿ ಎಲ್ಲಿದೆಯೋ ಅಲ್ಲಿಯೇ ಬುದ್ಧಿಯೂ ಇರುವುದು. ಈಶಾವಾಸ್ಯೋಪನಿಷತ್ತಿನಲ್ಲಿ ಬರುವ ಉಪಾಸನೆ ಈ ಬಗೆಯದು. ಬ್ರಹ್ಮವನ್ನು ಈಶನೆಂದು ಭಾವಿಸಿ ಈ ಜಗತ್ತೆಲ್ಲವೂ ಅವನಿಂದ ವ್ಯಾಪ್ತವಾಗಿದೆಯೆಂದು ಉಪಾಸಿಸುವುದು, 'ಸರ್ವಂ ಖಲ್ವಿದಂ ಬ್ರಹ್ಮ', ಮುಂತಾದ ಉಪಾಸನೆಗಳು. ಪ್ರತರ್ದನ ವಿದ್ಯೆಯಲ್ಲಿ ಇಂದ್ರನು ಪ್ರತರ್ದನನಿಗೆ "ನನ್ನನ್ನೆ ಉಪಾಸಿಸು" ಎಂದು ಉಪದೇಶ ಮಾಡಿದಾಗ ಇಂದ್ರನು ದೃಷ್ಟಿ; ಇಂದ್ರನಲ್ಲಿ ವ್ಯಾಪ್ತವಾದ ಬ್ರಹ್ಮ (ಪರಮಾತ್ಮ) ಬುದ್ಧಿ. ಭಗವದ್ಗೀತೆಯಲ್ಲಿ ಹೇಳಿರುವ ಬುದ್ಧಿಯೋಗ ಇದೇ.

ಅಂಗವತೀ ಉಪಾಸನೆಯಲ್ಲಿ ದೃಷ್ಟಿಯು ಅಂಗದ (ಯಾವುದಾದರೊಂದು ವಿವರದ) ಮೇಲಿರುತ್ತದೆ. ಬುದ್ಧಿಯು ಅಂಗಿಯ (ಅಂಗವನ್ನುಳ್ಳದ್ದು) ಮೇಲಿರುತ್ತದೆ. ವೈಶ್ವಾನರ ವಿದ್ಯೆಯಲ್ಲಿ ವೈಶ್ವಾನರನು ಅಂಗಿಯೆಂಬ ಭಾವನೆ; ಅವನ ಅಂಗಗಳಾಗಿ ದ್ಯು(ಎಂದರೆ ಮೇಲಿನ ಲೋಕ), ಆದಿತ್ಯ, ವಾಯು, ಆಕಾಶ, ಆಪ (ನೀರು), ಪೃಥ್ವೀ ಇವುಗಳನ್ನು ಭಾವಿಸಿಕೊಳ್ಳಬೇಕು. ಇಲ್ಲಿ ದೃಷ್ಟಿಯು ಅಪೂರ್ಣವಾದದ್ದು (ಅಕೃತ್ಸ್ನ); ಬುದ್ಧಿಯು ಪೂರ್ಣವಾದದ್ದು. ಪ್ರಾಣೋಪಾಸನೆಯಲ್ಲಿ ಪ್ರಾಣದ ಕಡೆ ದೃಷ್ಟಿ; ಪ್ರಾಣವು ಬ್ರಹ್ಮನ ಒಂದು ಕಲೆ (ಅಂಶ, ಮನಸ್ಸು, ವಾಕ್ ಇದ್ದಂತೆ) ಎಂದು ಬುದ್ಧಿ. ಮಗುವು ತಂದೆಯ ಕೈಹಿಡಿದು ಹೋಗುವಾಗ, ಕೈಯ ಒಂದು ಬೆರಳನ್ನು ಮಾತ್ರ ಹಿಡಿದಿರುವಂತೆ; ಮೈಸೂರಿಗೆ ವೆಂಕ ಹೋದ ಎಂದರೆ, ದಿಟವಾಗಿ ಅವನು ಹೋದದ್ದು ಮೈಸೂರಿನ ಯಾವುದೋ ಒಂದು ಪ್ರದೇಶಕ್ಕೆ ಮಾತ್ರ. ಹೀಗೆಯೇ ಇಂದ್ರ, ವಾಯು, ಅಗ್ನಿ, ವರುಣ ಇವರೆಲ್ಲರ ಉಪಾಸನೆಯಲ್ಲಿ ಒಬ್ಬೊಬ್ಬನೂ ಬ್ರಹ್ಮನ ಒಂದು ಅಂಗವೆಂಬ ದೃಷ್ಟಿಯಿರುತ್ತದೆ; ಅದೇ ಬ್ರಹ್ಮವೆಂಬುದು ಬುದ್ಧಿ.

ಇವೆರಡೂ ಉಪಾಸನಾ ಬಗೆಗಳು ಉಪನಿಷತ್ತುಗಳಲ್ಲಿ ಬರುತ್ತವೆ. ಉಳಿದೆರಡು ಅಷ್ಟಾಗಿ ಬರುವುದಿಲ್ಲ. ಅನ್ಯವತೀ ಉಪಾಸನೆಯಲ್ಲಿ ದೃಷ್ಟಿ ಒಂದರ ಮೇಲೆ, ಬುದ್ಧಿ ಇನ್ನೊಂದರ ಮೇಲೆ. ಶಾಲಗ್ರಾಮವನ್ನು ವಿಷ್ಣುವೆಂದು ಉಪಾಸನೆ ಮಾಡುವಾಗ ದೃಷ್ಟಿಯಿರುವುದು ಕಲ್ಲಿನ ಮೇಲೆ; ಆದರೆ ಬುದ್ಧಿಯು ಅದನ್ನು ಕಲ್ಲೆಂದು ಕಾಣುವುದಿಲ್ಲ; ಅದರಲ್ಲಿ ವಿಷ್ಣುವಿನ ಸಾನ್ನಿಧ್ಯವನ್ನೇ ಬುದ್ಧಿ ಕಂಡುಕೊಳ್ಳುವುದು. ಮೂರ್ತಿಪೂಜೆಯ ನೆಲೆ ಇದೇ. ನಿದಾನವತೀ ಉಪಾಸನೆಯು ಬ್ರಾಹ್ಮಣ ಮತ್ತು ಆರಣ್ಯಕ ಗ್ರಂಥಗಳಲ್ಲಿ ಕಾಣಸಿಗುತ್ತದೆ. ನಿದಾನವೆಂದರೆ ಸಂಕೇತ; ಯಾವುದಾದರೊಂದು ವಿವರವನ್ನು ನೆನಪಿಗೆ ತಂದುಕೊಡಲು ಸಂಕೇತವನ್ನು ಅವಲಂಬಿಸುವುದು. ಶತಪಥ ಬ್ರಾಹ್ಮಣದಲ್ಲಿ (ಬೃಹದಾರಣ್ಯಕದಲ್ಲಿ) ಬರುವ ಅಶ್ವಮೇಧಯಾಗವೆಂದರೆ ಮುಂಜಾನೆಯೇ ಕುದುರೆಯ ತಲೆ, ಸೂರ್ಯನೇ ಅದರ ಕಣ್ಣುಗಳು, ವಾಯುವೇ ಅದರ ಉಸಿರು, ಅಗ್ನಿ-ವೈಶ್ವಾನರನೇ ಅದರ ಬಾಯಿ, ಆಕಾಶವು ಅದರ ಬೆನ್ನು, ಅಂತರಿಕ್ಷವು ಹೊಟ್ಟೆ, ಪೃಥ್ವಿಯು ಹೊಟ್ಟೆಯ ಕೆಳಭಾಗ ಇತ್ಯಾದಿ. ಇಲ್ಲಿ ಯಾಗಕ್ಕೆಂದು ತಂದ ಕುದುರೆ ನಾಲ್ಕು ಕಾಲಿನ ಪ್ರಾಣಿಯಲ್ಲ; ಇಡೀ ವಿಶ್ವಕ್ಕೇ ಕುದುರೆಯ ಸಂಕೇತ, ಕುದುರೆಯಿಂದ ಸಂಕೇತರೂಪದ ಸಂಬಂಧವನ್ನು ಉಂಟುಮಾಡಿ, ಯಾವುದನ್ನು ದಿಟವಾಗಿ ನೆನಪಿಗೆ ತಂದುಕೊಳ್ಳಬೇಕೋ ಆ ವಿಶ್ವರೂಪವನ್ನು ಕಲ್ಪಿಸಿಕೊಳ್ಳುವುದು.

ಬಾವುಟವನ್ನು ವಿಜಯದ ಸಂಕೇತ ಎನ್ನುವಾಗ, ದಂಡವನ್ನು ನ್ಯಾಯದ ಸಂಕೇತ ಎನ್ನುವಾಗ, ಕಮಲವನ್ನು ಪೃಥ್ವಿ ಎನ್ನುವಾಗ, ಮುಖ ನಾಚಿಕೆಯಿಂದ ಕಪ್ಪಿಟ್ಟಿತು ಎಂದೋ ಸಿಟ್ಟಿನಿಂದ ಕಣ್ಣು ಕೆಂಪಾಯಿತು ಎಂದೋ ಹೇಳುವಾಗ, ಬಿಳಿಯೆಂದರೆ ಶುದ್ಧ, ಕಪ್ಪೆಂದರೆ ಕೆಟ್ಟತನ, ಕೆಂಪೆಂದರೆ ಕ್ರೌರ್ಯ, ಎಂದೆಲ್ಲ ಬಣ್ಣಿಸುವಾಗ ಅವೆಲ್ಲ ನಿದಾನಗಳೇ. ಉಪಾಸನೆಯಲ್ಲಿ ಪ್ರತಿರೂಪ ಪ್ರತಿಮೆಗಳನ್ನು ಬಳಸುವುದೂ ಇದೆ. ಚಿತ್ರ, ಶಿಲ್ಪಗಳಲ್ಲಿ ಕಂಡರಿಸುವ ಪ್ರತಿಮೆಗಳು ಉಪಾಸ್ಯವಾದುದನ್ನು ಸಂಕೇತ ಪ್ರಮುಖವಾಗಿ ಒಳಗೊಳ್ಳುತ್ತವೆ. ಎದುರಿಗೆ ಕಾಣುವ ವಸ್ತು ಪ್ರತ್ಯಕ್ಷ ಪ್ರತ್ಯಯ; ಅದರ ಆಧಾರದ ಮೇಲೆ ಎದುರಿಗಿಲ್ಲದ, ಸಾಮಾನ್ಯವಾಗಿ ಇಂದ್ರಿಯಗಳಿಗೆ ಗೋಚರವಾಗದ ವಸ್ತುವನ್ನು ಭಾವಿಸಿಕೊಳ್ಳುವುದು ಪರೋಕ್ಷಪ್ರತ್ಯಯ. ಸಾಕಾರ ಪ್ರತಿಮೆಗಳನ್ನವಲಂಬಿಸಿ ನಿರಾಕಾರನಾದ ಈಶ್ವರನನ್ನು ಕಲ್ಪಿಸಿಕೊಳ್ಳುವುದೊಂದು ನಿದರ್ಶನ. ನಿರಾಕಾರ ವಸ್ತುವನ್ನೇ ಭಾವನೆಗಳಿಂದ ಉಪಾಸನೆ ಮಾಡುವುದು

ಇನ್ನೊಂದು ಬಗೆ. ಮೇಲೆ ಹೇಳಿದಂತೆ ಉಪನಿಷತ್ತಿನಲ್ಲಿ 'ತಜ್ಜಲಾನ್' ಎಂದು ಬ್ರಹ್ಮವನ್ನು ಉಪಾಸಿಸಬೇಕು ಎಂದಿರುವುದು ಭಾವ ಪ್ರತಿಮೆ; ನಿರಾಕಾರವಾದುದನ್ನು ಭಾವನಾಮಯವಾಗಿಯೇ ಗುರುತಿಸಿಕೊಳ್ಳುವುದು.

ಇಂಥ ಉಪಾಸನೆಗೆ ಆಲಂಬನೆಗಳಾಗಿ ಬಳಸುವ ಉಪದೇಶಗಳೇ ಉಪನಿಷತ್ತೆಂಬ ಮಾತಿಗೆ ದಿಟವಾದ ಅರ್ಥ ಎಂದು ಹೇಳುವುದೂ ಇದೆ. ಇವೆಲ್ಲ ರಹಸ್ಯೋಪದೇಶಗಳು. ಕೇನೋಪನಿಷತ್ತಿನಲ್ಲಿ ಬರುವ 'ತದ್ವನಂ', ಬೃಹದಾರಣ್ಯಕದಲ್ಲಿ ಬರುವ 'ನೇತಿ', ಛಾಂದೋಗ್ಯದಲ್ಲಿ ಬರುವ 'ತಜ್ಜಲಾನ್' ಇವೆಲ್ಲ ಉದಾಹರಣೆಗಳು. ಈ ರಹಸ್ಯೋಪದೇಶಗಳನ್ನು ಶ್ರದ್ಧೆಯಿಂದ ಮನನ ಮಾಡಿದಾಗ ಅದು ವಿದ್ಯೆಯೆನಿಸಿಕೊಳ್ಳುತ್ತದೆ; ಅದರಿಂದ ಅಧ್ಯಾತ್ಮದ ಬಲ ಹೆಚ್ಚುವುದೆಂದು ಛಾಂದೋಗ್ಯದ ಮಾತೊಂದಿದೆ. ('ಯದೇವ ಹಿ ವಿದ್ಯಯಾಕರೋತಿ, ಶ್ರದ್ಧಯೋಪನಿಷದಾ, ತದೇವ ವೀರ್ಯವತ್ತರಂ ಭವತಿ').

೧೧

ಕಠೋಪನಿಷತ್ತಿನಲ್ಲಿ ರೂಪಕವೊಂದು ಬರುತ್ತದೆ. 'ನಿನ್ನನ್ನು ರಥಿ (ಎಂದರೆ ರಥವುಳ್ಳವನು) ಎಂದು ತಿಳಿದುಕೋ. ಶರೀರವೇ ರಥ; ಬುದ್ಧಿಯು ಸಾರಥಿ; ಮನಸ್ಸು ಅದು ಹಿಡಿದಿರುವ ಹಗ್ಗ; ಇಂದ್ರಿಯ ಮನಸ್ಸುಗಳಿಂದ ಕೂಡಿದವನು ಭೋಕ್ತೃ (ವಿಷಯಗಳನ್ನು ಅನುಭವಿಸುವವನು) ಎನಿಸಿಕೊಳ್ಳುತ್ತಾನೆ.' ಸಾರಥಿಯು ಎಚ್ಚರ ತಪ್ಪಿ ಹಗ್ಗವನ್ನು ಸಡಿಲಮಾಡಿದರೆ ಕುದುರೆಗಳು ದಾರಿ ಬಿಟ್ಟು ಹಳ್ಳಕ್ಕೆ ಹಾರುತ್ತವೆ. ಸಾರಥಿಯು ಎಚ್ಚರದಿಂದಿದ್ದರೆ ಕುದುರೆಗಳು ಸರಿಯಾಗಿ ಓಡುತ್ತವೆ. ಈ ರೂಪಕದಿಂದ ಸ್ಪಷ್ಟವಾಗುವುದು ಇಂದ್ರಿಯನಿಗ್ರಹದ ಅಗತ್ಯ; ಮನಸ್ಸನ್ನು ಬಿಗಿಹಿಡಿಯಬೇಕಾದ ಕಾರಣ. ಉಪಾಸನೆಗೆ ಇದರ ಅನ್ವಯವಿದೆಯೆಂದು ಬೇರೆ ಹೇಳಬೇಕೆ?

ಮುಂಡಕೋಪನಿಷತ್ತಿನಲ್ಲಿ ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ರೂಪಕವಿದೆ. 'ಉಪನಿಷತ್ತೆನ್ನುವುದು ದೊಡ್ಡದೊಂದು ಬಿಲ್ಲು. ನಿನ್ನ ಆತ್ಮವೇ ಅದಕ್ಕೆ ಹೂಡುವ ಬಾಣ. ಬ್ರಹ್ಮವು ಬಾಣ ಮುಟ್ಟಬೇಕಾದ ಗುರಿ. ಇಂದ್ರಿಯಗಳನ್ನೂ ಮನಸ್ಸನ್ನೂ ಬಿಗಿಹಿಡಿದು ಎಚ್ಚರದಿಂದಿರುವಾಗ (ಅಪ್ರಮತ್ತನಾಗಿರುವಾಗ) ಬಿಲ್ಲಿಗೆ ಬಾಣವನ್ನು

ಹೂಡಿ ಹೊಡೆಯಬೇಕು; ಉಪಾಸನೆಯಿಂದ ಬಾಣವನ್ನು ಚೂಪುಮಾಡಿಕೋ. ಬಾಣ ಗುರಿಯನ್ನು ಮುಟ್ಟಿ ಅಲ್ಲಿಯೇ ನೆಲೆಯಾಗಿ ನಿಲ್ಲುವಂತೆ ನಿನ್ನ ಆತ್ಮವೂ ಬ್ರಹ್ಮದಲ್ಲಿ ಬೆರೆತುಹೋಗಬೇಕು'. ಇಲ್ಲಿ ಬಿಲ್ಲೆಂದು ಕಾಣಿಸಿರುವ ಉಪನಿಷತ್ತು ಮೇಲೆ ಸೂಚಿಸಿದ ರಹಸ್ಯೋಪದೇಶವೆಂಬ ಅರ್ಥದಲ್ಲಿ ಬಂದಿದೆ. ಉಪನಿಷತ್ತೆಂಬ ರಹಸ್ಯೋಪದೇಶವನ್ನು ಪ್ರತೀಕಭಾವನೆಯಲ್ಲಿ ಪ್ರಣವ(ಓಂಕಾರ)ವೆಂದೂ ಇಲ್ಲಿ ಕರೆಯಲಾಗಿದೆ. ಛಾಂದೋಗ್ಯವು ಇದನ್ನು ಉದ್ಗೀಥವೆಂದು ನಿರ್ದೇಶಿಸಿ ಅದರ ಉಪಾಸನೆಯನ್ನೇ ವಿವರಿಸುತ್ತದೆ. ಎಂದರೆ ಓಂಕಾರವೇ ಬ್ರಹ್ಮವೆಂದು ತಾತ್ಪರ್ಯ.

ಓಂಕಾರಕ್ಕೆ ಪ್ರಶ್ನೋಪನಿಷತ್ತಿನ ಪ್ರಕಾರ ಮೂರು ಮಾತ್ರೆಗಳಂತೆ— ಅಕಾರ, ಉಕಾರ, ಮಕಾರಗಳೆಂದು. ಈ ಮೂರು ಮಾತ್ರೆಗಳನ್ನು ಸತ್ತ್ವ-ರಜಸ್ಸು-ತಮಸ್ಸುಗಳೆಂಬ ಮೂರು ಗುಣಗಳು, ಜಗತ್ಪಾಲಕನಾದ ವಿಷ್ಣು, ಜಗತ್ಸಂಹಾರಕಾರಕನಾದ ಶಿವ, ಜಗತ್‌ಸ್ರಷ್ಟೃವಾದ ಬ್ರಹ್ಮ ಎಂಬ ಮೂರು ದೇವತೆಗಳು, ಭೂಃ-ಭುವಃ-ಸುವಃ ಎಂಬ ಮೂರು ಅಗ್ನಿಗಳು, ವ್ಯಕ್ತ-ಅವ್ಯಕ್ತ-ಚಿಚ್ಛಕ್ತಿ ಎಂಬ ಮೂರು ಅವಸ್ಥೆಗಳು ಎಂದೆಲ್ಲ ಸಮೀಕರಣ ಮಾಡುವುದುಂಟು. ಮಾಂಡೂಕ್ಯೋಪ ನಿಷತ್ತಿನಲ್ಲಿ ಜಾಗ್ರತ್ (ಎಚ್ಚರ), ಸ್ವಪ್ನ (ಕನಸು), ಸುಷುಪ್ತಿ (ತನಿನಿದ್ರೆ) ಎಂಬ ಅವಸ್ಥಾತ್ರಯವನ್ನು ಓಂಕಾರದ ಮೂರು ಮಾತ್ರೆಗಳಿಗೆ ಹೊಂದಿಸಿ ಕಡೆಯದಾದ, ಇವು ಮೂರನ್ನೂ ಮೀರಿದ, ಅರ್ಧಮಾತ್ರೆಯನ್ನು ತುರೀಯವೆಂದು ಕಾಣಿಸಲಾಗಿದೆ. ತುರೀಯವನ್ನು ವಿಷ್ಣುವಿನ ಪರಮಪದವೆಂದೂ ನಿರ್ದೇಶಿಸುವುದುಂಟು. ವೈಶ್ವಾನರ, ತೇಜಸ, ಪ್ರಾಜ್ಞಎಂಬುವು ಮೊದಲ ಮೂರು ವಿವರಗಳಾದರೆ ಬ್ರಹ್ಮ(ಅಥವಾ ಆತ್ಮ)ನೆಂಬುದೇ ತುರೀಯ. ತ್ರಿಗುಣಾತೀತನಾಗಿ, ಲೋಕತ್ರಯಾತೀತನಾಗಿ, ದೇವತಾತ್ರಯವನ್ನು ಮೀರಿ ಬ್ರಹ್ಮವಿದೆಯೆಂದೂ, ಮೂರು ವಿವರಗಳಲ್ಲಿ ವ್ಯಾಪಕವಾಗಿದೆಯೆಂದೂ ಇಲ್ಲಿನ ಒಕ್ಕಣೆ.

ಕಠ, ತೈತ್ತಿರೀಯ, ಛಾಂದೋಗ್ಯ, ಪ್ರಶ್ನ, ಮುಂಡಕ ಉಪನಿಷತ್ತುಗಳಲ್ಲಿ ಓಂಕಾರವೇ ಬ್ರಹ್ಮವೆಂದೂ, ಓಂಕಾರವೇ ಇವೆಲ್ಲವೂ ಎಂದೂ ನಿರ್ದೇಶನವಿದೆ. ಪ್ರಶ್ನೋಪನಿಷತ್ತಿನಲ್ಲಿ ಪಿಪ್ಪಲಾದರು ಶೈಬ್ಯ-ಸತ್ಯಕಾಮನಿಗೆ ಓಂಕಾರದಲ್ಲೂ ಪರ, ಅಪರ ಎಂಬ ವಿಭಾಗವಿರುವುದನ್ನು ಹೇಳುತ್ತಾರೆ. ಪರವೆಂಬ ಓಂಕಾರವೇ ಬ್ರಹ್ಮ; ಅರ್ಧ ಮಾತ್ರೆ. ಉಳಿದ ಮೂರು ಮಾತ್ರೆಗಳು (ಅ,ಉ,ಮ) ಸೇರಿ ಅಪರ ಬ್ರಹ್ಮ

(ತೈತ್ತಿರೀಯ ಹೇಳುವ 'ಇದಂ ಸರ್ವಂ'). ಓಂಕಾರವನ್ನ ಉಪಾಸನೆಗೆ ಹೇಳಿರುವುದೂ ಉಂಟು; ಮುಂಡಕದಲ್ಲಿರುವಂತೆ ('ಪ್ರಣವವೇ ಬಿಲ್ಲು, ಆತ್ಮವೇ ಬಾಣ, ಬ್ರಹ್ಮ ಗುರಿ' ಇತ್ಯಾದಿ). ಶ್ವೇತಾಶ್ವತರದಲ್ಲಿ ಅರಣಿಗಳಿಂದ ಬೆಂಕಿಯನ್ನುಂಟುಮಾಡುವ ರೂಪಕವನ್ನು ಕಾಣುತ್ತೇವೆ. ಯಜ್ಞಯಾಗಾದಿ ಸಂದರ್ಭದಲ್ಲಿ ಒಣಗಿದ ಎರಡು ಅರಣಿ ಕಡ್ಡಿಗಳನ್ನು ಮಸೆದು ಮಂತ್ರಪೂತವಾದ ಅಗ್ನಿಯನ್ನು ಹೊತ್ತಿಸುತ್ತಿದ್ದರು. ಮಸೆಯುವಾಗ ಕೆಳಗಿರುವ ಕಡ್ಡಿ ಅಧರಾರಣಿ; ಅದು ಇದ್ದಲ್ಲೇ ಇರುತ್ತದೆ; ಮೇಲೆ ಅದನ್ನುಜ್ಜುವ ಕಡ್ಡಿ ಉತ್ತರಾರಣಿ. ಶ್ವೇತಾಶ್ವತರದಲ್ಲಿರುವ ಒಕ್ಕಣಿ ಹೀಗಿದೆ. 'ದೇಹವೇ ಅಧರಾರಣಿ; ಓಂಕಾರವು ಉತ್ತರಾರಣಿ. ಮಸೆಯುವ ಕೆಲಸವೇ ಧ್ಯಾನ. ಅಡಗಿರುವ ಬೆಂಕಿ ಹೊರಗೆ ಕಾಣಿಸಿಕೊಳ್ಳುವುದೇ ದೇವದರ್ಶನ (ಎಂದರೆ ಬ್ರಹ್ಮಾನುಭವ). ಓಂಕಾರವನ್ನು ಉಪಾಸನೆಗೆ ಅಳವಡಿಸಿಕೊಳ್ಳುವ ಕ್ರಮ ಇದು. ಛಾಂದೋಗ್ಯವೂ 'ಓಂ ಎನ್ನುವ ಅಕ್ಷರವನ್ನು ಉದ್ಗೀಥದಂತೆ ಉಪಾಸನೆ ಮಾಡಬೇಕು' ('ಓಮಿತ್ಯೇವಮಕ್ಷರಮುದ್ಗೀಥಮುಪಾಸೀತ') ಎಂದು ಸೂಚಿಸಿದೆ. 'ಓಂ' ಎಂದೇ ಆತ್ಮನನ್ನು ಧ್ಯಾನಮಾಡಬೇಕು' ('ಓಮಿತ್ಯೇವಂ ಧ್ಯಾಯಥ ಆತ್ಮಾನಂ') ಎನ್ನುವ ಮಾತೂ ಮತ್ತೆ ಮತ್ತೆ ಉಪನಿಷತ್ತುಗಳಲ್ಲಿ ಬರುತ್ತದೆ.

ಛಾಂದೋಗ್ಯವು ಹೇಳುವ ಪ್ರಣವೋಪಾಸನೆಯಲ್ಲಿ ವಿಚಾರಣೆಗೆ ಆಗತ್ಯವಾದ ವಾಕ್ ಮತ್ತು ಅದರಲ್ಲಡಗಿರುವ ಪ್ರಾಣ ಎರಡರ ಸಮ್ಮೇಳವೇ ಓಂಕಾರವೆಂದು ಗಮಕ. ಪ್ರಾಣವು ವಾಕ್ಕಿನ ಜೊತೆ ಸೇರಿದಾಗ ಪ್ರಣವವಾಗುತ್ತದೆ. ಪ್ರಣವವೆಂಬ ಮಾತಿಗೆ ಯಾವುದರತ್ತ ಮನಸ್ಸು ಚೆನ್ನಾಗಿ ಬಾಗುವುದೋ ಅದು ಎಂಬರ್ಥವೂ, ಚೆನ್ನಾಗಿ ಸ್ತುತಿಸುವುದು ಎಂಬರ್ಥವೂ ಇವೆ. ಮೈತ್ರಾಯಣೀಯದಲ್ಲಿ ಪ್ರಣವವು ಸೋಪಾಧಿಕವಾದಾಗ (ಎಂದರೆ ವಾಕ್ಕಿನೊಡನೆ ಪ್ರಾಣದೊಡನೆ ಕೂಡಿಕೊಂಡಾಗ) ಶಬ್ದ ಬ್ರಹ್ಮವೆನಿಸಿಕೊಳ್ಳುವುದೆಂದೂ, ಅದೇ ನಿರುಪಾಧಿಕವಾದಾಗ (ವಾಕ್ಕಾಗಲಿ ಪ್ರಾಣವಾಗಲಿ ಸೇರಿಬರದಾಗ) ಪರಬ್ರಹ್ಮವೆಂದೂ ಒಕ್ಕಣೆಯಿದೆ. ಮಾಂಡೂಕ್ಯವು ಮೊದಲನೆಯದನ್ನು ಅಧಿಮಾತ್ರ (ಎಂದರೆ ಅ, ಉ, ಮ ಎಂಬ ಮೂರು ಮಾತ್ರೆಗಳೊಂದಿಗೆ ಇರುವುದು) ಎಂದೂ, ಎರಡನೆಯದನ್ನು ಅಮಾತ್ರ (ಹಾಗೆ ಮಾತ್ರೆಗಳ ನಂಟು ಇಲ್ಲದಿರುವುದು) ಎಂದೂ ಕರೆಯುತ್ತದೆ. ಪ್ರಜಾಪತಿಯು ಎಲ್ಲ

ಲೋಕಗಳ ಸಾರವನ್ನೂ ಒಮ್ಮೆಲೆ ಗ್ರಹಿಸಲೆಂದು ತಪಸ್ಸು ಮಾಡಿದನಂತೆ. ಧ್ಯಾನರೂಪವಾದ ತಪಸ್ಸು ಇದು. ತಪಸ್ಸಿನ ಫಲವಾಗಿ ಮೂರು ವ್ಯಾಹೃತಿಗಳು (ಎಂದರೆ ಸ್ಪಷ್ಟವಾದ, ಸರ್ವಸಂಗ್ರಹವಾದ ಶಬ್ದಗಳು) ಕಾಣಿಸಿಕೊಂಡುವಂತೆ— ಭೂಃ, ಭುವಃ, ಸ್ವಃ ಎಂಬುವು. ಮೂರು ಲೋಕಗಳು (ಮೇಲಿನ ಲೋಕ, ನಡುವಣ ಲೋಕ, ಕೆಳಗಿನ ಲೋಕ) ಮತ್ತೆ ವಿಮರ್ಶೆಗೊಳಗಾದಾಗ ಓಂಕಾರವೆಂಬ ಸಂಗ್ರಹಾಕ್ಷರವಾಯಿತಂತೆ. ಇದು ಛಾಂದೋಗ್ಯದಲ್ಲಿ ಬರುವ ಒಕ್ಕಣೆ. ಭೂಃ, ಭುವಃ, ಸ್ವಃ ಎಂಬ ಮೂರು ವ್ಯಾಹೃತಿಗಳಿಂದಲೇ ಮೂರು ಲೋಕಗಳೂ, ಮೂರು ವೇದಗಳೂ ಹೊರಹೊಮ್ಮಿದವು; ಮೂರು ಲೋಕಗಳ ಸಾರವಾಗಿ, ಮೂರು ವೇದಗಳನ್ನೊಳಗೊಂಡಂತೆ ಓಂಕಾರವು ಸಿದ್ಧವಾಯಿತು. ಇದು ದಿಟವಾದ ಅರ್ಥದಲ್ಲಿ ಅಕ್ಷರ (ನಾಶವಾಗುವುದಿಲ್ಲ); ಉಳಿದದ್ದೆಲ್ಲ ಮರಣಧರ್ಮವಾದರೆ ಇದು ಅಮೃತ (ಸಾಯದಿರುವುದು); ಆ ಕಾರಣದಿಂದಲೆ ಅಭಯ (ಯಾವ ಭಯವೂ ಇಲ್ಲದ್ದು).

ಅಭಯವೆನ್ನುವ ಸಂದರ್ಭದಲ್ಲಿ ಛಾಂದೋಗ್ಯದಲ್ಲಿ ಬರುವ ಒಂದು ಆಖ್ಯಾಯಿಕೆ ಸ್ವಾರಸ್ಯವಾಗಿದೆ. ದೇವತೆಗಳಿಗೆ ಮೃತ್ಯುವಿನ ಭಯವಾಯಿತಂತೆ; ದೇವತೆಗಳಿಗೂ ಸಾವು ಬಂದೊದಗಬಹುದು, ಅವರ ಸಾಮರ್ಥ್ಯ ಮರೆಯಾಗಬಹುದು, ಸಂಪತ್ತು ಹೋಗಿಬಿಡಬಹುದು ಎಂಬುದು ಭಯ. ಭಯದಿಂದ ಅವರು ಮೂರು ವೇದಗಳಲ್ಲಿ ಮರೆಮಾಡಿಕೊಂಡರಂತೆ. ಮೂರು ವೇದಗಳಿಗೆ ಛಂದವೆಂಬ ಹೆಸರಿದೆ; ಛಂದವೆಂದರೆ ಮರೆಮಾಡುವುದು (ಛಾದನ) ಎಂದರ್ಥ. ವೇದೋಕ್ತವಾದ ಕರ್ಮಕಾಂಡದಲ್ಲಿ ತೊಡಗಿದರು ಎಂದು ತಾತ್ಪರ್ಯ. ಆದರೆ ನೀರಿನಲ್ಲಿ ಮೀನುಗಳು ಕಾಣುವಂತೆ, ಮೃತ್ಯುವಿಗೆ ದೇವತೆಗಳನ್ನು ಕಂಡುಕೊಳ್ಳಲು ಕಷ್ಟವಾಗಲಿಲ್ಲ. ದೇವತೆಗಳು ಮೃತ್ಯುವಿನ ಕೈಗೆ ಸಿಗಬಾರದೆಂದು ಈ ಮೂರು ವೇದಗಳ ಸ್ವರಗಳಲ್ಲಿ ಮರೆಯಾದರು; ಎಂದರೆ ಕರ್ಮಕಾಂಡದ ನಿರರ್ಥಕತೆಯನ್ನು ಕಂಡುಕೊಂಡು ಜಪಗಳಲ್ಲಿ ತೊಡಗಿದರು. ಹಾಗಾದರೂ ಮೃತ್ಯುವಿನಿಂದ ಪಾರಾಗಬಹುದೆಂದು. ಅದೂ ಸಾಧ್ಯವಾಗದೆ ಓಂಕಾರೋಪಾಸನೆಯಲ್ಲಿ ಸೇರಿಕೊಂಡರು. ಆಗ ಮೃತ್ಯು ಅವರನ್ನು ಮುಟ್ಟಲಾಗಲಿಲ್ಲ. ಹೀಗೆ ಅವರು ಭಯದಿಂದ ಪಾರಾದರು. ಓಂಕಾರವು ಅಭಯವೆನ್ನುವುದು ಈ ಕಾರಣದಿಂದ.

೧೨

ಕರ್ಮಕಾಂಡದಲ್ಲಿ ಯಜ್ಞಯಾಗಾದಿಗಳನ್ನು ಮಾಡಿದುದರ ಫಲವಾಗಿ, ಮಾಡುವವರು ಬಯಸಿದ ಮತ್ತು ಅವರೆಗೆ ಇಲ್ಲದಿದ್ದ ಪ್ರಯೋಜನವೊಂದು ಕೈಗೂಡುವುದೆಂಬ ನಂಬಿಕೆ. ಸ್ವರ್ಗವೋ, ಯಶಸ್ಸೋ, ಅನ್ನಸಮೃದ್ಧಿಯೋ, ಕೀರ್ತಿಯೋ, ಪಶುಸಂಪತ್ತೋ, ಮತ್ತಾವುದೋ 'ಅಪೂರ್ವ' (ಹಿಂದೆ ಇರದಿದ್ದದ್ದು) ಒಂದು ಲಭಿಸುತ್ತದೆ. ಉಪನಿಷತ್ತುಗಳು ಹೇಳುವ ಬ್ರಹ್ಮವಿದ್ಯೆಗೆ (ಉಪಾಸನೆಗೆ) ಈ ಬಗೆಯ ಪ್ರಾಪಂಚಿಕ 'ಅಪೂರ್ವ'ವೇನೂ ಉದ್ದೇಶವಲ್ಲ. ಲೌಕಿಕವಾದ ಬಯಕೆ ಗಳನ್ನು ಬಿಟ್ಟವನೇ ಉಪಾಸನೆಯ ದಾರಿ ಹಿಡಿಯುವವನು. ಮುಂಡಕೋಪನಿಷತ್ತು 'ಲೋಕವನ್ನು ನೋಡಿ ಪರೀಕ್ಷಿಸಿ, ಇವೆಲ್ಲವು ಕರ್ಮದಿಂದ ಆದದ್ದು, ಕರ್ಮಗಳಿಂದ ಬರುವುದೆಲ್ಲವೂ ನಶ್ವರವಾದುದು; ಅಕೃತವಾದದ್ದು (ಆತ್ಮ, ಆನಂದ) ಕರ್ಮದಿಂದ ಬರುವುದಿಲ್ಲ, ಎಂದು ಮನಗಂಡು ಅವುಗಳಲ್ಲಿ ಅನಾಸಕ್ತಿಯನ್ನು ತಳೆದು, ಎಂದೆಂದೂ ಇರುವ (ಎಂದರೆ ಯಾವುದರಿಂದಲೂ ಒದಗಿಬರದ) ಆತ್ಮನನ್ನು ಅರಿತುಕೊಳ್ಳುವುದಕ್ಕೆ ಗುರುವನ್ನು ಅರಸಬೇಕು' ಎಂದು ಸೂಚಿಸುತ್ತದೆ.

ಉಪಾಸನೆಯಿಂದ ಕೈಗೂಡುವ ಜ್ಞಾನವು ಆತ್ಮನನ್ನು (ಬ್ರಹ್ಮನನ್ನು) ಕುರಿತದ್ದು. ಛಾಂದೋಗ್ಯದಲ್ಲಿ ದೃಷ್ಟಾಂತವೊಂದು ಕಂಡುಬರುತ್ತದೆ. ಒಬ್ಬ ಬಡವ; ಉಣ್ಣಲು, ಉಡಲು ಏನೂ ವ್ಯವಧಾನವಿಲ್ಲದವನು. ಅವನ ಹಿರಿಯರೇನೋ ಹಣವಂತ ರಾಗಿದ್ದವರು. ಅವರು ತಮ್ಮ ಹಣವನ್ನೆಲ್ಲ ಏನು ಮಾಡಿದರೆಂದು ಇವನಿಗೆ ತಿಳಿಯದು. ಅವರು ಮನೆಯ ಹಜಾರದ ಕೆಳಗೆ ಹಳ್ಳವನ್ನು ತೋಡಿ ಅದರಲ್ಲಿ ಹಿರಣ್ಯನಿಧಿಯನ್ನು ಇರಿಸಿ ಮುಚ್ಚಿಬಿಟ್ಟಿದ್ದರು. ಈ ಬಡವ ಅದರ ಮೇಲೇ ಹಗಲಿರುಳೂ ಓಡಿಯಾಡುತ್ತಾನೆ; ನಿಧಿ ಅಲ್ಲಿರುವುದು ಅವನಿಗೆ ತಿಳಿಯದು! ಇನ್ನು ಅದರ ಉಪಯೋಗವನ್ನು ಹೇಗೆ ತಾನೆ ಪಡೆದುಕೊಂಡಾನು? ಅಷ್ಟು ಬಂಗಾರದ ನಿಧಿಯಿದ್ದರೂ ಇವನು ಬಡವನೇ; ಕಷ್ಟದಿಂದ ಬಾಳನ್ನು ನೂಕುತ್ತಾನೆ. ಅವನಿಗೆ ಉಪಕಾರ ಮಾಡುವುದು ಹೇಗೆ? ಅವನದ್ದೇ ಆದ, ಅವನ ಮನೆಯಲ್ಲೇ ಇರುವ ಸಂಪತ್ತಿನ ಸುದ್ದಿಯನ್ನು ಅವನಿಗೆ ತಿಳಿಸಿದರಾಯಿತು. ಹೊಸದಾಗಿ ಏನನ್ನೂ ಅವನಿಗೆ ತಂದುಕೊಡಬೇಕಾಗಿಲ್ಲ. ಇರುವ ಅಜ್ಞಾನವನ್ನು ಕಳೆದರೆ ಸಾಕು.

ಉಪನಿಷತ್ತಿನ ಉಪಾಸನೆಯು ಮಾಡುವುದು ಇಷ್ಟೇ. ನಮ್ಮ ಆತ್ಮಸ್ವರೂಪ ನಮಗೆ ತಿಳಿಯದು, ನಮ್ಮ ಅನುಭವಕ್ಕೆ ಬಂದಿಲ್ಲ. ದೇಹವೇ ಆತ್ಮವೆಂದೋ, ಇಂದ್ರಿಯಗಳೇ ಆತ್ಮವೆಂದೋ, ಮನೆ-ಮಠ, ದುಡ್ಡು-ಕಾಸು ಎಲ್ಲ ಆತ್ಮನಿಗೇ ಸೇರಿದುವೆಂದೋ ಬಗೆದು ದುಃಖಪಡುತ್ತೇವೆ; ದೇಹಕ್ಕೆ ಗಾಸಿಯಾದೀತೆಂದು, ನಮ್ಮ ಸ್ವತ್ತು ಹೋದೀತೆಂದು, ಸಾಯುವುವೆಂದು ಭಯಪಡುತ್ತೇವೆ. ಸಂಸಾರದ ಸುಳಿಯಲ್ಲಿ ಸಿಕ್ಕು, ತೀರ ಸೇರುವ ತೆರ ಕಾಣದೆ ಬಳಲುತ್ತೇವೆ. ಅದಕ್ಕಾಗಿಯೇ ಉಪನಿಷತ್ತು 'ಆತ್ಮನನ್ನು ಅರಿತುಕೋ; ಬೇರೆಯ ಮಾತನ್ನು ಬಿಡು' ಎಂದು ಆಗ್ರಹಪೂರ್ವಕವಾಗಿ ಹೇಳುತ್ತದೆ. ಆತ್ಮನನ್ನು ನೇರವಾಗಿ ಅರಿತು ಅನುಭವಿಸಲು, ಶ್ರವಣ, ಮನನ, ನಿದಿಧ್ಯಾಸನ ಎಂಬುದು ದಾರಿಯೆಂದು ಯಾಜ್ಞವಲ್ಕ್ಯನು ಮೈತ್ರೇಯಿಗೆ ತಿಳಿಸಿದ್ದಾನೆ ('ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ'). ಆತ್ಮನನ್ನು ತಿಳಿದರೆ ಸಾಕು, ಎಲ್ಲವನ್ನೂ ತಿಳಿದಂತೆಯೇ. ಇರುವುದು ಆತ್ಮವೊಂದೇ; ಅದನ್ನು ಬಿಟ್ಟು ಬೇರೇನಿದೆ? ಇದು ಉಪನಿಷತ್ತಿನ ನಿಲುವು.

ಹೀಗಿರುವುದರಿಂದ ಉಪಾಸನೆಯ ಫಲವನ್ನು ಉಪನಿಷತ್ತುಗಳು ವಿವರಿಸುವಾಗ 'ಬ್ರಹ್ಮವನ್ನು ತಿಳಿದವನು ಬ್ರಹ್ಮನೇ ಆಗುತ್ತಾನೆ', 'ಬ್ರಹ್ಮವನ್ನು ತಿಳಿದರೆ ಬ್ರಹ್ಮನಲ್ಲೇ ಇದ್ದು ಬಿಡುವನು (ಬ್ರಹ್ಮಸಂಸ್ಥ)', 'ದೇಹಾದಿಗಳಿಂದ ಮೇಲೆದ್ದು ಮರದಂತೆ ದೃಢವಾಗಿ ನಿಲ್ಲುವನು', ಎಂದು ಮುಂತಾಗಿ ಹೇಳುತ್ತವೆ. ಎಲ್ಲೆಲ್ಲೂ ಇರುವ, ಎಂದೂ ಒಂದೇ ಬಗೆಯಾಗಿರುವ (ಎಂದರೆ ಯಾವ ವಿಕಾರವೂ ಇರದ), ಹುಟ್ಟು-ಸಾವುಗಳಿಲ್ಲದ, ಸಂಸಾರದ ಸಂಬಂಧ ಎಷ್ಟು ಮಾತ್ರಕ್ಕೂ ಇರದ ಆತ್ಮನನ್ನು ಅರಿತುಕೊಂಡ ಮೇಲೆ, ಅವನಿಗೆ ಮೋಹವೆಲ್ಲಿಯದು, ಶೋಕವೆಲ್ಲಿಯದು? ಎಂದು ಉಪನಿಷತ್ತು ಕೇಳುತ್ತದೆ. ದಿಟವನ್ನು ಅರಿಯಲಾರದೆ, ತೋರಿಕೆಯನ್ನೇ ನಂಬಿ ಮರುಳಾಗುವುದು ಮೋಹ. ನಿತ್ಯವಾದ ಆತ್ಮನನ್ನು ಅನಿತ್ಯವಾದ ದೇಹವೆಂದು, ಅನಿತ್ಯವಾದ ಸ್ವತ್ತುಗಳನ್ನು ನಿತ್ಯವಸ್ತುಗಳೆಂದು, ಕಾಮನೆಗಳನ್ನು ಶುಚಿಯಾದುವೆಂದು ಕಾಣುವುದು ಮೋಹ. ಇದರಿಂದಾಗಿ ಬಯಸಿದ್ದು ಬಾರದಿದ್ದರೆ ದುಃಖ; ಬೇಡವಾದದ್ದು ಬಂದರೆ ದುಃಖ. ಇಷ್ಟವಾದದ್ದು ಹೋದರೆ ಶೋಕ; ಅನಿಷ್ಟವಾದುದು ಬಂದೊದಗಿದರೆ ಶೋಕ. ಆತ್ಮಜ್ಞಾನದಿಂದ ಈ ಮೋಹ, ಶೋಕ ಎರಡೂ ತೊಲಗುತ್ತವೆ.

ಉಪನಿಷತ್ತು ಈ ಸ್ಥಿತಿಯನ್ನು ಅಮೃತ, ಅಭಯ, ಅಶೋಕ ಎಂದು ಬಣ್ಣಿಸುತ್ತದೆ. ಹೃದಯದಲ್ಲಿ ಮನೆಮಾಡಿಕೊಂಡಿರುವ ಕ್ಲೇಶಗಳೆಲ್ಲ ಮರೆಯಾಗುವುವೆಂದು ಬೃಹದಾರಣ್ಯಕ ಹೇಳುತ್ತದೆ. ನಮ್ಮ ಹೃದಯದ ಗಂಟುಗಳೆಲ್ಲ ಕಳಚಿಬೀಳುವುವೆಂದೂ, ನಮ್ಮನ್ನು ಕಾಡುವ ಸಂಶಯಗಳೆಲ್ಲ ಹರಿದು ಹೋಗುವುವೆಂದೂ, ನಮ್ಮ ಕರ್ಮಗಳೆಲ್ಲ ನಾಶವಾಗುವುವೆಂದೂ ಮುಂಡಕದಲ್ಲಿ ಒಕ್ಕಣೆಯಿದೆ. ಹೃದಯದಲ್ಲಿನ ಮೋಹ-ಶೋಕಗಳೇ ಬಂಧನ. ಅಜ್ಞಾನದಿಂದ ಮೋಹ; ಮೋಹದಿಂದ ಶೋಕ. ಜ್ಞಾನ ಒದಗಿದಾಗ ಮೋಹವಿಲ್ಲ, ಮೋಹವಿಲ್ಲದಿದ್ದರೆ ಶೋಕವಿಲ್ಲ. ಹೃದಯ ಹಗುರಾಗುತ್ತದೆ; ಬಂಧಗಳು ಕತ್ತರಿಸಿ ಹೋಗಿ ಸ್ವತಂತ್ರ ಸ್ಥಿತಿ ಬರುತ್ತದೆ. ಇದನ್ನು ಉಪನಿಷತ್ತು 'ಸ್ವರಾಟ್' ಎಂದು ನಿರ್ದೇಶಿಸುತ್ತದೆ. ಜ್ಞಾನಿಯಾದವನು ತನಗೆ ತಾನೆ ಒಡೆಯ; ಅವನನ್ನು ಯಾರ ಆಣತಿಯೂ ಕಟ್ಟಿಹಾಕಲಾರದು. ಅವನ ಎಲ್ಲ ಬಯಕೆಗಳೂ ಪೂರೈಸಿದಂತೆಯೇ; ಅವನು ಆಪ್ತಕಾಮ, ಬೇರೊಂದರ ಬಯಕೆ ಅವನಿಗೇನಿದ್ದೀತು?

ತೈತ್ತಿರೀಯವು ಇದನ್ನು ಆನಂದವೆಂದು ಕರೆದಿದೆ. ಬ್ರಹ್ಮಾನಂದವನ್ನು ಕುರಿತು ವಿಚಾರವನ್ನೂ ನಡೆಸಿದೆ. ಯುವಕನೊಬ್ಬ, ಸಾಧುಸ್ವಭಾವದವನು, ಶಾಸ್ತ್ರವನ್ನು ಅಧ್ಯಯನಮಾಡಿದ್ದಾನೆ, ದೃಢವಾದ ಮನಸ್ಸುಳ್ಳವನು, ಬಲವಾದ ದೇಹವುಳ್ಳವನು; ಅವನಿಗೆ ಅಪಾರವಾದ ಧನವೂ ಇದೆಯೆನ್ನಿ. ಅದು ಒಂದು ಮಾನುಷ ಆನಂದ. ಸುಖಪಡಲು ಎಲ್ಲ ಸಾಧನೆಗಳೂ ಇವೆ; ಏನನ್ನು ಬೇಕಾದರೂ ಅವನು ಪಡೆದುಕೊಳ್ಳಬಹುದು. ಆದರೆ ಇದೇ ಆನಂದದ ತುತ್ತತುದಿಯಲ್ಲ. ಇಂಥ ಮಾನುಷ ಆನಂದದ ನೂರುಪಟ್ಟು ಇರುವುದು ಮನುಷ್ಯಗಂಧರ್ವರ ಆನಂದ. ಶ್ರುತಿಯ ಫಲವನ್ನು ಪಡೆದವನು, ಕಾಮದ ಉಪದ್ರವ ಇಲ್ಲದವನು ಮನುಷ್ಯಗಂಧರ್ವ. ಇಂಥ ಒಂದು ನೂರು ಮನುಷ್ಯಗಂಧರ್ವಾನಂದಗಳು ಒಂದು ದೇವ ಗಂಧರ್ವಾನಂದವೆನಿಸಿಕೊಳ್ಳುತ್ತದೆ. ದೇವಗಂಧರ್ವಾನಂದ ನೂರುಪಟ್ಟು ಹೆಚ್ಚಿದರೆ ಪಿತೃಗಳ ಚಿರಲೋಕಲೋಕಾನಂದ; ಅದರ ನೂರುಪಟ್ಟು ಹೆಚ್ಚಿನದು ಅಜಾನಜ ದೇವತೆಗಳದ್ದು. ಇದನ್ನು ನೂರುಪಟ್ಟು ಹೆಚ್ಚಿಸಿದರೆ ಕರ್ಮದೇವಾನಂದ. ಅದನ್ನು ನೂರರಷ್ಟು ಹಾಕಿದರೆ ಒಂದು ದೇವಾನಂದ. ನೂರು ದೇವಾನಂದಗಳಾದರೆ ಒಂದು ಇಂದ್ರನ ಆನಂದ. ನೂರು ಇಂದ್ರಾನಂದಗಳು ಒಂದು ಬೃಹಸ್ಪತಿಯ

ಆನಂದ; ಅದಕ್ಕೆ ನೂರರಷ್ಟು ಹೆಚ್ಚಿನದು ಪ್ರಜಾಪತಿಯ ಆನಂದ. ಪ್ರಜಾಪತಿಯ ಆನಂದಕ್ಕೆ ನೂರುಪಟ್ಟು ಹೆಚ್ಚಿನದು ಒಂದು ಬ್ರಹ್ಮಾನಂದ, ಎಂದರೆ ಬ್ರಹ್ಮಜ್ಞಾನಿಯಾದವನು ಪಡೆಯುವ ಆನಂದ.

ಮಾನುಷಾನಂದವನ್ನೇ ನಮ್ಮಲ್ಲಿ ಬಹುಮಂದಿ ಬಯಸುವುದು; ಬಯಸಿದರೂ ನಮಗೆ ಅದರ ಒಂದು ತುಣುಕು ಮಾತ್ರ ಲಭ್ಯವಾದೀತು; ಪೂರ್ಣವಾಗಿ ಪಡೆದುಕೊಳ್ಳುವ ಆಸೆ ಯಾರಿಗೂ ಇರುವುದಿಲ್ಲ! ಮಾನುಷಾನಂದದಿಂದ ಪ್ರಜಾಪತಿಯ ಆನಂದದವರೆಗೂ ಆನಂದವು ಲೌಕಿಕವಾದುದೇ; ವಿಷಯಿ-ವಿಷಯ (ಎಂದರೆ ಅನುಭವಿಸುವವನು-ಅನುಭವಕ್ಕೆ ಬರುವಂಥದು) ವಿಭಾಗವನ್ನು ಅವಲಂಬಿಸಿದ್ದು. ಅದು ಬಯಸಿದ್ದು ದೊರೆತರೆ ಬರುವ ಆನಂದ, ಬಯಸಿದ್ದನ್ನು ಅನುಸರಿಸಿಯೇ ತೋರಿಕೊಳ್ಳುವಂಥದು. ಬ್ರಹ್ಮಜ್ಞಾನಿಯ ಆನಂದ ಈ ತೆರನಾದುದಲ್ಲ. ಅದು ಸ್ವಾಭಾವಿಕವಾದುದು, ಸಹಜವಾದುದು; ಬೇರೊಂದು ವಸ್ತುವನ್ನೋ ಸ್ಥಿತಿಯನ್ನೋ ಅವಲಂಬಿಸುವುದಲ್ಲ; ಕಾಣಿಸಿಕೊಂಡು ಕಣ್ಮರೆಯಾಗುವುದೂ ಅಲ್ಲ.

ಯಜ್ಞಯಾಗಾದಿ ಕರ್ಮಗಳಿಂದ ಮೇಲೆ ಹೇಳಿದ ಬ್ರಹ್ಮಾನಂದ ದೊರೆಯಲಾರದು; ಮಾನುಷಾನಂದ, ಮನುಷ್ಯಗಂಧರ್ವಾನಂದಗಳು ಸ್ವಲ್ಪಮಟ್ಟಿಗೆ ದಕ್ಕಬಹುದು. ಕರ್ಮಗಳಿಂದ ಒದಗಿದ ಪುಣ್ಯ ಕೆಲವು ಭೋಗಗಳನ್ನೂ, ಭೋಗಸಾಧನೆಗಳನ್ನೂ ತಂದುಕೊಡುತ್ತದೆ. ಆದರೆ ಪುಣ್ಯ ಇರುವಷ್ಟು ಮಟ್ಟಿಗೆ ಭೋಗ; ಅದು ತೀರಿತೆಂದರೆ ಭೋಗವೂ ಮರೆಯಾಗುತ್ತದೆ. ಪುಣ್ಯದಿಂದ ಬಂದ ಸದ್ಗತಿಯಾಗಲಿ, ಪಾಪದಿಂದ ಬಂದ ದುರ್ಗತಿಯಾಗಲಿ ಕ್ಷಣಿಕವಾದುದೇ. ಆದುದರಿಂದಲೇ ಬ್ರಹ್ಮಜ್ಞಾನಿಯಾದವನು ಪುಣ್ಯವನ್ನೂ ಪಾಪವನ್ನೂ ದೂರ ಬಿಸುಟು, ಅಲೌಕಿಕವಾದ ಶಾಶ್ವತವಾದ ಸುಖವನ್ನರಸುತ್ತಾನೆ.·ಯಾವ ಬಗೆಯ ಕರ್ಮವನ್ನೂ ಮಾಡಲು ತೊಡಗುವುದಿಲ್ಲ. ಏಕೆಂದರೆ ಕರ್ಮ ಮಾಡಿದ ಮೇಲೆ ಅದರ ಫಲ ಇದ್ದದ್ದೇ, ಬಿಡುವಂತಿಲ್ಲ. ಕರ್ಮಫಲದ ಅನುಭವವೆಂದರೆ ಸಂಸಾರದ ಸುಳಿಯಲ್ಲಿ ಸಿಕ್ಕಿಕೊಳ್ಳುವುದೇ. ಬ್ರಹ್ಮಜ್ಞಾನ ಒದಗಿದೊಡನೆ ಕರ್ಮಗಳ ಕಟ್ಟೆಲ್ಲ ಕಳಚಿಬೀಳುತ್ತದೆ ('ಕ್ಷೀಯಂತೇ ಚಾಸ್ಯ ಕರ್ಮಾಣಿ'). ಮತ್ತೆ ಫಲಭೋಗಕ್ಕೆ ಇಲ್ಲಿಗೇ ಮರಳಬೇಕಾದುದಿಲ್ಲ.

ಸಂಸಾರದ ಸ್ವರೂಪವನ್ನು 'ಅವಿದ್ಯಾ-ಕಾಮ-ಕರ್ಮ' ಎಂದು ಉಪನಿಷತ್ತು ಬಣ್ಣಿಸುತ್ತದೆ. ತತ್ತ್ವವನ್ನು ತಿಳಿಯದಿರುವುದರಿಂದ ದೇಹವೇ ಆತ್ಮವೆಂಬ ಭ್ರಮೆ,

ಆದರಿಂದ ಬಯಕೆಗಳು, ಬಯಕೆಗಳನ್ನು ತೀರಿಸಿಕೊಳ್ಳಲು ಕರ್ಮದಲ್ಲಿ ತೊಡಗುವುದು, ಕರ್ಮ ಮಾಡಿದ ಮೇಲೆ ಅದರ ಫಲವನ್ನು ಉಣ್ಣಲು ಜನ್ಮವೆತ್ತುವುದು; ಮತ್ತೆ ಇದರದ್ದೇ ಪುನರಾವರ್ತನೆ. ಇದೊಂದು ಚಕ್ರದಂತೆ ಸುತ್ತಾಟ. ಇದರಿಂದ ತಪ್ಪಿಸಿಕೊಳ್ಳಲು ತತ್ತ್ವಜ್ಞಾನವೊಂದೇ ದಾರಿ. ಉಪನಿಷತ್ತಿನ ದಾರಿ ಇದು. ಆತ್ಮಜ್ಞಾನವನ್ನು ಪಡೆದುಕೊಂಡರೆ ಮುಂದಿನ ಯಾವ ಬಂಧಕವಾದ ಹಂತವೂ ಇರದು. ಆಗ ಸಂಸಾರದಿಂದ ಬಿಡಿಸಿಕೊಂಡಂತೆಯೇ. ಇದನ್ನೇ ಮೋಕ್ಷವೆಂದು ನಿರ್ದೇಶಿಸಿರುವುದು. ಮೋಕ್ಷ (ಅಥವಾ ಮುಕ್ತಿ) ಎಂಬ ಮಾತಿಗೆ ಬಿಡುಗಡೆಯೆಂದೇ ಅರ್ಥ. ಜ್ಞಾನಿಯಾದವನು 'ಮತ್ತೆ ಇಲ್ಲಿಗೆ ಬರುವುದಿಲ್ಲ' ('ನ ಚ ಪುನರಾವರ್ತತೇ').

ಈ ಸ್ಥಿತಿಯು ದೇಹ ಅಳಿದ ಮೇಲೇ (ಎಂದರೆ ಸತ್ತಮೇಲೇ) ಬರುವುದೆಂದಲ್ಲ. ದೇಹಾಭಿಮಾನ ಹೋದರೆ ಆಯಿತು, ಬದುಕಿರುವಾಗಲೇ ಮುಕ್ತನಾಗಬಹುದು. ಉಪನಿಷತ್ತುಗಳಲ್ಲಿ ಜ್ಞಾನಫಲವನ್ನು ಹೇಳುವಾಗ 'ಇಹೈವ' (ಎಂದರೆ ಇಲ್ಲಿಯೇ, ಈ ಜನ್ಮದಲ್ಲಿಯೇ) ಎಂದು ಸ್ಪಷ್ಟಪಡಿಸಲಾಗಿದೆ. ಮುಂದೆ ಇದನ್ನು 'ಜೀವನ್ಮುಕ್ತಿ' (ಬದುಕಿರುವಾಗಲೇ ಸಂಸಾರದಿಂದ ಬಿಡುಗಡೆ) ಎಂದು ನಮ್ಮವರು ಕರೆದರು. ಅವಿದ್ಯೆಯಿಂದ ಒದಗಿಬಂದ ಕರ್ಮದ ಶರೀರ ಪೂರ್ಣವಾಗಿ, ಎಂದರೆ ವಾಸನೆಗಳೊಂದಿಗೆ, ಬಿದ್ದುಹೋದ ಮೇಲೆ, ಜೀವ ಮತ್ತೆ ಹುಟ್ಟಿಬಾರದಿರುವುದು 'ವಿದೇಹಮುಕ್ತಿ' (ದೇಹವಿಲ್ಲದೆ ಬಿಡುಗಡೆ) ಎನಿಸಿಕೊಳ್ಳುತ್ತದೆ.

ಜೀವನ್ಮುಕ್ತಿಯಾದಾಗಲೇ ವಿದೇಹಮುಕ್ತಿಯೂ ಆಗಿಬಿಡಬೇಕೆಂಬ ನಿಯಮ ವೇನಿರದು. ಕುಂಬಾರನು ಮಡಕೆಯನ್ನು ಮಾಡುವಾಗ ಚಕ್ರವೊಂದನ್ನು ಬಳಸುತ್ತಾನಷ್ಟೆ. ಚಕ್ರ ತಿರುಗುತ್ತಿರುವಾಗ ಮಡಕೆ ಮೈದಳೆದು ಹೊರಗೆ ಬರುತ್ತದೆ. ಮಡಕೆ ಹೊರಗೆ ಬಂದ ಮೇಲೂ ಚಕ್ರ ಸ್ವಲ್ಪ ಹೊತ್ತು ತಿರುಗುತ್ತಲೆ ಇರುತ್ತದೆಯಲ್ಲವೆ? ಹಾಗೆಯೇ ಜ್ಞಾನಿಯು ತನ್ನ ವಿದ್ಯೆಯ ಫಲವಾಗಿ ಮುಕ್ತನಾದ ಮೇಲೂ ಅವನ ದೇಹ ಮುಂದುವರೆಯುತ್ತದೆ; ಅದು ನಿಂತ ಮೇಲೆ ವಿಮುಕ್ತಿ. ದೇಹವು ತೋರಿಕೊಳ್ಳುವುದಾಗಲಿ, ಮನುಷ್ಯನಿಗೆ ಪರಿಸರಗಳು ಒದಗುವುದಾಗಲಿ ಪ್ರಾರಬ್ಧಕರ್ಮದಿಂದ. ಪ್ರಾರಬ್ಧಕರ್ಮವೆಂದರೆ ಫಲ ಕೊಡಲು ಆಗಲೆ ಆರಂಭವಾಗಿರುವ ಕರ್ಮಗಳು. ಇವು ಅನುಭವಿಸಿಯೇ ತೀರಿಕೊಳ್ಳಬೇಕು, ಎಂದರೆ ಅವು ತೀರಿಕೊಳ್ಳುವವರೆಗೆ ದೇಹ ಉಳಿದುಕೊಳ್ಳಬೇಕು. ಜ್ಞಾನಿಯಾಗಲಿ, ಅಜ್ಞಾನಿಯಾಗಲಿ, ಇದು ತಪ್ಪಿದ್ದಲ್ಲ.

ಆದರೆ ದೇಹವಿದೆಯೆಂದ ಮಾತ್ರಕ್ಕೆ, ಜ್ಞಾನಿಗೆ ಜ್ಞಾನದ ಫಲವಾದ ಮುಕ್ತಿಯು ಅನುಭವಕ್ಕೆ ಬರಲಡ್ಡಿಯೇನಿಲ್ಲ. ಎಲ್ಲರಂತೆಯೇ ಅವನಿಗೂ ದೇಹಧಾರಣೆಗೆ ಅಗತ್ಯವಾದ ಊಟ, ತಿಂಡಿ, ನಿದ್ರೆ ಮುಂತಾದವು ಬೇಕು; ಸಾಮಾನ್ಯರಂತೆಯೇ ಅವನೂ ಇರುವನು. ಹಾಗಿದ್ದರೂ, ಅವನು ಮುಕ್ತನೇ. ಅವನ ಯಾವ ಕರ್ಮವೂ ಬಂಧಕವಾಗಲಾರದು. ಬೇರು ಸಹಿತ ಕಿತ್ತುಹಾಕಿದ ಮರ ಸ್ವಲ್ಪ ಕಾಲ ಹಸಿಯಾಗಿಯೇ ಇರುವುದಾದರೂ, ಅದು ಮತ್ತೆ ಬೆಳೆಯಲಾರದಲ್ಲವೆ?

ಜ್ಞಾನಿಯು ಎಲ್ಲರಂತಿದ್ದರೂ ಲೌಕಿಕವಾದ ಬಯಕೆಗಳಲ್ಲೊ ಅವುಗಳ ಪೂರೈಕೆಯಲ್ಲೊ ತೊಡಗದೆ ಅವನ ಮನಸ್ಸು ನಿರ್ಮಲವಾಗಿದ್ದು, ಅಲೌಕಿಕವಾದ ಆನಂದದಲ್ಲಿ ಮುಳುಗಿರುತ್ತಾನೆ. ಇಂಥ ಜ್ಞಾನಿಗಳ ಉಲ್ಲೇಖ ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಕಾಣಬರುತ್ತದೆ. ಛಾಂದೋಗ್ಯೋಪನಿಷತ್ತಿನಲ್ಲಿ ಜಾನಶ್ರುತಿಯೆಂಬ ಶ್ರೀಮಂತ ಜಿಜ್ಞಾಸುವು ಬಂಡಿಹೊಡೆಯುವ ಶೂದ್ರ ರೈಕ್ವನೆಂಬ ಜ್ಞಾನಿಯನ್ನು ಅರಸಿಕೊಂಡು ಹೋದ ಪ್ರಸಂಗ ಬರುತ್ತದೆ. ರೈಕ್ವನು ಬಂಡಿಯ ಕೆಳಗೆ ಮೈತುರಿಸಿಕೊಳ್ಳುತ್ತ ಕೂತಿದ್ದನಂತೆ! ಬೃಹದಾರಣ್ಯಕೋಪನಿಷತ್ತಿನಲ್ಲಿ ಯಾಜ್ಞವಲ್ಕ್ಯನೆಂಬ ಜ್ಞಾನಿಯು ಸಾಮಾನ್ಯ ಮನುಷ್ಯನಂತೆಯೇ ಜನಕರಾಜನ ಬಳಿಗೆ ಬಂದುದನ್ನು ತಿಳಿಸುವ ಸಂದರ್ಭವಿದೆ. ಛಾಂದೋಗ್ಯದಲ್ಲಿ ಬರುವ, ತನ್ನ ತಂದೆ ಯಾರೆಂಬುದನ್ನೆ ಅರಿಯದ, ಸತ್ಯಕಾಮ-ಜಾಬಾಲನೆಂಬ ಜ್ಞಾನಿಯು ಗುರುವಿನ ದನ ಕಾಯುತ್ತಿದ್ದವನು.

ಕೆಲವು ಉಪನಿಷತ್ತುಗಳಲ್ಲಿ ಆಖ್ಯಾಯಿಕೆಗಳು ಪ್ರಮುಖವಾಗಿ ಬರುತ್ತವೆ. ಆಖ್ಯಾಯಿಕೆಯೆಂದರೆ ಹಿಂದೆ ನಡೆದ ಪ್ರಸಂಗವನ್ನೋ ಸಂವಾದವನ್ನೋ ಕುರಿತು ನಿರೂಪಣೆ; ಕತೆಯಂತೆ ಒಕ್ಕಣೆ. ವ್ಯಕ್ತಿಗಳು ಬರುತ್ತಾರೆ, ಮಾತುಕತೆ ನಡೆಯುತ್ತದೆ. ಇದರೊಡಲಿಂದ ತತ್ತ್ವಚಿಂತನೆ, ವಿದ್ಯೆ, ರಹಸ್ಯೋಪದೇಶ ಹೊರಬರುತ್ತವೆ. ಕಠೋಪನಿಷತ್ತು ಆರಂಭವಾಗುವುದೇ ನಚಿಕೇತನು ಯಮನ ಬಳಿಗೆ ಹೋಗುವ ಪ್ರಸಂಗದಿಂದ. ಕೇನೋಪನಿಷತ್ತಿನಲ್ಲಿ ದೇವತೆಗಳಿಗೂ ಅಸುರರಿಗೂ ನಡೆದ ಹಗರಣ ಉಲ್ಲೇಖಗೊಳ್ಳುತ್ತದೆ. ಕೌಷೀತಕೀ ಉಪನಿಷತ್ತಿನಲ್ಲಿ ಪ್ರತರ್ದನನು ಇಂದ್ರನಿಗೆ ಯುದ್ಧದಲ್ಲಿ ನೆರವಾಗಿ ಅವನಿಗೆ ಪ್ರಿಯನಾದ ವೃತ್ತಾಂತವಿದೆ. ಬೃಹದಾರಣ್ಯಕ, ಛಾಂದೋಗ್ಯಗಳಲ್ಲಂತೂ ಅನೇಕ ಆಖ್ಯಾಯಿಕೆಗಳು—ಯಾಜ್ಞವಲ್ಕ್ಯನಿಗೆ ಮೈತ್ರೇಯಿ,

ಕಾತ್ಯಾಯನಿಯರೆಂಬ ಇಬ್ಬರು ಪತ್ನಿಯರಿದ್ದುದು, ವಿದೇಹದ ರಾಜ ಜನಕನು ಯಜ್ಞಮಾಡಿದಾಗ ಜಿಜ್ಞಾಸುಗಳ ಸಭೆ ನಡೆದದ್ದು, ನಡುವೆ ನಡೆದ ಮಾತುಕತೆ, ಉದ್ದಾಲಕನು ಶ್ವೇತಕೇತುವಿಗೆ ಉಪದೇಶ ಮಾಡಿದ ಸಂದರ್ಭ, ಸನತ್ಕುಮಾರನು ನಾರದನಿಗೆ ಪರಾಪರಾವಿದ್ಯೆಗಳ ಗುಟ್ಟನ್ನು ತಿಳಿಸಿದ್ದು ಮೊದಲಾದವು.

ಉಪನಿಷತ್ತುಗಳು ಆತ್ಮವಿದ್ಯೆಯ ರಹಸ್ಯೋಪದೇಶಗಳೆಂದ ಮೇಲೆ ಈ ಆಖ್ಯಾಯಿಕೆಗಳ ಔಚಿತ್ಯವೇನು? ಇದನ್ನು ಕುರಿತಂತೆ ಭಿನ್ನಾಭಿಪ್ರಾಯವಿದ್ದುದು ಕಂಡುಬರುತ್ತದೆ. ಬಾದರಾಯಣರ ಬ್ರಹ್ಮಸೂತ್ರಗಳಲ್ಲಿ ಪಾರಿಪ್ಲವಾಧಿಕರಣ (೩, ೪.೨೩) ಎಂಬುದೊಂದು ವಿಚಾರ ಬರುತ್ತದೆ. ಪಾರಿಪ್ಲವವೆಂದರೆ ಅಶ್ವಮೇಧ ಯಾಗದ ನಡುನಡುವೆ, ವಿರಾಮವಿರುವಾಗ, ನೆರೆದವರ ಮನೋರಂಜನೆಗಾಗಿ, ಹೇಳುವ ಆಖ್ಯಾಯಿಕೆಗಳು (ಕತೆಗಳು, ವೃತ್ತಾಂತ ನಿರೂಪಣೆಗಳು). ಇಂಥ ಸಂದರ್ಭಗಳಲ್ಲಿ ಪಾರಿಪ್ಲವವನ್ನು ಹೇಳಬೇಕೆಂದು ವಿಧಿಯೇ ಇದೆ ('ಪಾರಿಪ್ಲವಂ ಆಚಕ್ಷೀತ'). ಉಪನಿಷತ್ತಿನ ಆಖ್ಯಾಯಿಕೆಗಳೂ ಪಾರಿಪ್ಲವಗಳಂತೆಯೇ, ಕರ್ಮಾಂಗವಾಗಿ (ಎಂದರೆ ಯಾಗ ಮಾಡುವಾಗ ಅದಕ್ಕೆ ಹೊಂದಿಕೊಂಡಂತೆ) ಬರುವುದರಿಂದ ಅವುಗಳಿಗೆ ವಿದ್ಯೆಯ (ಜ್ಞಾನದ) ಪ್ರಯೋಜನವಿರದು. ಇದೊಂದು ಅಭಿಪ್ರಾಯ; ಮೀಮಾಂಸಕರದ್ದು. ಅವರಿಗೆ ಉಪನಿಷತ್ತುಗಳು ಕರ್ಮಕಾಂಡದ ಅರ್ಥವಾದಗಳಷ್ಟೆ, ಎಂದರೆ ವಿವರಣೆಗಳಷ್ಟೆ. ಅವರ ಪ್ರಕಾರ, ಉಪನಿಷತ್ತುಗಳು ವೇದದ ಪ್ರಧಾನಭಾಗವೇ ಅಲ್ಲ; ಕರ್ಮಗಳನ್ನು ಹೇಳದೆ ಇರುವುದರಿಂದ, ಅವು ವೇದದ ಮರುಭೂಮಿಗಳು (ವೇದೋಷರ), ಅವುಗಳಿಂದ ಯಾವ ಪ್ರಯೋಜನವೂ ಇಲ್ಲ.

ಈ ಅಭಿಪ್ರಾಯವನ್ನು ಬಾದರಾಯಣರು ಎತ್ತಿಕೊಂಡು ಉಪನಿಷತ್ತುಗಳಿಗೆ ಪಾರಿಪ್ಲವದ ಪ್ರಯೋಜನವಿದೆಯೆಂದು ಹೇಳಬಾರದು, ಅವುಗಳಿಗೆ ವಿದ್ಯೆಯನ್ನು ಹೇಳುವ, ಉಪಾಸನೆಗಳನ್ನು ಸೂಚಿಸುವ ವಿಶೇಷ ತಾತ್ಪರ್ಯವಿದೆಯೆಂದು ಸಮರ್ಥಿಸಿದ್ದಾರೆ. ವಿದ್ಯೆಗಳನ್ನು ಹೇಳುವುದು ಉದ್ದೇಶವಾದರೆ, ಆಖ್ಯಾಯಿಕೆಯ ರೂಪವಾಗಲಿ ಹಿನ್ನೆಲೆಯಾಗಲಿ ಏತಕ್ಕೆ?—ಎಂದರೆ ಶಂಕರಾಚಾರ್ಯರು, ಅಧ್ಯಯನವನ್ನು ಮಾಡುವವರಿಗೆ ರುಚಿಯನ್ನುಂಟುಮಾಡಲು ಮತ್ತು ತಿಳಿವಳಿಕೆಗೆ ಸೌಲಭ್ಯವನ್ನುಂಟುಮಾಡಲು, ಎಂಬೆರಡು ಕಾರಣಗಳನ್ನು ಹೇಳಿದ್ದಾರೆ. ಈ

ಆಖ್ಯಾಯಿಕೆಗಳು ವಿಭಿನ್ನವಾಗಿದ್ದರೂ ಅವುಗಳು ಮಾಡುವ ಉಪದೇಶಗಳಲ್ಲಿ ಏಕವಾಕ್ಯತೆಯಿದೆಯೆಂಬುದನ್ನೂ ಸೂತ್ರಕಾರರು ಸೂಚಿಸಿದ್ದಾರೆ.

ಇದೊಂದು ಮುಖ್ಯವಾದ ವಿಚಾರ. ಮೊದಲೇ ಒಂದು ಸಂದರ್ಭದಲ್ಲಿ ಇದನ್ನು ಹೇಳಿದೆ; ಮತ್ತೆ ಹೇಳುವ ಅಗತ್ಯವೂ ಇದೆ. ಉಪನಿಷತ್ತುಗಳು ನೂರೆಂಟಲ್ಲ, ಹತ್ತೇ ಎಂದರೂ, ಅವುಗಳಲ್ಲಿ ಬರುವ ಉಪದೇಶ ಒಂದೇ ಎಂದು ಹೇಳಲಾದೀತೆ? ಒಂದೊಂದು ಉಪನಿಷತ್ತು ಒಂದೊಂದು ಅಭಿಪ್ರಾಯವನ್ನು ಎತ್ತಿ ಹಿಡಿಯುತ್ತದೆ ಎಂದು ಹೇಳಬಾರದೇಕೆ? ಆಖ್ಯಾಯಿಕೆಗಳ ಸ್ವಾರಸ್ಯವನ್ನು ಗಮನಿಸಿದರೆ ಇದು ಸರಿಯೆಂದೇ ತೋರಬಹುದು. ಹೀಗಾದರೆ ಉಪನಿಷತ್ತುಗಳೆಲ್ಲ ಸೇರಿ ಒಂದು ಜ್ಞಾನಕಾಂಡ ಎಂದಾಗುವುದಿಲ್ಲ; ವೇದಾಂತತಾತ್ಪರ್ಯ ಒಮ್ಮುಖನಾಗಿದೆ ಎಂದಾಗುವುದಿಲ್ಲ. ಉಪನಿಷತ್ತುಗಳಲ್ಲಿ ಉಪಾಸನೆಗಾಗಿ, ತಿಳಿವಳಿಕೆಗಾಗಿ ಬೇರೆ ಬೇರೆ ವಿಧಿಗಳಿವೆ. ಎಂದರೆ ಅವೂ ಯಜ್ಞಯಾಗಾದಿಗಳಿಗೆ ಕರ್ಮಕಾಂಡಗಳಲ್ಲಿರುವ ವಿಧಿಗಳಂತೆಯೇ ಅಧಿಕಾರಿಗಳ, ಬಯಕೆಗಳ ವೈವಿಧ್ಯವನ್ನನುಸರಿಸಿ ವಿಭಿನ್ನವಾಗಿವೆ, ಎಂದಾಯಿತು.

ಮೇಲು ನೋಟಕ್ಕೆ ಹೀಗೆಯೇ ತೋರುವುದೂ ಇದೆ. ಹಾಗೆಂದೇ ಹಲವಾರು ವಿದ್ವಾಂಸರು ಉಪನಿಷತ್ತುಗಳಲ್ಲಿ ಏಕವಾಕ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಉಪನಿಷತ್ತುಗಳೆಲ್ಲ ಒಂದು ತಾತ್ಪರ್ಯದಲ್ಲಿ ಪರ್ಯವಸಾನವಾಗದಿದ್ದರೆ ವೇದಾಂತವು ಸಮರ್ಪಕವಾದ ಒಂದು ಪ್ರಸ್ಥಾನವೂ ಆಗಲಾರದು; ಅದರಿಂದ ಜಿಜ್ಞಾಸುಗಳಿಗಾಗಲಿ ಸಾಧಕರಿಗಾಗಲಿ ಪ್ರಯೋಜನವೂ ಇರದು. ಈ ಆಕ್ಷೇಪವು ಸೂತ್ರಕಾರರ ಕಾಲದಲ್ಲೂ ಇದ್ದಿತು. ಅದಕ್ಕಾಗಿಯೇ ಅವರು ಉಪನಿಷದ್ವಾಕ್ಯಗಳನ್ನು ಸಮನ್ವಯ ಮಾಡಲು ಹೊರಟರು. ಅವುಗಳಲ್ಲಿ ಏಕವಾಕ್ಯತೆಯಿದೆಯೆಂದು ಕಾಣಿಸುವುದೇ ಸೂತ್ರಗಳ ಉದ್ದೇಶ. ಸಂಪ್ರದಾಯದ ಎಣಿಕೆಯಂತೆ ಉಪನಿಷತ್ತುಗಳ ನಿರೂಪಣೆಯ ಧೋರಣೆ ಬೇರೆಬೇರೆಯಾಗಿದ್ದರೂ ತಾತ್ಪರ್ಯ ಒಂದೇ. ಪಾರಿಪ್ಲವದ ಆಖ್ಯಾಯಿಕೆಗಳ ಸಂದರ್ಭ ಬೇರೆ; ಅವುಗಳ ಉದ್ದೇಶ ಬೇರೆ. ಅವುಗಳಲ್ಲಿ ಏಕವಾಕ್ಯತೆಯಿದ್ದೀತೆಂಬ ಕಲ್ಪನೆ ಯಾರಿಗೂ ಇರದು. ಉಪನಿಷತ್ತುಗಳ ಆಖ್ಯಾಯಿಕೆಗಳು ಕರ್ಮಾಂಗವಾಗಿಯೂ ಬಂದಿಲ್ಲ, ರಂಜನೆಗಾಗಿಯೂ ಬಂದಿಲ್ಲ. ಬದುಕಿನ ಶೋಕವನ್ನು ಕಳೆದುಕೊಳ್ಳುವ ತವಕದಿಂದ, ಆತ್ಮನನ್ನು ಅರಿತುಕೊಂಡಲ್ಲದೆ ಶೋಕ ಮರೆಯಾಗದೆಂಬ ವಿಶ್ವಾಸದಿಂದ ಬಂದುವು.

ಆತ್ಮವಿದ್ಯೆಯ ವಿವಿಧ ಪ್ರಕಾರಗಳನ್ನು ಉಪನಿಷತ್ತುಗಳು ತಿಳಿಯಹೇಳುತ್ತವೆ; ಪ್ರಕಾರಗಳು ವಿಭಿನ್ನವಾದರೂ ವಿದ್ಯೆ ಒಂದೇ. ತೈತ್ತಿರೀಯದಲ್ಲಿರುವ ಪಂಚಕೋಶ ವಿವೇಕ (ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಕೋಶಗಳಲ್ಲಿ ಅಂತರ್ಗತನಾದ, ವ್ಯಾಪಕನಾದ, ಅವುಗಳಿಂದ ಬೇರೆಯಾಗಿ ನಿರ್ಗುಣವಾದ ಆತ್ಮನನ್ನು ತಿಳಿಯುವುದು), ಮಾಂಡೂಕ್ಯದಲ್ಲಿನ ಅವಸ್ಥಾತ್ರಯ ವಿವೇಕ (ಎಚ್ಚರ, ಕನಸು, ತನಿನಿದ್ರೆ ಎಂಬ ಮೂರೂ ಅವಸ್ಥೆಗಳಲ್ಲಿ ಅವಿಕಾರಿ ನಿತ್ಯನಾಗಿದ್ದುಕೊಂಡು, ಅವುಗಳನ್ನು ಮೀರಿದವನಾದ ಆತ್ಮನನ್ನು ತಿಳಿಯುವುದು), ಛಾಂದೋಗ್ಯದ ಕಾರ್ಯಕಾರಣ ವಿವೇಕ (ನಾಮ-ರೂಪಗಳಿಂದ ವ್ಯಾಕೃತವಾದ ಈ ಜಗತ್ತು ಸತ್ ಎಂಬ ಅವ್ಯಾಕೃತ ಆತ್ಮನಿಂದಲೇ ಆಗಿದೆ ಎಂದು ತಿಳಿಯುವುದು), ಬೃಹದಾರಣ್ಯಕದ ಸಾಮಾನ್ಯ ವಿಶೇಷ ವಿವೇಕ (ಸಾಮಾನ್ಯವಾದ ಸ್ವರೂಪವನ್ನು ಗ್ರಹಿಸಿದರೆ ಆದರ ವಿಶೇಷ-ರೂಪಗಳೆಲ್ಲವನ್ನೂ ತಿಳಿದಂತಾಗುತ್ತದೆ ಎಂಬುದು) ಮುಂತಾದುವು ವಿಭಿನ್ನ ಪ್ರಕಾರಗಳಿಗೆ ನಿದರ್ಶನಗಳು. ಅವೆಲ್ಲವೂ ಹೇಳುವುದು ನಿರ್ಗುಣನಾದ, ಅವಿಕಾರಿಯಾದ, ನಿತ್ಯನಾದ, ಅಸಂಸಾರಿಯಾದ ಆತ್ಮನನ್ನೇ. ಇವನನ್ನು ಬೃಹದಾರಣ್ಯಕೋಪನಿಷತ್ತು 'ಔಪನಿಷದ ಪುರುಷ'ನೆಂದು ಕರೆಯುತ್ತದೆ.

ಸಾಧಕರೆಲ್ಲರೂ ತಂತಮ್ಮ ಅಧಿಕಾರಭೇದದಿಂದ ಅರಿತುಕೊಳ್ಳಲು ನೆರವಾಗಲೆಂದು ವಿಭಿನ್ನ ಪ್ರಕಾರಗಳು, ಬೇರೆ ಬೇರೆ ರಹಸ್ಯೋಪದೇಶಗಳು. ಇವುಗಳಲ್ಲಿ ವೈವಿಧ್ಯವಿರುವುದು ಸಹಜವೇ. ಈ ಪ್ರಕಾರಗಳಲ್ಲಿ ಅಡಗಿರುವ ಪ್ರಕ್ರಿಯೆಗಳನ್ನು ಕುರಿತಂತೆ ಭಾಷ್ಯಕಾರರು ಭಿನ್ನಾಭಿಪ್ರಾಯಗಳನ್ನು ತಳೆದಿರುವುದೂ ಸಹಜವೇ. ಕರ್ಮ ಮತ್ತು ಜ್ಞಾನ ಎರಡನ್ನೂ ಕೂಡಿಸಿಕೊಳ್ಳುವುದು ಸಾಧ್ಯವೋ ಉಚಿತವೋ; ಜ್ಞಾನಕ್ಕೂ ಉಪಾಸನೆಗೂ ಇರುವ ವೈಲಕ್ಷಣ್ಯವೇನು; ಸಾಧನೆಗಳಲ್ಲಿ ಶ್ರವಣ, ಮನನ, ನಿದಿಧ್ಯಾಸನಗಳ ಪರಸ್ಪರ ಸಂಬಂಧ ಹೇಗೆ; ಉಪಾಸನೆಯೆನ್ನುವುದು ನಿದಿಧ್ಯಾಸನವೋ ಅಲ್ಲವೋ; ಜೀವೇಶ್ವರ ವಿಭಾಗದ ಅನ್ವಯವೇನು; ಪರ ಮತ್ತು ಅಪರ ಬ್ರಹ್ಮ ವಿಭಾಗ ಮಾಡಿರುವುದರ ಉದ್ದೇಶವೇನು—ಇಂಥ ಸಮಸ್ಯೆಗಳನ್ನು ಭಾಷ್ಯಕಾರರು ಎತ್ತಿಕೊಳ್ಳುತ್ತಾರೆ. ಅವರವರ ಅನುಭವ, ಯುಕ್ತಿ, ನಿಲುವುಗಳನ್ನನುಸರಿಸಿ ಸಮಾಧಾನಗಳನ್ನು ಸೂಚಿಸುತ್ತಾರೆ. ಹೀಗೆಂದಮಾತ್ರಕ್ಕೆ ಉಪನಿಷತ್ತುಗಳಲ್ಲೇ ಏಕವಾಕ್ಯತೆ ಇಲ್ಲವೆಂದು ಹೇಳಲಾಗದು.

ಉಪನಿಷತ್ತುಗಳಿಗೆ ಎಷ್ಟು ಹಿಂದಿನಿಂದ ಭಾಷ್ಯಗಳಿವೆಯೋ ನಮಗೆ ತಿಳಿಯದು, ಇದ್ದ ಭಾಷ್ಯಗಳು ಉಳಿದೂ ಇಲ್ಲ. ಶಂಕರಾಚಾರ್ಯರ ಭಾಷ್ಯವೇ ಉಪಲಬ್ಧವಾದ ಭಾಷ್ಯಗಳಲ್ಲೆಲ್ಲ ಪ್ರಾಚೀನವಾದುದು. ಅವರ ನಂತರ ಬಂದ ರಾಮಾನುಜಾಚಾರ್ಯರು (೧೦೧೭-೧೧೨೭) ಉಪನಿಷತ್ತುಗಳಿಗೆ ಅದು ಯಾವ ಕಾರಣದಿಂದಲೋ ಭಾಷ್ಯ ಬರೆಯಲಿಲ್ಲ; ಬ್ರಹ್ಮಸೂತ್ರಗಳ ಮೇಲೂ ಭಗವದ್ಗೀತೆಯ ಮೇಲೂ ಭಾಷ್ಯ ಬರೆದರು. ಅವರ ಈ ಭಾಷ್ಯಗಳ ನಿಲುವನ್ನು ಅವಲಂಬಿಸಿ ವೇದಾಂತದೇಶಿಕರು (೧೨೬೮-೧೩೬೮) ಈಶಾವಾಸ್ಯೋಪನಿಷತ್ತಿನ ಮೇಲೂ ರಂಗರಾಮಾನುಜರು ಇತರ ಉಪನಿಷತ್ತುಗಳ ಮೇಲೂ ಭಾಷ್ಯಗಳನ್ನು ರಚಿಸಿದರು. ಮುಂದೆ ಮಧ್ವಾಚಾರ್ಯರು (೧೨೩೮-೧೩೧೭) ಶಂಕರಾಚಾರ್ಯರಂತೆಯೇ ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ಭಗವದ್ಗೀತೆ ಮೂರರ ಮೇಲೂ ಭಾಷ್ಯ ಬರೆದಿದ್ದಾರೆ. ಈ ಆಚಾರ್ಯರ ಪರಂಪರೆಗಳಿಗೆ ಸೇರಿದ ಹಲವರು ಹಲವು ಉಪನಿಷತ್ತುಗಳ ಮೇಲೆ ವ್ಯಾಖ್ಯಾನ, ಟೀಕೆ, ಟಿಪ್ಪಣಿಗಳನ್ನು ಸಿದ್ಧಪಡಿಸಿದ್ದಾರೆ. ಇವೆಲ್ಲದರಿಂದ ಉಪನಿಷತ್ತಿನ ತಾತ್ಪರ್ಯವೂ, ಪ್ರಕ್ರಿಯೆಗಳೂ ಮನದಟ್ಟಾಗುತ್ತವೆ.

~ ~ ~

ಅನುಬಂಧ

ಉಪನಿಷತ್ತುಗಳ ಪರಿಚಯವು ಆಧುನಿಕ ಜಗತ್ತಿಗೆ ಮೊಟ್ಟಮೊದಲು ಆದದ್ದು ೧೮೦೧-೧೮೦೨ರ ಸುಮಾರಿಗೆ. ಅಂಕ್ವಿತಿಲ್-ದುಪೆರ್ರೋ ಎಂಬಾತನು ಎರಡು ಸಂಪುಟಗಳಲ್ಲಿ ಐವತ್ತು ಉಪನಿಷತ್ತುಗಳ ಲ್ಯಾಟಿನ್ ಅನುವಾದವನ್ನು ಪ್ರಕಟಿಸಿದ್ದು ಆಗ. ಅವನ ಅನುವಾದಕ್ಕೆ ಮೂಲ ದಾರಾ-ಶುಕೋವಿನ ಪರ್ಶಿಯನ್ ಅನುವಾದ; ೧೬೫೭ರ ಸುಮಾರಿಗೆ ಆದದ್ದು. ಇದರ ವಿಚಾರ ಆಗಲೇ ಬಂದಿದೆ. ದುಪೆರ್ರೋನನ ಲ್ಯಾಟಿನ್ ಅನುವಾದದಿಂದ ಫಾನ್-ಫ್ರಾನ್ಜ್ ಮಿಶಲ್ ಎಂಬುವನು ೧೮೮೨ರಲ್ಲಿ ಜರ್ಮನ್ ಭಾಷೆಗೆ ತರ್ಜುಮೆ ಮಾಡಿ ಉಪನಿಷತ್ತುಗಳನ್ನು ಪ್ರಕಟಿಸಿದನು.

ಇದಕ್ಕೆ ಮೊದಲೇ ೧೮೩೨ರಲ್ಲಿ ರಾಜಾ ರಾಮಮೋಹನರಾಯರು ಲಂಡನ್ನಿನಿಂದ ಇಂಗ್ಲೀಷ್ ಅನುವಾದವನ್ನು ಹೊರತಂದರು. ಇದರಲ್ಲಿ ಮುಂಡಕ, ಕೇನ, ಕಠ, ಈಶ ಉಪನಿಷತ್ತುಗಳು ಸೇರಿವೆ. ಅನಂತರ ರೋಯರ್ ಎಂಬ ಜರ್ಮನ್ ಪಂಡಿತ ಒಂಬತ್ತು ಉಪನಿಷತ್ತುಗಳ (ತೈತ್ತಿರೀಯ, ಐತರೇಯ, ಶ್ವೇತಾಶ್ವತರ, ಕೇನ, ಈಶ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ) ಇಂಗ್ಲೀಷ್ ಅನುವಾದವನ್ನು ಕಲ್ಕತ್ತೆಯಿಂದ ೧೮೫೩ರಲ್ಲಿ ಹೊರತಂದನು (ಬಿಬ್ಲಿಯೋತಿಕ ಇಂಡಿಕ ಮಾಲೆಯಲ್ಲಿ).

ಆದರೆ ವಿಶ್ವದ ಕುತೂಹಲವನ್ನು ಕೆರಳಿಸಿದ್ದು ಮ್ಯಾಕ್ಸ್‌ಮುಲ್ಲರ್ ಎಂಬ ಸುಪ್ರಸಿದ್ಧ ವಿದ್ವಾಂಸರು ೧೮೭೯-೧೮೮೪ರಲ್ಲಿ ಪ್ರಕಟಿಸಿದ ಇಂಗ್ಲೀಷ್ ಅನುವಾದ. ಇದು ಎರಡು ಸಂಪುಟಗಳಲ್ಲಿ ಸೇಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್ ಮಾಲೆಯಲ್ಲಿ ಹೊರಬಂದಿತು. ಎರಡು ಸಂಪುಟಗಳು ಒಂದು ಗ್ರಂಥವಾಗಿ ೧೮೯೭ರಲ್ಲಿ ನ್ಯೂಯಾರ್ಕಿನಿಂದ ಪ್ರಕಟವಾಯಿತು. ಇದಕ್ಕೆ ಅವತರಣಿಕೆಯಾಗಿ ಮ್ಯಾಕ್ಸ್‌ಮುಲ್ಲರ್ ಸುದೀರ್ಘವಾದ ವಿವೇಚನೆಯೊಂದನ್ನೂ ಸೇರಿಸಿದರು.

ತುಕಾರಾಮ ತಾತ್ಯಾ ಎಂಬ ನಮ್ಮ ವಿದ್ವಾಂಸರೊಬ್ಬರು ೧೮೯೧ರಲ್ಲಿ ಹನ್ನೆರಡು ಉಪನಿಷತ್ತುಗಳನ್ನು ಶಂಕರಾಚಾರ್ಯರ ಭಾಷ್ಯ ಮತ್ತು ಆನಂದಗಿರಿಯ ಟೀಕೆಗಳೊಂದಿಗೆ ಇಂಗ್ಲೀಷ್‌ನಲ್ಲಿ ಅನುವಾದ ಮಾಡಿ ಮುಂಬಯಿಯಿಂದ ಪ್ರಕಟಿಸಿದರು

(ಬಾಂಬೆ ಥಿಯಸಾಫಿಕಲ್ ಸೊಸೈಟಿ). ಇದರಲ್ಲಿ ರೋಯರ್ ಮಾಡಿದ್ದ ಹತ್ತು ಉಪನಿಷತ್ತುಗಳ ಅನುವಾದವನ್ನೂ ಮಿತ್ರ ಎಂಬುವರು ಮಾಡಿದ್ದ ಛಾಂದೋಗ್ಯದ ಅನುವಾದವನ್ನೂ ಕೊವೆಲ್ ಮಾಡಿದ್ದ ಕೌಷೀತಕಿಯ ಅನುವಾದವನ್ನೂ ಅವಲಂಬಿಸಿದರು.

೧೮೯೬ರಲ್ಲಿ ಚಾರ್ಲಸ್ ಜಾನ್‌ಸ್ಟನ್ ಕಠ, ಪ್ರಶ್ನ, ಛಾಂದೋಗ್ಯದ ಆರನೆಯ ಪ್ರಪಾಠಕ ಇವುಗಳ ಅನುವಾದವನ್ನು ಡಬ್ಲಿನ್ನಿನಿಂದ ಹೊರತಂದರು; ತುಂಬ ಸೊಗಸಾದ ಅನುವಾದ. ಉಪನಿಷತ್ತಿನ ಸ್ವಾರಸ್ಯವನ್ನು ಮನವರಿಕೆ ಮಾಡಿಕೊಂಡು ಈ ಕೆಲಸಕ್ಕೆ ಕೈ ಹಾಕಿರುವುದು ತಿಳಿಯುತ್ತದೆ.

ಜಿ.ಆರ್.ಎಸ್. ಮೀಡ್ ಮತ್ತು ಜಗದೀಶಚಂದ್ರ ಚಟ್ಟೋಪಾಧ್ಯಾಯ ಎಂಬಿಬ್ಬರು ಸೇರಿ ೧೮೯೬ರಲ್ಲಿ ಒಂಬತ್ತು ಉಪನಿಷತ್ತುಗಳ ಇಂಗ್ಲೀಷ್ ಅನುವಾದವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದರು (ಲಂಡನ್ನಿನ ಥಿಯಸಾಫಿಕಲ್ ಸೊಸೈಟಿ). ಈ ಅನುವಾದವನ್ನು ಮಾರ್ಕೊ ಎಂಬ ವಿದ್ವಾಂಸರು ಫ್ರೆಂಚ್‌ಭಾಷೆಗೆ ಅನುವಾದ ಮಾಡಿ ಪ್ಯಾರಿಸ್ಸಿನಿಂದ ೧೯೦೫ರಲ್ಲಿ ಹೊರತಂದರು. ಇದೇ ಡಚ್ ಅನುವಾದದಲ್ಲಿಯೂ ಮೂರು ವರ್ಷಗಳ ನಂತರ ಆಮ್ಸ್ಟರ್‌ಡ್ಯಾಮಿನಿಂದ ಬೆಳಕು ಕಂಡಿತು. ಇದನ್ನು ಮಾಡಿದಾಕೆ ಕ್ಲಾರಾ ಸ್ಟ್ರಾಯ್‌ಬೆಲ್. ಇದೂ ಎರಡು ಸಂಪುಟಗಳಲ್ಲಿದ್ದಿತು.

ಇನ್ನೊಂದು ಜಗದ್ವಿಖ್ಯಾತವಾದ ಅನುವಾದವೆಂದರೆ ಪಾಲ್ ದಾಯ್ಸನ್ ೧೮೯೭ರಲ್ಲಿ ಮಾಡಿದ ಜರ್ಮನ್ ಅನುವಾದ (ಲೈಪ್ಸಿಕ್‌ನಲ್ಲಿ ೯೪೬ ಪುಟಗಳ ಗ್ರಂಥವಾಗಿ ಪ್ರಕಟವಾಯಿತು). ಇದರಲ್ಲಿ ದುಪೆರ‍್ರೋನ್ ಅನುವಾದದಲ್ಲಿದ್ದ ಐವತ್ತು ಉಪನಿಷತ್ತುಗಳೂ ಸೇರಿದ್ದವು; ಮತ್ತೆ ಕೆಲವು ಅಥರ್ವಣೋಪನಿಷತ್ತುಗಳನ್ನೂ ಅನುವಾದ ಮಾಡಿದ್ದರು. ಇದಕ್ಕೆ ಮೊದಲೇ ದಾಯ್ಸನ್ ೧೮೮೩ರಲ್ಲಿ ಉಪನಿಷತ್ತುಗಳ ವಿವೇಚನೆಯನ್ನು ವೇದಾಂತದರ್ಶನವೆಂಬ ಹೆಸರಿನಿಂದ ಜರ್ಮನ್ ಭಾಷೆಯಲ್ಲಿ ಪ್ರಕಟಿಸಿದರು. ಇದನ್ನು ೧೯೧೨ರಲ್ಲಿ ಚಾರ್ಲಸ್ ಜಾನ್‌ಸ್ಟನ್ ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದರು.

೧೯೧೯ರಲ್ಲಿ ಅಲಹಾಬಾದ್ ಪಾಣಿನಿ ಆಫೀಸಿನಿಂದ ಶ್ರೀಶ ಚಂದ್ರ ವಿದ್ಯಾರ್ಣವ ಎಂಬುವರು ಆರು ಉಪನಿಷತ್ತುಗಳನ್ನು ಶಂಕರಾಚಾರ್ಯರ ಭಾಷ್ಯಗಳೊಂದಿಗೆ ಇಂಗ್ಲೀಷ್ ಭಾಷೆಯಲ್ಲಿ ಹೊರತಂದರು (ಸೇಕ್ರೆಡ್ ಬುಕ್ಸ್ ಆಫ್

ದಿ ಹಿಂದೂಸ್ ಮಾಲೆಯಲ್ಲಿ). ಅದೇ ವರ್ಷ ಸ್ವಾಮಿ ಪರಮಾನಂದರು ಈಶ, ಕೇನ, ಕಠ ಈ ಮೂರು ಉಪನಿಷತ್ತುಗಳನ್ನು ಇಂಗ್ಲೀಷ್ ಅನುವಾದದಲ್ಲಿ ಬೋಸ್ಟನ್ನಿನ ವೇದಾಂತ ಸೆಂಟರಿನಿಂದ ಪ್ರಕಟಿಸಿದರು.

೧೯೨೨ರಲ್ಲಿ ಟೋಕ್ಯೋ ನಗರದ ಸೆಕಯ್ ಬುಂಕೋ ಕಂಕೋ-ಕ್ವೈ ಎಂಬ ಸಂಸ್ಥೆ ಬ್ರಹ್ಮದರ್ಶನವೆಂಬ ಹೆಸರಿನಿಂದ ಒಂದು ನೂರು ಹದಿನಾರು ಉಪನಿಷತ್ತುಗಳ ಜಪಾನೀಭಾಷೆಯ ಅನುವಾದವನ್ನು ಹೊರತಂದಿತು; ಈ ಉದ್ಯಮದಲ್ಲಿ ಇಪ್ಪತ್ತೇಳು ಅನುವಾದಕರು ಭಾಗವಹಿಸಿದ್ದರು.

ಈ ವೇಳೆಗಾಗಲೆ ಉಪನಿಷತ್ತುಗಳನ್ನು ಕುರಿತಂತೆ ವಿಶ್ವದಾದ್ಯಂತ ಆಸಕ್ತಿಯು ಬೆಳೆದಿದ್ದಿತು. ಹೆನ್ರಿ ಥಾಮಸ್ ಕೋಲ್‌ಬ್ರೂಕ್ (ಇಂಗ್ಲೀಷ್, ೧೮೦೫), ತಡ್ಡಾಉಸ್ ಅನ್‌ಸೆಲ್ಮ್ ರಿಕ್ಸನರ್ (ಜರ್ಮನ್, ೧೮೦೮), ಲಂಜೂನೆ (ಫ್ರೆಂಚ್, ೧೮೩೨), ಹೆನ್ರಿ ಹುಗೊ ವಿಂಡಿಶ್‌ಮನ್ (ಲ್ಯಾಟಿನ್, ೧೮೩೩), ರಾಮಚಂದ್ರ ಬಸು (ಇಂಗ್ಲೀಷ್, ೧೮೮೪), ಆರ್ಚಿಬಾಲ್ಡ್ ಗೌ (ಇಂಗ್ಲೀಷ್ ೧೯೦೫), ಹರ್ಮಾನ್ ಓಲ್ಡೆನ್‌ಬರ್ಗ್ (ಜರ್ಮನ್, ಇಂಗ್ಲೀಷ್ ೧೮೮೨), ಅಗಾಸ್ತೆ ಬಾರ್ತ್ (ಫ್ರೆಂಚ್ ೧೮೯೧) ಮುಂತಾದವರ ಗ್ರಂಥಗಳು ಉಪನಿಷತ್ತುಗಳ ಸ್ವಾರಸ್ಯವನ್ನೂ ಮೌಲ್ಯವನ್ನೂ ಪರಿಚಯಮಾಡಿಕೊಟ್ಟಿದ್ದುವು.

ನಮ್ಮ ದೇಶದಲ್ಲಿ ಉಪನಿಷತ್ತುಗಳ ಪ್ರಚಾರಕ್ಕೆ ಶ್ರಮಿಸಿದವರಲ್ಲಿ ರಾಜಾ ರಾಮಮೋಹನರಾಯರೇ ಮೊದಲಿಗರು. ೧೮೧೬ರಷ್ಟು ಹಿಂದೆಯೇ ಈಶ, ಕೇನ, ಕಠ ಉಪನಿಷತ್ತುಗಳ ಇಂಗ್ಲೀಷ್ ಅನುವಾದವನ್ನು ಮಾಡಿ ತಮ್ಮ ಹಣದಿಂದಲೇ ಅಚ್ಚುಮಾಡಿಸಿ ಪ್ರಕಟಿಸಿದರು. ಮುಂದೆ ಜೀವಾನಂದ ವಿದ್ಯಾಸಾಗರರು ಆರು ಉಪನಿಷತ್ತುಗಳನ್ನು ಶಂಕರಭಾಷ್ಯ ಮತ್ತು ಆನಂದಗಿರಿಯ ಟೀಕೆಯೊಂದಿಗೆ ೧೮೭೩ರಲ್ಲಿ ಕಲ್ಕತ್ತೆಯಿಂದ ಹೊರತಂದರು. ಆಗಲೇ ರಾಜೇಂದ್ರಲಾಲ್ ಮಿತ್ರ ಎಂಬುವರು ಛಾಂದೋಗ್ಯವನ್ನು ಇಂಗ್ಲೀಷಿಗೆ ಅನುವಾದ ಮಾಡಿದ್ದರು (೧೮೬೨). ಮಹೇಶಚಂದ್ರಪಾಲರು ಒಂಬತ್ತು ಉಪನಿಷತ್ತುಗಳನ್ನು ಬಂಗಾಳಿ ಲಿಪಿಯಲ್ಲಿ ಅನುವಾದದೊಂದಿಗೆ ೧೮೮೧-೧೮೮೯ರ ಸುಮಾರಿನಲ್ಲಿ ಹೊರತಂದರು. ಹತ್ತು ಉಪನಿಷತ್ತುಗಳನ್ನು ತೆಲುಗು ಲಿಪಿಯಲ್ಲಿ ರಾಮಾನುಜದರ್ಶನಕ್ಕೆ ಅನುಸಾರಿಯಾದ ವ್ಯಾಖ್ಯಾನದೊಂದಿಗೆ ೧೮೭೫ರಲ್ಲಿ ಹೊರತರಲಾಯಿತು. ವೆಂಕಟ್ರಾವ್ ರಾಮಚಂದ್ರ ಎನ್ನುವವರು ಮರಾಠೀ ಅನುವಾದದೊಂದಿಗೆ ಉಪನಿಷತ್ತುಗಳನ್ನು ೧೮೮೫ರಲ್ಲಿ

ಪ್ರಕಟಿಸಿದರು. ಎಂ.ಬಿ. ಪಂತುಲು ತೈತ್ತಿರೀಯವನ್ನು ತೆಲುಗು ಭಾಷೆಗೂ (೧೮೮೯), ಆರ್.ಎಸ್. ವೆಂಕಟಕೃಷ್ಣಯ್ಯ ಅದೇ ಉಪನಿಷತ್ತನ್ನು ಕನ್ನಡ ಭಾಷೆಗೂ (೧೯೦೧) ಅನುವಾದ ಮಾಡಿದರು. ಶ್ರೀನಿವಾಸ ತಾತಾಚಾರ್ಯರು ಹತ್ತು ಉಪನಿಷತ್ತುಗಳನ್ನು ಗ್ರಂಥಾಕ್ಷರಗಳಲ್ಲಿ ಮುದ್ರಿಸಿ, ತಮಿಳು ಅನುವಾದದೊಂದಿಗೆ ಮದ್ರಾಸಿನಿಂದ ಹೊರತಂದರು. (೧೮೯೭). ಪೀತಾಂಬರ ಶರ್ಮರು ಬೃಹದಾರಣ್ಯಕವನ್ನು ಹಿಂದಿಗೆ ಅನುವಾದ ಮಾಡಿ ಮುಂಬಯಿಯ ನಿರ್ಣಯಸಾಗರ ಮುದ್ರಣಾಲಯದಿಂದ ಪ್ರಕಟಿಸಿದರು (೧೮೯೨). ಮಹೇಶಚಂದ್ರಪಾಲರು ಛಾಂದೋಗ್ಯವನ್ನು ಇಂಗ್ಲೀಷಿಗೆ ಅನುವಾದ ಮಾಡಿದರು (೧೮೮೫). ಗುರುದತ್ತರು ಈಶೋಪನಿಷತ್ತಿಗೆ ಇಂಗ್ಲೀಷ್ ಅನುವಾದವನ್ನು ಲಾಹೋರಿನಿಂದ ಹೊರತಂದರು (೧೮೮೮).

ಸುಪ್ರಸಿದ್ಧರಾದ ರಮೇಶಚಂದ್ರದತ್ತರು ಲಂಡನ್ನಿನಿಂದ (ಟ್ರುಬ್ನರ್) ಎಂಟು ಉಪನಿಷತ್ ಪ್ರಸಂಗಗಳನ್ನು ೧೮೯೪ರಲ್ಲಿ ಪದ್ಯಾನುವಾದ ಮಾಡಿ ಪ್ರಕಟಿಸಿದರು. ನಾಲ್ಕು ಉಪನಿಷತ್ತುಗಳನ್ನು ಉದ್ಧವಜಿ ರಣಛೋಡಜಿ ಮುಂಬಯಿಯಿಂದ ೧೮೯೬ರಲ್ಲಿ ಇಂಗ್ಲಿಷ್ ಅನುವಾದದೊಂದಿಗೆ ಮುದ್ರಿಸಿದರು. ಗಂಗಾನಾಥ ಝಾ ಮತ್ತು ಸೀತಾರಾಮಶಾಸ್ತ್ರಿಗಳು ಉಪನಿಷತ್ತುಗಳ ಮೂಲ ಮತ್ತು ಇಂಗ್ಲಿಷ್ ಅನುವಾದವನ್ನು ಐದು ಸಂಪುಟಗಳಲ್ಲಿ ೧೮೯೮-೧೯೦೧ರ ಸುಮಾರಿಗೆ ಹೊರತಂದರು. ಬ್ರಾಹ್ಮೊಸಮಾಜದ ಸೀತಾನಾಥ ತತ್ತ್ವಭೂಷಣರು ಹತ್ತು ಉಪನಿಷತ್ತುಗಳನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದರು (೧೯೦೦, ೧೯೦೪). ಲಾಲಾ ಶ್ರೀರಾಮರು 'ವಿಚಾರಸಾಗರ' ಎಂಬ ಹೆಸರಿಂದ ಉಪನಿಷತ್ತುಗಳ ದರ್ಶನವನ್ನು ಕಾಣಿಸಿದರು (ಕಲ್ಕತ್ತೆ ೧೮೮೫); ಇದೇ ಕೆಲಸವನ್ನು ದಲಪತರಾಯ್ ಎನ್ನುವವರೂ ಮಾಡಿದರು (ಲಾಹೋರ್, ೧೮೯೭).

ಈ ಮಹನೀಯರೆಲ್ಲರೂ ರಾಜಾ ರಾಮಮೋಹನರಾಯರ ಕೆಲಸದಿಂದಲೇ ಸ್ಫೂರ್ತಿಯನ್ನು ಪಡೆದುಕೊಂಡದ್ದು; ಆದರೆ ಸಂಪ್ರದಾಯದ ವಿಚಾರಧಾರೆಯೇ ತಲೆಯೆತ್ತಿಕೊಂಡಿತು. ಅದರಲ್ಲೂ ಶಂಕರಾಚಾರ್ಯರ ನಿಲುವು ಹೆಚ್ಚಾಗಿ ಪ್ರಚಾರಕ್ಕೆ ಬಂದಿತು. ೧೯೨೫ರ ತರುವಾಯ ಉಪನಿಷತ್ತುಗಳ ಅಧ್ಯಯನ, ಪ್ರಕಟಣೆ ವಿಶೇಷವಾಗಿಯೆ ನಡೆಯತೊಡಗಿದುವು.

~ ~ ~

The Prof S. K. Ramachandra Rao Memorial Trust ®.

OUR PUBLICATIONS.

English Books

1. The Three Acharyas	Rs. 40
2. The Teachings of the Buddha	Rs. 85
3. Temples: Icons and Rituals	Rs. 100
4. Jainism in South India	Rs. 85
5. Adhyatma Rasa Ranjani	Rs. 20
6. The Hill Shrine of Tirupati	Rs. 200
7. The Saint of Sringeri	Rs. 200
8. Writings on Samkara's Advaita	Rs. 300
9. The Development of Psychological Thought in India	Rs. 400
10. Social Institutions Among the Hindus and other writings	Rs. 200
11. The Essence of the Bhagavad Gita	Rs. 350
12. The Message of the Bhagavad Gita	Rs. 350
13. Writings on Buddhism	Rs. 200
14. The Origins of Indian Thought and other Writings	Rs. 350
15. The Indian Temple: Its Meaning	Rs. 350

16. Enlightenment of Ashtavakra

ಕನ್ನಡ ಪುಸ್ತಕಗಳು

೧. ಶ್ರೀ ರಾಘವೇಂದ್ರ ಸ್ವಾಮಿಗಳು

೨. ದಂಡಿಯ ಅವಂತಿಸುಂದರೀ

೩. ಬೋಧಿಯ ಬೆಳಕಿನಲ್ಲಿ–ಬುದ್ಧನ ಬಾಳು, ಬೆಳಕು

೪. ಶ್ರೀ ಪುರಂದರ ದಾಸರು

೫. ವೇದದಲ್ಲಿನ ಕಥೆಗಳು

೬. ಭಾರತದ ದೇವಾಲಯ–ನೆಲೆ, ಹಿನ್ನೆಲೆ

೭. ಶ್ರೀ ಶಾರದಾ ಪೀಠದ ಮಾಣಿಕ್ಯ

೮. ಪೂರ್ಣಪ್ರಜ್ಞ ಪ್ರಶಸ್ತಿ– ಮಧ್ವಾಚಾರ್ಯರ ಬಾಳು, ಬೆಳಕು

೯. ಶ್ರೀ ರಾಮಾನುಜ ದರ್ಶನ

೧೦. ಮೂರ್ತಿ ಶಿಲ್ಪ–ನೆಲೆ, ಹಿನ್ನೆಲೆ

೧೧. ಶಾಂತಳೆ–ನೃತ್ಯ ರೂಪಕ

೧೨. ಈಶಾವಾಸ್ಯ ಉಪನಿಷತ್ತು

೧೩. ಧರ್ಮ–ವೇದ–ವೇದಾಂತ